ಸೂಲ್ಲಾಪುರದ ವಾರದ ಸಂಸ್ಕೃತ ಪಾಠಶಾಲೆಯಲ್ಲಿ ಇದೇ ಪುಷ್ಯ ೪ ರವಿವಾರ ತಾ॥ ೪ ೧ ೫೩ ನೇ ದಿವಸ ಶ್ರೀ ಜ॥ ಉಜ್ಜಯಿನಿ ಸಿದ್ಧಲಿಂಗಶಿವಾಚಾರ್ಯರ ಪುಣ್ಯತಿಥಿಯು ಜರಿಗಿಸಲ್ಪಟ್ಟಿತು ಪ್ರಾತಃಕಾಲದಲ್ಲಿ ಶ್ರೀ ಜಗದ್ಗುರುಗಳ ಭಾವಚಿತ್ರಕ್ಕೆ ಶ್ರೀ ವಾರದ ಪಾಠಶಾಲೆಯ ವಿದ್ಯಾರ್ಥಿಗಳಿಂದ ವಿಧ್ಯುಕ್ತಪ್ರಕಾರವಾಗಿ ಪೂಜೆಯು ಮಾಡಲ್ಪಟ್ಟಿತು ಸಾಯಂಕಾಲ ೪॥ ಘಂಟೆಗೆ ಶ್ರೀ ವಾರದ ಪಾಠಶಾಲೆಯಲ್ಲಿ ಶ್ರೀ॥ ಷ॥ ಬ್ರ॥ ಹಿರೇಮಠ ಮುಳ್ಳೂರು ಗುರುಪಾದಶಿವಾಚಾರ್ಯ, ವಾರದ ಸಂಸ್ಕೃತ ಪಾಠಶಾಲಾಧ್ಯಾಪಕ ಇವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಶ್ರೀ ಚೆನ್ನವೀರಶರ್ಮ ಸರಸಂಬಿ, ಮಹಾದೇವಶರ್ಮ ತಾರಳೇಕರ, ಸಂಗನಬಸವರ್ಮ ವಿಜಾಪುರ, ರುದ್ರಮುನಿಸ್ವಾಮಿ ಕುದಿ, ವೀರಭದ್ರ ಶರ್ಮಾ ಉತ್ತುಲಿ, ಸಿದ್ಧರಾಮಶರ್ಮ ಚಿಂಚೂರು, ಜೆ ಡಿ ಜಂಗಮ, ಪುಲಶಂದ ಕಲ್ಯಾಣ, ವಿಲಾಸ ನಡವಳ ಇನರೇ ಮೊದಲಾದವರು ಶ್ರೀ ಜಗದ್ಗುರುಗಳ ತತ್ವಸಿದ್ಧಾಂತ ಪ್ರಭಾವ, ಕರ್ತವ್ಯಪ್ರಜ್ಞತೆ, ಸಮಾಜ ಸುಧಾರಣೆ ಮೊದಲಾದ ವಿಷಯಗಳನ್ನು ಒಳ್ಳೇ ಉತ್ತಮವಾಗಿ ಪ್ರತಿಪಾದಿಸಿದರು ನಂತರ ಅಧ್ಯಕ್ಷರು ಶ್ರೀ ಜಗದ್ಗುರುಗಳ ಅನೇಕ ಪವಾಡಗಳನ್ನೂ ಮತ್ತು ಅವರ ಲೀಲೆಗಳನ್ನೂ ಹೇಳಿ ವಿಷಗಳ ಅಪಕ್ವತ್ವ, ಯಾವ ರೀತಿಯಾಗಿ ವಿಷಾಂಶವಿದರೆಯುವವರೆಗೆ ಹೇಳಿ ಸಭಿಕರಿಗೆ ಅವಂದಗೊಳಿಸಿದರು ಶಾಂತಿಪಾಠವಾಗಿ ಸಭೆಯು ವಿಸರ್ಜನೆಯನ್ನು ಹೊಂದಿತು

ಸೆಕ್ರೆಟರಿ ವಾ ಸಂ ಪಾಠಶಾಲಾ

ಪುಣ್ಯತಿಥಿಮಹೋತ್ಸವ ಲಕ್ಷ್ಮೇಶ್ವರ

ದಿನಾಂಕ ೪-೧-೫೩ ನೇ ರವಿವಾರ ದಿವಸ ಧಾರವಾಡ ಜಿಲ್ಲಾ ಲಕ್ಷ್ಮೇಶ್ವರ ಗ್ರಾಮದ ಶ್ರೀ ಗಂಗಪ್ಪನವರು ಹೂವಿನ ಇವರ ಗೃಹದಲ್ಲಿ ಶ್ರೀ ಜಗದ್ಗುರು ಅಭಿನವ ರೇಣುಕ ವಾಚಸ್ಪತಿಗಳ ೪ ನೆಯತಿಂದ ವೇ॥ ತಿಕೇಶ್ವ ಶಾಸ್ತ್ರಿಜಿ ಹಿರೇಮಠ ಇವರ ನೈದಿಕತ್ವದಲ್ಲಿ ಶ್ರೀಮದ್ಗೀರವೈವ ಮಹಾಮತಸ್ಥಾಪನಾಚಾರ್ಯ ಪಂಚಾಚಾರ್ಯ ಭಗವತ್ಪಾದರ ಪಂಚಮಮಹಾಪೀಠಗಳಲ್ಲಿ ಒಂದಾದ ಶ್ರೀ ಕಡ್ಡಮೇಸಿಂಹಾಸನಾಧೀಶ್ವರ ಮಾಲಿಕೆಯಲ್ಲಿದ್ದ ಶ್ರೀ ೧೦೦೮ ಜಗದ್ಗುರು ಸಿದ್ಧಲಿಂಗತಿವಾಚಾರ್ಯ ಭಗವತ್ಪಾದರ ೧೬ ನೇ ವರ್ಷದ ಪುಣ್ಯತಿದಿಮಹೋತ್ಸವವು ಅತಿ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು ತದಂಗಭೂತವಾಗಿ ಶ್ರೀ ಜಗದ್ಗುರು ಕೇದಾರಿಪೀಠಾಚಾರ್ಯರ ಸರ್ವೀಟೆನ್ಸ ಸಂಜಾಲಕರಾದ ಪಂ॥ ವೇ॥ ಬ್ರಹ್ಮಶ್ರೀ ಕೈಲಾಸಲಿಂಗತಿವಾಚಾರ್ಯ ಮಹಾಸ್ವಾಮಿಗಳವರ ಮಹಾಪಾದಪೂಜೆಯು ಶ್ರೀ ಗಣಾರಾಧನೆಯು, ಭೂದಿಪ್ರದಕ್ಷಿಣೆಯು ನೆರವೇರಿಸಲ್ಪಟ್ಟವು ನಂತರ ೩-೪ ದಿವಸಗಳ ವರೆಗೆ ರಾತ್ರಿ ೯॥ ಯಿಂದ ೧೧॥ ಯ ವರೆಗೆ ಶ್ರೀ ಮೈಲಾರಲಿಂಗನ ಜೀವಸ್ಪಾನದಲ್ಲಿ ಶ್ರೀ ವಾರೀತೀ ತಾಯಿ ಒಳಗದವರ ವತಿಯಿಂದ ಶ್ರೀ ಜಗದ್ಗುರು ಕೇದಾರ ಪೀಠಾಚಾರ್ಯರ ಸದ್ಭರ್ಮೋಪದೇಶವು ಶ್ರೀ ಶಿವ, ರುದ್ರ, ಮಹಾದೇವ ಲಿಂಗ, ಶ್ರೀ ಮಹಾಪಾದ ಪೂಜೆಯ ಮಹಿಮೆಯನ್ನು ಶ್ರೀ ಮಹಾಸನ್ನಿಧಿಯವರು ಬೋಧಿಸಿದರು ನಂತರ ಶ್ರೀ ಜಗದಾಚಾರ್ಯ ಪಂಚಾಚಾರ್ಯರ ಮಂಗಲ ಜಯಘೋಷನದೊತನೆ ಕಾರ್ಯಕ್ರಮಗಳು ಕೊನೆಗೊಂಡವು ಶ್ರೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾರಾಜಕೀ ಜೈ

ಆರ್ ಹೆಚ್ ವೀರಭದ್ರಯ್ಯಸ್ವಾಮಿ

ಶ್ರೀ ವೀರಭದ್ರದೇವರ ರಥೋತ್ಸವ ಮನ್ನೇರಿಮಸಲ್ವಾಡ

ಬಳ್ಳಾರಿ ಡಿ॥ ಹರಪನಹಳ್ಳಿ ತಾಲ್ಲೂಕ ಮನ್ನೇರಿ ಮುಸಲ್ವಾಡ ಗ್ರಾಮದಲ್ಲಿ ತಾರೀಖು ೨೭-೧-೫೩ ನೇ ಮಂಗಳವಾರ ಶ್ರೀ ವೀರಭದ್ರದೇವರ ರಥೋತ್ಸವವು ೨೬ ೧-೫೩ ನೇ ಸೋಮವಾರ ರಾತ್ರಿ ಕಾರ್ತೀಕೋತ್ಸವವು ಒಳ್ಳೇ ವಿಜೃಂಭಣೆಯಿಂದ ನೆಡೆಯುತ್ತಿದ್ದು ಕೆಳಕಂಡ ಭಾಷೆಗಳಲ್ಲಿ ಉಗ್ರಾಣಿ ಸ್ವಾಮಿಯ ಪರ್ಚಕ ಅಚೀರ್ವಾದಗಳೇಂದ ನಂತುತ್ಪಡಾಗಲೆಂದು ಹಾರೈಸುವ,

ಬಸಪ್ಪಯ್ಯಪ್ರಭೃತಿಗಳು.

ಕ್ಯಾಲೆಂಡರ್ ಸ್ವೀಕಾರ

ಮದರಾಸಿನ ಪಾರ್ಟ್ ಕಂಪೆನಿಯವರೂ, ನೆಲ್ಸ್ ಕಂಪೆನಿಯವರೂ ಮತ್ತು ಕೊಂಗಳಾರು ಫ್ಯೂಜ್ ಫೌಂಡ್ರಿಯವರೂ ಕಳುಹಿಸಿರುವ ೧೯೫೩ ನೇ ಇಸವಿ ಕ್ಯಾಲೆಂಡರುಗಳನ್ನು ಆದರಿಂದ ಸ್ವೀಕರಿಸಿದ್ದೇವೆ.

ಪಂಚಾಚಾರ್ಯಪ್ರಭಾ

೧೯೫೩ ನೆಯ ಜನವರಿ ತಾ|| ೧೯ ನೇ ಸೋಮವಾರ

ಲಿಂಗಪೂಜೆಗೆ ಸೂತಕದೋಷವಿಲ್ಲ

ಪೌಂಡರೀಕ ಮುಂತಾದ ದೀರ್ಘಕಾಲದ ಯಾಗಗಳನ್ನು ಮಾಡುವುದಕ್ಕಾಗಿ ದೀಕ್ಷೆಯನ್ನು ವಹಿಸಿ ಧರ್ಮಪತ್ನಿಯುಕ್ತನಾಗಿ ಯಜ್ಞಾರಂಭವನ್ನು ಮಾಡಿದ ಕಾಲದಲ್ಲಿ ಅಂಥ ಯಜ್ಞಕರ್ತನ ಧರ್ಮಪತ್ನಿಗೆ ರಜಸ್ಸಲಾದಿ ಸೂತಕಗಳು ಒದಗಿದರೂ ಪ್ರಾರಂಭಿಸಿದ ಯಜ್ಞಕಾರ್ಯವನ್ನು ನಿಲ್ಲಿಸಲು ಅವಕಾಶವಿಲ್ಲದಿರುವಂತೆ, ದೀಕ್ಷಾನ್ವಿತೆಯಂತೆ ವೀರಶೈವಸ್ತ್ರೀಯರು ಯಾವ ಜ್ಞೇವಳು ಇಷ್ಟಲಿಂಗಾರಾಧನೆಯೆಂಬ ಮಹಾಯಾಗವನ್ನು ಆರಂಭವಾಡಿದ ಮೇಲೆ ಮಧ್ಯಕಾಲದಲ್ಲಿ ರಜಸ್ಸಲಾದಿದ್ಯಾತೆಗಳು ಒದಗಿದರೂ ಲಿಂಗಪೂಜೆಯನ್ನು ಬಿಡಲಿಕ್ಕೆ ಬರುವುದಿಲ್ಲ

ಶೈಕ್ಷಲಿಂಗ್ಯಕಪೂಜಾಯಾಂ ನೈವಾಶೌಚಂ ವಿಧೀಯತೇ
ಪೌಂಡರೀಕೇ ರಜಃಸ್ಪ್ರಾಣಂ ಸ್ಪಾ ಪ್ರಾಪೈವೇಶ್ಯೇ ಯಥಾ ತಥಾ ॥

ಇತ್ಯಾದಿ ಶಿವಾಗಮೋಕ್ತಿಗಳು. ಈ ವಿಷಯದಲ್ಲಿ ವಿಶೇಷವಾಗಿ ಸ್ಮರ್ತವಿಷಯವು ಇದಲ್ಲವೆ ಯಜನಾನನು ತನ್ನ ಕರ್ತವ್ಯವನ್ನು " ಇಷ್ಯವಾ- ಭವೇತ್ಸೆನ್ಯ " ಎಂಬುಕ್ತಿಯಂತೆ ಎಂಟು ವರ್ಷದ ಮೇಲೆ ಜುಮುತಿ ಯಾಗುವುದರೊಳಗಾಗಿ ಮದುವೆಯನ್ನು ಮಾಡಬೇಕಷ್ಟೆ ! ಜುಮುತಿಯಾದಮೇಲೆ ವಿವಾಸಮಾಡುವುದು ದೋಷಾವಹವಾದುದೆಂದು ಧರ್ಮಶಾಸ್ತ್ರವಿದ್ದರೂ, ಕನ್ಯೆಯಕಡೆಯು ಬಡವರಾಗುದರಿಂದಲೋ ಅಥವಾ ಇನ್ನಾವ ವ್ರತಬಂಧಕದಿಂದಲೋ ಹನ್ನೆರಡು ವರ್ಷಗಳವರೆಗೂ ಮದುವೆಯನ್ನು ಮಾಡದೆ ಉಳಿಸಿಕೊಂಡ ನಾಗಿದ್ದು ರಜಸ್ವಲೆಯಾಗುವ ಸಮಯದಲ್ಲಿ ವಿವಾಹ ವನ್ನು ಮಾಡಬೇಕಾದ ಸಂದರ್ಭವೂದಗಿ ಸಾಂಗಲ್ಯ ಧಾರಣಾದಿ ಕಾರ್ಯಗಳೆಲ್ಲವೂ ಮುಗಿದಮೇಲೆ ಆ ಕನ್ಯೆಯು ಜುಮುತಿಯಾದಳೆಂದು ತಿಳಿದುಬಂದರೆ—

ವಿವಾಹೇ ವಿತತೇ ತಂತ್ರೇ ಹೋಮಕಾಲ ಉಪಸ್ಥಿತೇ
ಅನ್ಯಮೃತುಮತೀಂ ದೃಷ್ಟ್ವಾ ಕಥಂ ಕುರ್ಯಾಂ ಕ್ರಿಯಾಮಿಮಾಂ ॥

ಎಂಬ ಉಕ್ತಿಯಂತೆ ಯಜ್ಞಕರ್ತನು ವಿವಾಹಾಂಗ ಭೂತವಾದ ಹೋಮವನ್ನು ಮಾಡದೇಹೋಗ ಅವನಾ ಬಿಡಬೇಕೋ ಎಂದು ಅಕ್ಷೇಪವುಂಟಾಗಲಾಗಿ, ಮತಿ ಮತಿಯಾದ ಆ ಕನ್ಯೆಯನ್ನು—

ಹವಿಷ್ಮತೀರಿಮಾ ಆಪೋ ಹವಿಷ್ಮಾ ದೇವ್ಯಾ ಅಧ್ವರಃ ।

ಎಂಬ ಮಂತ್ರದಿಂದ ಸ್ನಾನಮಾಡಿಸಿ ಶುದ್ಧವಸ್ತ್ರ ಗಳಿಂದಲಂಕರಿಸಿ,

" ಯೊಂಜಾನಃ ಪ್ರಥಮಂ ಮನಸಃ '

ಎಂಬ ಮಂತ್ರದಿಂದ ವರಾಭಿವರ್ತಿ ಆಹುತಿಯನ್ನು ಕೊಡಿಸಬೇಕೆಂದು ಭಟ್ಟೀಯ ವಿವಾಹಮಂಡದಲ್ಲಿ ನಿರ್ಣೀತವಾಗಿದೆ ಇದರಿಂದ ವಿವಾಹದೀಕ್ಷೆಯನ್ನು ಹೊಂದಿದವರಿಗೆ ಮಧ್ಯಕಾಲದಲ್ಲಿ ಒದಗಿದ ರಜಸ್ವಲಾ ವ್ಯಾಪತ್ತಿದೋಷಗಳಲ್ಲಲ್ಲವೆಂದು ಸ್ಪಷ್ಟವಾಗುತ್ತದೆ

ಪ್ರಾರಂಭೋ ವರಣಂ ಯಜ್ಞೆ ಸಂಕಲ್ಪೋ ವ್ರತಸಮ್ಮತಯೋಃ ।
ಸಾಂಗೀಕಾರಮಿಹ ವಿವಾಹಾಶಾ ಶಾಸ್ತ್ರೇ ಪಾಕಪರಿಗ್ರಹಃ ॥

ಇತ್ಯಾದಿ ಧರ್ಮಶಾಸ್ತ್ರವಾಕ್ಯಗಳ ಆಧಾರದಿಂದ ಗೃಹಯಜ್ಞಾದಿಗಳನ್ನು ಮಾಡುವಾಗ ಯಜ್ಞಿಜರನ್ನು ವರಿಸುವುದೇ ಪ್ರಾರಂಭವು ಚಾಂದ್ರಾಯಣ, ತೀರ್ಥ ಯಾತ್ರೆ, ಲಿಂಗಧಾರಣ, ಲಿಂಗಪೂಜಾದಿವ್ರತಗಳಲ್ಲಿಯೂ, ಪೌಂಡರೀಕಾದಿರ್ಯಜ್ಞಗಳಲ್ಲಿಯೂ ಸಂಕಲ್ಪವೇ ಪ್ರಾರಂಭವು. ಮದುವೆ ಮುಂತಾದ ಕರ್ಮಗಳನ್ನು ಪಡೆಯುವಲ್ಲಿ ಸಾಂದೀಮುಖವೇ ಪ್ರಾರಂಭವು. ಶ್ರಾದ್ಧ ಕರ್ಮದಲ್ಲಿ ಪಾಕಪರಿಗ್ರಹವೇ ಪ್ರಾರಂಭವು. ಹೀಗೆ ಆಯಾಯ ಕರ್ಮಗಳನ್ನು ಪ್ರಾರಂಭಿಸಿದ ಮೇಲೆ ಅಶೌಚಗಳು ಬಂದರೂ ತಾವು ಪ್ರಾರಂಭಿಸಿದ ಆಯಾಯ ಗೃಹಯಜ್ಞಾದಿಕರ್ಮಗಳನ್ನಾಗಲಿ, ಚಾಂದ್ರಾಯಣ, ಲಿಂಗಧಾರಣ, ಲಿಂಗಪೂಜಾದಿವ್ರತಗಳನ್ನಾಗಲಿ, ಶ್ರಾದ್ಧಾದಿಗಳನ್ನಾಗಲಿ ಬಿಡಲಾಗದು. ಹೀಗೆ ಧರ್ಮಶಾಸ್ತ್ರಗಳು ಅಶೀಚಸಂದರ್ಭಗಳಲ್ಲಿ ಸೂತಕಗಳಿಗೆ ಅಲ್ಲಲ್ಲಿ ಸಂಕೋಚ ಮಾಡಲ್ಪಟ್ಟಿರುವುದನ್ನು ಬಹಳವಾಗಿ ನೋಡುತ್ತಲಿ ದ್ದೇವೆ ಆದುದರಿಂದ—

ತನುತ್ಯಜನಕಾಲಾದಿಮಲಲಕ್ಷಯಮಸ್ಸಾ ಗುರುಃ ।
ದೀಕ್ಷಾ ಸ್ಯಾಂಗೇಣ ನಿರ್ವಾಣ್ಣಾ ಲಿಂಗತ್ವಯಮುಖಾದಿಶತ್ ॥

ಎಂಬ ಲಿಂಗಪುರಾಣಸ್ಮರಣಾಬಲದಿಂದ ಗುರುವು ಸ್ಥೂಲಸೂಕ್ಷ್ಮಕಾರಣಶರೀರಗಳಲ್ಲಿರುವ ಕಾರ್ಮಿಕ ಮಾಯೀಯ ಆಣವಮಲಗಳನ್ನು ವೇಧಾ, ಕ್ರಿಯಾ, ಮನು ಎಂಬ ಮೂರು ದೀಕ್ಷೆಗಳಿಂದ ನಾಶಗೊಳಿಸಿ ಇಷ್ಟ ಪ್ರಾಣ, ಭಾವ ಎಂಬ ಮೂರು ಲಿಂಗಗಳನ್ನು ಧಾರಣಮಾಡಿ,

ಯಾವಜ್ಜೀವಮನುದೇಂ ಲಿಂಗಂ ಶರೀರಾನ್ಸ ವಿಯೋಜಯ ।
ನಸ್ಯಂ ಸ್ವಪಾಮಯಸ್ಯಾಗ್ರೇ ಸಾವಧಾನೇನ ಪೂಜಯ ॥

ಅಯ್ಯಾ ಏಷ್ಯೊತ್ತಾಮನೆಗೆ ? ಈ ಇಷ್ಟಲಿಂಗವನ್ನು ನಿನ್ನ ಶರೀರವಿರುವವರೆಗೂ ಆಗಲಿರಬೇಡ, ಪ್ರತಿ ನಿತ್ಯವೂ ಸ್ನಾನದಿಂದ ಪರಿಶುದ್ಧನಾಗಿ ನಿನ್ನ ಎಡಹಸ್ತ ದಲ್ಲಿರಿಸಿ ಸಾವಧಾನದಿಂದ ಪೂಜಿಸು, ಎಂದು ಬಲವಾದ ಶಪಥಜ್ಞೆಯನ್ನಿತ್ತರುತ್ತಾನೆ

ಲಿಂಗಧಾರಣಕಾಲಾನಾಮಪಿ ಸೂತಕೇಶ್ವರಾಧಿದಂ ।
ನಾಪಜ್ಞೇಷಸಮಂ ದತ್ತಾಮಿಷ್ಟಲಿಂಗಸ ಸಮರ್ಚಕಃ ॥

ಎಂದು ಸ್ಕಾಂದಾದಿಪುರಾಣಗಳೂ ಸಹ ಇದೇ ಅರ್ಥವನ್ನು ವಿಶೇಷವಾಗಿ ಅನುವಾದಮಾಡುತ್ತಿರಲಿವೆ ಮತ್ತು ರೇಣುಕಭಗವತ್ಪಾದಾಚಾರ್ಯರು ಲಿಂಗಧಾರಣ ಸ್ಥಲದಲ್ಲಿ ಗುರುವು ಶಿಷ್ಯನನ್ನು ತಿರದೀಕ್ಷೆಯಿಂದ ಸಂಸ್ಕರಿಸಿ ಆ ಶಿಷ್ಯನ ಪ್ರಾಣವನ್ನು ಲಿಂಗದಲ್ಲಿ ಸಂಯೋಜಿಸಿ ಆ ಲಿಂಗವನ್ನು ಪ್ರಾಣದಲ್ಲಿ ಸಂಯೋಜಿಸಿ ಶಿವಲಿಂಗ ವನ್ನು ಅನುಗ್ರಹಿಸಿ ಯಾವಜ್ಜೀವವೂ ಅಂಗದಿಂದ ಶಿವ ಲಿಂಗವಿಯೋಗವಾಗದಿರಲೆಂದೂ ಪ್ರತಿದಿವಸವೂ ಪೂಜಿ ಸುತ್ತಿರಲೆಂದೂ ಪ್ರಮಾಣದಿಂದ ಇಂದ ಶಿವಲಿಂಗವು ಅಂಗದಿಂದ ಆಗಲುವುದಾದರೆ ತನ್ನ ಪ್ರಾಣವನ್ನು ಬಿಡಲು ಸಿದ್ಧನಾಗಿರಬೇಕೆಂದೂ ಆಗಸ್ತ್ಯರಿಗೆ ಬೋಧಿ ಸಿರುತ್ತಾರೆ

ಶಿಷ್ಯಸ್ಯ ಪ್ರಾಣಸಮಾಪಾಯ ಲಿಂಗೇ ತತ್ರ ನಿಧಾಪಯೇತ್ ।
ತಲ್ಲಿಂಗಂ ತತ್ಕೃ ತ ಪ್ರಾಣೇ ಸ್ಯಾಪಯೇಲ್ಲಕಥಾಪಕಃ ॥
ಏವಂ ಕೃತ್ವಾ ಗುರುರ್ಲಿಂಗಂ ಶಿಷ್ಯಹಸ್ತೇ ನಿಧಾಪಯೇತ್ ।
ಪ್ರಾಣಾಪ್ರಾಣಾಧಿನೇಯಂ ಹಿ ಪ್ರಾಣಲಿಂಗಮಿದಂ ತವ ।
ಕದಾಚಿತ್ಕುತ್ರಚಿದಾಪಿ ನ ವಿಯೋಜ್ಯಮಿದಂ ದೇಹಾತ ।
ಯದಿ ಪ್ರಮಾದಾತ್ಕೃತಿತೇ ಲಿಂಗೇ ವೇಹಾನ್ಮೃತೋಽಸಲೇ ।
ಪ್ರಾಣಾನ್ಪಿಮುಂಚೆ ಸಮಾ ಸ್ಪಾಸ್ಯೇ ಮೋಕ್ಷಕಂಪದಃ ।

ಆದ್ದರಿಂದ ದೀಕ್ಷಾಸಂಸ್ಕೃತನಾದ ವೀರಶೈವನಿಗೆ ಲಿಂಗಪೂಜಾದಿಗಳೇ ಯಾವಜ್ಜೀವವೂ ಮಾಡಬೇಕಾದ ಮುಖ್ಯಕರ್ತವ್ಯಗಳಾದುದರಿಂದ ಮಧ್ಯಕಾಲದಲ್ಲಿ ಜಾತಾ ಶೌಚವ್ಯತಾಪಾದಿ ಸೂತಕಗಳು ಸಂಭಂಧದಿಂದ ಗುರುಕೃತದೀಕ್ಷಾಸಂಸ್ಕಾರವು ನಷ್ಟವಾಗದೆ ಎಂದಿನಂತೆ ಸ್ಥಾಯಿಯಾಗಿಯೇ ಇರುವುದರಿಂದ ಆ ಸಂಚಿತಮಹಾ ಸೂತಕಗಳು ಮಹಾವ್ರತನಿಷ್ಠನಿಷ್ಠಿತ ಲಿಂಗಧಾರಣ ಪೂಜಾ ದಿಗಳನ್ನು ಸುಕರಾಂ ನಿರ್ವೇಹಿಸುವುದಿಲ್ಲವು.

ಗುರುವರ್ಗದ ಮುಮ್ಮಿ ಗುರಿಯೇನು ?

ವೀರಶೈವ ಮತಸಾಮ್ರಾಜ್ಯದ ಮೇಲೆ ಕವಿದು ಕೊಂಡು ಬಂದ ವಿಪತ್ಪರಂಪರೆಯ ತೊಡಕನ್ನು ಬಿಡಿ ಸಲು ಗುರುವರ್ಗವು ಜಾಗೃತವಾದೊಡನೆಯೇ ಇದ್ದಕ್ಕೆ " ಗುರುವರ್ಗದವರ ಚಳವಳಿ " ಎಂಬ ಹೆಸರು ಬಂದಿತು. ಅಖಿಲವೀರಶೈವ ಜನಾಂಗವು ಮೊದಲು ಸ್ವಧರ್ಮ ಜ್ಞಾನಶೂನ್ಯವಾಗಿ ನಾನಾವಿಧವಾಗಿ ನೆರಳತೊಡಗಿತ್ತು; ವೀರಶೈವತಿರೋಧಕ್ಕೆ ಪ್ರಾಯವಾದ ಗುರುವರ್ಗವು ತನ್ನ ಭಕ್ತಕೋಟಿಗೆ ಬಂದ ಕ್ಷೇಣಾಧಿಕ್ಯವನ್ನು ವಿಮರ್ಶಿಸುವ ಶಕ್ತಿಯು ಕೊಸ್ಪವಾಗಲಾರಂಭಿಸಿದಾಗ ಪರಿವಾಪ್ತಗ್ರಹ ದಿಂದ ಮತೋದ್ಧಾರಕವಾದ ಈ ಚಳವಳಿಯಲ್ಲಿ ಮುಖ್ಯಾಗ ಪಾತ್ರವನ್ನು ವಹಿಸಿದ ನಾಗನೂರು ಪೂ|| ಶ್ರೀಶಾಂತಾನಾಥ ಶಾಸ್ತ್ರಿಗಳವರು ವೀರಶೈವಮತಕ್ಕೆ ಮಾಡಿದ ಮಹೋಪಕಾರದ ಅಖಿಲ ಪ್ರಪಂಚನೇ ಈ ಮತದ ಭಕ್ತಕೋಟಿಯಷ್ಟು ಕಷ್ಟಾಂಬ ನೋಡತೊಡಗಿತು. ಪರಮಾತ್ಮ ಕರಿರೋಮಚರ್ಮಗಳಾದ ಭಾರತೀಯರಿಗೆ ಮೂಲಧಾರಗಳಾದ ವೇದಾಗಮಗಳಲ್ಲಿ ಪ್ರಜ್ವಲಿಕವಾಗಿ ಪ್ರತಿಷ್ಠಾಪಿಸುತ್ತಿರುವ ವೀರಶೈವಮತದ ಸ್ವಾತಂತ್ರ್ಯವನ್ನೂ ರಿಯದ ಕೆಲವು ' ಅಂಂಡಾ 'ಗಳು ಬಡಬಡಿಕೆಯಿಂದ ವೈದಿಕವಿರೋಧ ಮಾರ್ಗಗಾಮಿ ಗಳಾಗಿರುವೆಸ್ಪೆ ! ವೈದಿಕವಾಜ್ಯಮವಿಕಾರದಾದ ಗುರು ವರ್ಗದವರು ವೀರಶೈವಮತಪ್ರಾಂತಾರಕ್ಕ ಹಾರವನ್ನು ಪೂಜ್ಯಳಾದ ವೇದಮಾತೆಯು ಧರಿಸಿಕೊಂಡಿರುವದನ್ನು ಪ್ರಪಂಚಕ್ಕೆ ತೋರಿಸಿದರು. ಗೀರ್ವಾಣಭಾಷೆಯ ಸಹಾ ಯವಿಲ್ಲದ ಮಂದಮತಿಗಳೂ ವೇದಾಗಮಸಾಗರದಲ್ಲಿ ಹೋಗದ ಹೇಡಿಗಳೂ ಅನೈದಿಕವಿಚಾರ ಪ್ರವಾಹಕ್ಕೆ ಶಿಕ್ಕು ' ಕೂದ್ರ ಅತಿಕೂದ್ರ ' ಎಂಬ ಅವಹೇಳನಮತಿಗೆ ಗುರಿಯಾಗತೊಡಗಿದರು ಈ ಮಂದಮತಿಗಳಾದ ಮಂಗ ಗಳ ಪಾಲಿಗೆ ಬಂದ ದುರಭಾವವು ಇಡೀ ವೀರಶೈವ ಮತಕ್ಕೆ ಭಾರದಂತೆ ಮಾಡುವುದೇ ಈ ಗುರುವರ್ಗದ ಚಳವಳಿಯ ಮುಖ್ಯಉದ್ದೇಶವೆಂದು ಹೇಳಬೇಕಾ ಗಿದೆ ಪರಮತೀಯರು " ವೀರಶೈವರಲ್ಲಿ ಸಂಸಾತನವೈದಿಕ ಪಂಥದವರೂ ಅವೈದಿಕಸಾಂಕರ್ಯಪಂಥದವರೂ ಬೇರೆ ಬೇರೆಯಾಗಿರುವರು " ಎಂಬ ಅಭಿಪ್ರಾಯವನ್ನು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಒಟ್ಟಿನ ಮೇಲೆ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಹೂಡಿದ ಧರ್ಮ ಗುರು ವರ್ಗದ ಚಳವಳಿಯಿಂದ ವೀರಶೈವಮತದ ನಿಜ ಸ್ವರೂಪವು ಪ್ರಕಾಶಕ್ಕೆ ಬಂದಿತು ಈ ಚಳವಳಿಯ ಮುಖ್ಯಗುರಿಯು ಸಚ್ಚಿಸಂಪೋಧನೆದ ಕಡೆಗಿದ್ದುದರಿಂದ ಸರ್ವಜನಸಮ್ಮತವಾಗುವ ಯೋಗವು ಬರತೊಡಗಿತು. ಶುದ್ಧಸಂಪ್ರದಾಯದ ವೀರಶೈವಮಹಾಜನಗಳಂತೂ ಗುರುವರ್ಗದವರ ನಿಜತತ್ತ್ವಪ್ರಚಾರಕಾರ್ಯಕ್ಕೆ ಅತ್ಯಾ ನಂದದಿಂದ ಸಹಾಯಕರೂ ಜಾಲಕರೂ ಆಗಿ ವೀರಶೈವ ಮತೋದ್ಧಾರ ಕಾರ್ಯಭಾಗಿಗಳಾದರು ವೀರಶೈವ ಪಂಡಿತವರ್ಗವು ಈ ಮತೋದ್ಧಾರಕಾರ್ಯದಲ್ಲಿ ನಿರತ ವಾಯಿತು ಸಾಮಾನ್ಯವಾಗಿ ಸಾಸ್ಪಶಕ್ತಿಸ್ಥಳದಲ್ಲಿ ಕಾಲ ಈಡಿದ ಕೆಲಜನರು ವಿರೋಧಿಸತೊಡಗಿದ್ದಂದಲೇ ಗುರು ವರ್ಗದ ಚಳವಳಿಯು ಮೂರ್ತಸ್ವರೂಪವನ್ನು ಧರಿಸಿತು. ಗುರುವರ್ಗದವರಿಂದ ವೀರಶೈವಮತದಮೇಲೆ ಆಗಿರುವ ಮಹೋಪಕಾರದ ಋಣ ಭಾರವನ್ನು ಭಕ್ತಕೋಟಿಯು ಗುರುಭಕ್ತಿರೂಪವನ್ನಪ್ಪಿಸಿ ಕೃತಾರ್ಥವಾಗಲೆಂದು ಕೋರುವ,

ಗುರುವರ್ಗಾಭಿಮಾನಿ.

ವರ್ತಮಾನಸಂಗ್ರಹ

ಆಂಧ್ರದ ರಾಜಧಾನಿ ತಾತ್ಕಾಲಿಕವಾಗಿ ಮದರಾಸಿನಲ್ಲೇ ಇರಲಿ

ಮದರಾಸು ಪ್ರಾಂತದ ಒಂಬತ್ತು ಮಂದಿ ಸಚಿವರು ಪ್ರತ್ಯೇಕವಾಗಿ ನ್ಯಾಯಮೂರ್ತಿ ಶ್ರೀ ವಾಂಚೂರಿವ ರೆನ್ನೂ ಕಂಡು ಆಂಧ್ರಪ್ರಾಂತ್ಯದ ಬಗ್ಗೆ ತಮ್ಮ ಅಭಿಪ್ರಾ ಯವನ್ನು ವ್ಯಕ್ತಗೊಳಿಸಿದರು.

ತಾತ್ಕಾಲಿಕವಾಗಿ ಆಂಧ್ರದ ರಾಜಧಾನಿಯನ್ನು ಸ್ಥಾಪಿಸುವ ವಿಚಾರ, ಮದರಾಸು ನಗರದಲ್ಲಿ ತೆಲುಗು ಮಕ್ಕಳ ಶಿಕ್ಷಣಕ್ಕೆ ಸೌಕರ್ಯ ಕಲ್ಪಿಸುವುದು, ಮದರಾಸು ನಗರವನ್ನು ಜೇರ್ಜ ಆರಿಸಿಸರ ಪ್ರಾಂತ್ಯವಾಗಿ ರೂಪುಗೊಳಿಸುವುದು, ಹೊಸ ಪ್ರಾಂತ್ಯದ ಹಣಕಾಸಿನ ವಿಚಾರ ಇವೇ ಮುಂತಾದವು ವಿಮರ್ಶೆಗೆ ಬಂದಿದ್ದವು.

ಆಂಧ್ರಪ್ರಾಂತ್ಯದ ರಾಜಧಾನಿ ತಾತ್ಕಾಲಿಕವಾಗಿ ಮದರಾಸು ನಗರದಲ್ಲೇ ಇರಬೇಕೆಂದು ಎಲ್ಲ ಆಂಧ್ರ ಮಂತ್ರಿಗಳೂ ಒತ್ತಾಯಪಡಿಸಿದರೆಂದು ತಿಳಿದುಬಂದಿದೆ. ವಿಧಾನಸೆ ಆದನಂತರ ಮದರಾಸು ಪ್ರಾಂತ್ಯದ ಮಿಕ್ಕ ಭಾಗಗಳಲ್ಲಿ ಉಳಿದಿರುವ ಆಂಧ್ರರಿಗೆ ತಕ್ಕ ಶಿಕ್ಷಣ ಸೌಕ ರ್ಯವನ್ನೂ ಕಲ್ಪಿಸಬೇಕೆಂದು ಸಹ ಒತ್ತಾಯಪಡಿಸಲಾ ಯಿತು. ಇದಲ್ಲದೆ ಮದ್ರಾಸು ನಗರವನ್ನೂ ಜೇರ್ಜ ಆರಿಸಿಸರ ಪ್ರಾಂತ್ಯವಾಗಿ ರೂಪುಗೊಳಿಸಬೇಕೆಂದು ಆಂಧ್ರ ಮಂತ್ರಿಗಳೆಲ್ಲಾ ಅಭಿಪ್ರಾಯಪಟ್ಟರು.

ನಾಯಮೂರ್ತಿ ವಾಂಚೂರರವರು ಜನವರಿ ೧೯ ರಿಂದ ಆಂಧ್ರ ಕ್ಷೇತ್ರಗಳಲ್ಲಿ ಪ್ರವಾಸವನ್ನು ಆರಂಭಿಸುವರು.

ಸದ್ಯಕ್ಕೆ ಆಂಧ್ರಪ್ರಾಂತ ಒಂದೇ
ಕೇಂದ್ರದ ನಿರ್ಧಾರ

ಪ್ರತ್ಯೇಕವಲ್ಲಿ ಕಾಂಗ್ರೆಸ್ ಎಸಗಬೇಕಾಗಿರುವ ಮೂರು ಮಹಾ ಕರ್ತವ್ಯವೆಂದರೆ ಕಾಂಗ್ರೆಸ್ ಸಂಸ್ಥೆಯನ್ನು ಪುನರ್ ಬಲ ಪಡಿಸುವುದು, ಎರಡನೆಯದಾಗಿ ಕೇಂದ್ರ ಸರ್ಕಾರದ ಆರ್ಥಿಕ ಮತ್ತು ವಿದೇಶಾಂಗ ನೀತಿಯ ನಿರ್ಧಾರ್ಯ ರಚನೆ, ಮೂರನೆಯದಾಗಿ ಪಂಚವಾರ್ಷಿಕ ಯೋಜನೆಯ ಬಗ್ಗೆ ಪ್ರಜಾಭಿಪ್ರಾಯವನ್ನು ಸಮೂಹೀಕರಿಸಿ ಪ್ರಜೆಗಳ ಬೆಂಬಲ ಪಡೆಯುವುದೂ ಆಗಿದೆಯೆಂದು ಇಲ್ಲಿನ ರಾಜಕೀಯ ವಲಯಗಳಲ್ಲಿ ಲಭಿಪ್ರಾಯಪಡಲಾಗಿದೆ.

ಆಂಧ್ರಪ್ರಾಂತ ಬಿಟ್ಟು
ಬೇರಾವ ಪ್ರಾಂತವೂ ಇಲ್ಲ !

ಕೇಂದ್ರ ಸರ್ಕಾರದ ಈಗಿನ ಅಭಿಲಾಷೆಯೆಂದರೆ ಆಂಧ್ರಪ್ರಾಂತದ ಹೊರತು ಮತ್ತಾವ ಭಾಷಾವಾರು ಪ್ರಾಂತರಚನೆಯಬಗ್ಗೆಯೂ ಈಗ ಯಾವ ವಿಧವಾದ ಕಾರ್ಯವನ್ನೂ ಕೈಗೆತ್ತಿಕೊಳ್ಳುವುದೇ ಆಗಿದೆ ಎಂದು ಇಲ್ಲಿನ ರಾಜಕೀಯ ವೃತ್ತಿಗಳಲ್ಲಿನ ಸುದ್ದಿ ತಿಳಿಸಿದೆ.

ಈಗ ಸದ್ಯದಲ್ಲಿ ಕೇಂದ್ರ ಸರ್ಕಾರವು ಆಂಧ್ರದ ಹೊರತು ಮತ್ತಾವ ಭಾಷಾವಾರುಪ್ರಾಂತರಚನೆ ಮಾಡುವ ಭರವಸೆ ಕೊಡದು ಕಾಂಗ್ರೆಸ್ ಹೈಕಮಾಂಡ್ ಮತ್ತು ಕೇಂದ್ರ ಸರ್ಕಾರದ ಮುಖ್ಯಗುರಿಯೆಂದರೆ ಪಂಚವಾರ್ಷಿಕಯೋಜನೆಯನ್ನು ಯಶಸ್ವಿಗೊಳಿಸುವುದೊಂದೇ ಎಂದು ಹೇಳಲಾಗಿದೆ.

ಕನ್ನಡಿಗರ ನಿಯೋಗ ವಾಂಚೂರ
ವರನ್ನು ಭೇಟಿನೀಡುವುದು

ರಚಿತವಾಗಲಿರುವ ಆಂಧ್ರ ಪ್ರಾಂತ್ಯದಲ್ಲಿ ಬಳ್ಳಾರಿ, ಅನಂತಪುರ, ಕರ್ನೂಲ್ ನೊದಲಾದ ವಿವಾದಾಸ್ಪದ ಜಿಲ್ಲೆಗಳನ್ನು ಸೇರಿಸಕೂಡದೆಂಬ ನಿರ್ಣಯವನ್ನು ಗದಗಿನಲ್ಲಿ ಸಮಾವೇಶಗೊಂಡಿದ್ದ ಸಂಯುಕ್ತ ಕರ್ನಾಟಕ ರಚನಾ ಸಮಿತಿಯ ಸಭೆಯಲ್ಲಿ ಅಂಗೀಕರಿಸಲ್ಪಟ್ಟಿತು.

ಶ್ರೀ ಜಿನರಾಜ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡಿದ್ದ ಈ ಸಭೆಯಲ್ಲಿ ಕರ್ನಾಟಕ ಪ್ರಾಂತರಚನೆಯ ಬಗ್ಗೆ ಕೇಂದ್ರ ಸರ್ಕಾರವನ್ನು ಒತ್ತಾಯಪಡಿಸುವ ನಿರ್ಣಯಗಳಾದವು.

ಜಾ। ವಾಂಚೂರವರನ್ನು ಭೇಟಿಮಾಡಿ ವಿವಾದಾಸ್ಪದ ಪ್ರದೇಶಗಳ ಬಗ್ಗೆಯೂ ಕರ್ನಾಟಕ ಪ್ರಾಂತ ರಚನೆಯ ಮಾತುಕತೆಗಳನ್ನು ನಡೆಸಲು ಈ ಕೆಳಗೆ ಕಂಡವರನ್ನೊಳಗೊಂಡ ಸಮಿತಿಯೊಂದನ್ನು ರಚಿಸಲಾಯಿತು.

ಸಮಿತಿಯಲ್ಲಿ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು, ಶ್ರೀ ಕೆ ಆರ್ ಕಾರಂತರು, ಶ್ರೀತಿವಿಕ್ರಮ ಸ್ವಾಮಿ (ಎಂ. ಪಿ) ಶ್ರೀ ಶಾಂತಪ್ಪ ಮತ್ತು ಶ್ರೀ ಜಿನರಾಜ ಹೆಗ್ಡೆಯವರು ಸದಸ್ಯರಾಗಿರುವರು.

ಭಿನ್ನಾಭಿಪ್ರಾಯವಿಲ್ಲ

ಶ್ರೀ ಹೆಗ್ಡೆಯರು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾ "ಮೈಸೂರಿನ ಹೊರಗಿನ ಕನ್ನಡಿಗರಿಗೆ ಭಿನ್ನಾಭಿಪ್ರಾಯವಿಲ್ಲವೆಂದೂ, ಇತ್ತೀಚೆಗೆ ಮೈಸೂರಿನ ಶ್ರೀಮನ್ಮಹಾರಾಜರು ಮಂಗಳೂರಿಗೆ ಭೇಟಿ ಇತ್ತಾಗ ಅಲ್ಲಿನ ಸಹಸ್ರಾರು ಕನ್ನಡಿಗರು ತೋರಿಸಿದ ಆದರದ ಸ್ವಾಗತವೇ ಅದಕ್ಕೆ ಪ್ರತ್ಯಕ್ಷ ಸಾಕ್ಷಿ ಎಂದೂ ತಿಳಿಸಿದರು

ಕರಾಚಿಯಲ್ಲಿ ಭೀಕರ ದಂಗೆ

ಬೆಂಕಿ ಇಡುವವರನ್ನು ಗುಂಡಿನಿಂದ ಸುಡುವಂತೆ
ಜೀಫ್ ಕಮಿಷನರು ಆಜ್ಞೆ ನೀಡಿದ್ದಾರೆ

ಕರಾಚಿಯ ದಂಗೆಗಳಲ್ಲಿ ಇದುವರೆಗೆ ಒಟ್ಟು ೧೩ ರಿಂದ ೧೬ ರ ವರೆಗೆ ಜನರು ಸತ್ತಿದ್ದಾರೆ. ೧೦೦ ಕ್ಕಿಂತ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಗಾಯಗೊಂಡಿದು ವರಲ್ಲಿ ೫೦ ಮಂದಿ ಪೋಲೀಸಿನವರು.

ಶಿಕ್ಷಣ ತುಲ್ಯವನ್ನು ಕಡಿಮೆಮಾಡಿಲೇಬೇಕು ಮತ್ತು ಉತ್ತಮವಾದ ಶಿಕ್ಷಣ ಸೌಕರ್ಯಗಳನ್ನು ದೊರಕಿಸಿಕೊಡಬೇಕು ಎಂಬ ಬೇಡಿಕೆಗಳನ್ನು ವಿದ್ಯಾರ್ಥಿಗಳು ಮುಂದಿಟ್ಟು ಈ ಹಿಂದೆ ಹಲವಲೆ ಆರಂಭಿಸಿದರು. ಕೆಟ್ಟ ಉದ್ದೇಶದಿಂದ ಕೂಡಿರುವವರ ಬಗ್ಗೆ ಎಚ್ಚರಿಕೆಯುಂದಿರಬೇಕೆಂದು ಮುಖ್ಯಮಂತ್ರಿ ಪ್ರಾಜ್ಞಾನಾಳೀಗಳು ವಿದ್ಯಾರ್ಥಿಗಳಿಗೆ ಎಚ್ಚರಿಕೆ ಇತ್ತಿದ್ದರೆಪ್ಪೆ ಅವರು ವಿದ್ಯಾರ್ಥಿಗಳ ಮತ್ತು ಮುಖ್ಯಂ ಲೀಗಿನ ನಿಯೋಗಗಳಕೊಡನೆ ಚರ್ಚೆ ನಡೆಸಿದನಂತರ ಮಂತ್ರಿಮಂಡಲದ ಸಭೆ ಕರೆದಿದ್ದರು ಗಲಭೆಗಳು ನಡೆದ ಫಲವಾಗಿ ಬೆಳಗ್ಗೆಯೇ ಬಕ್ಕಟ್ಟಿನ ವಾತಾವರಣ ಕಾಣಬರುತ್ತಿತ್ತು. ಬಸಿಲು ಹತ್ತಿದಂತೆಲ್ಲ ದಂಗೆಕೋರರು ನಾನಾ ಕೇಂದ್ರಗಳಲ್ಲಿ ನೆರೆದರು ಪೋಲೀಸ್ ಇನ್‌ಸ್ಪೆಕ್ಟರ ಕಛೇರಿಯನ್ನು ಸುಡಲಾಯಿತು. ಸಂಗ್ರಾಮ ಕಾಲದ ಶಸ್ತ್ರಾಸ್ತ್ರಗಳನ್ನು ಹಿಡಿದು ಸೈನಿಕರು ಬೀದಿಬೀದಿಗಳಲ್ಲಿ ಬಂದರು ಇದುವರೆಗೆ ಮೊಣ್ಣೆಗಳು, ಇಟ್ಟಿಗೆ ಚೂರು ಗಳನ್ನು ಉಪಯೋಗಿಸುತ್ತಿದ್ದ ದಂಗೆಕೋರರು ಶಸ್ತ್ರಾಸ್ತ್ರ ಅಂಗಡಿಗಳ ಬಾಗಿಲುಗಳನ್ನು ಒಡೆದು ೧೫೦ ಪಿಸ್ತೂಲು ಗಳನ್ನೂ, ರೈಫಲ್‌ಗಳನ್ನೂ ತಂದರು. ಇತರ ಅಂಗಡಿ ಕಾರರು ಆತುರದಿಂದ ಕಿಟಕಿ ಬಾಗಿಲುಗಳನ್ನು ಮುಚ್ಚಿ ದರು ಶಾಲಾರ್ಥರು ಬೀದಿ ಮೂಲೆಗಳಲ್ಲಿ ಪೋಲೀಸಿ ನವರಿಗೂ ದಂಗೆಕೋರರಿಗೂ ಬಂದೂಕಿನಿಂದ ಹೊಡೆ ದಾಟ ಆರಂಭವಾಗಿ ದಂಗೆಯು ಕಾವೇರಿತು ಸೈನಿಕರು ಎಲ್ಲಿ ಹೋದರೂ ಕಲ್ಲುಗಳ ಸುರಿಮಳೆ ಆಗುತ್ತಿತ್ತು. ನಗರ ಪ್ರೇಕ್ಷದಲ್ಲಿರುವ ಏರೀಕಾ ರಾಯಭಾರಿ ಕಛೇರಿ ಬಳಿ ವಿಶೇಷ ಕಾವಲನ್ನು ಹಾಕಲಾಗಿತ್ತು. ಅಮೆರಿಕನ್ ರಾಯಭಾರಿಗಳ ಕಛೇರಿ ಬಳಿ ಒಂದುಸಾರಿ ಗುಂಡು ಹಾರಿಸಲಾಯಿತು. ಆದರೆ ವಿದೇಶಿಯರಾರಿಯರಾದ ದಂಗೆಕೋರರು ಬೀಳಲಿಲ್ಲ. ಬೆಂಕಿ ಇಡುವವರನ್ನು ಗುಂಡಿಟ್ಟು ಕೊಲ್ಲುವಂತೆ ಚೀಫ್ ಕಮಿಷನರು ಆಜ್ಞೆ ನೀಡಿದರು ಪರಿಸ್ಥಿತಿಯು ಸಂಪೂರ್ಣವಾಗಿ ಹತೋಟಿ ಯಲ್ಲಿದೆಯೆಂದೂ ಆದರೆ ಹೆಚ್ಚಿನ ಗಲಭೆಗಳು ನಡೆ ಯುವ ಭೀತಿ ಇದೆಯೆಂದೂ ಅವರು ಪತ್ರಿಕಾಪ್ರತಿನಿಧಿ ಗಳಿಗೆ ತಿಳಿಸಿದರು

ಮಧ್ಯಪ್ರಾಚ್ಯದ ರಕ್ಷಣೆ ವ್ಯವಸ್ಥೆ
ಪಾಕಿಸ್ತಾನವನ್ನು ಸೇರಿಸುಕೊಳ್ಳುವ ಪ್ರಯತ್ನ

ಕಳೆದ ಹಲವು ದಿನಗಳಿಂದ ಪಾಕಿಸ್ತಾನ ಪತ್ರಿಕೆ ಗಳಲ್ಲಿ ಬರುತ್ತಿರುವ ವರದಿಗಳನ್ನು ಮತ್ತು ಅಮೆರಿಕ, ಬ್ರಿಟನ್‌ಗಳಲ್ಲಿ ಹೊರಬೀಳುತ್ತಿರುವ ಸುದ್ದಿಗಳನ್ನು ನೋಡಿದರೆ ಮಧ್ಯಪ್ರಾಚ್ಯದ ರಕ್ಷಣೆ ವ್ಯವಸ್ಥೆಗೆ ಪಾಕಿ ಸ್ತಾನವನ್ನು ಸೇರಿಸಿಕೊಳ್ಳುವ ವಿಚಾರ ಅಂತಿಮಘಟ್ಟ ವನ್ನು ಮುಟ್ಟಿವೆಯೆಂದು ತಿಳಿದುಬಂದಿದೆ

ಮಧ್ಯಪೂರ್ವವಿಚಾರಗಳನ್ನು ನೋಡಿಕೊಳ್ಳುವ ಅಮೆರಿಕದ ಉಪರಾಷ್ಟ್ರೀಯ ಸಚಿವ ಮಿ। ಜೆಪ್ರಿ ಬೈರೋಡ್‌ರವರೂ ಮತ್ತು ಬ್ರಿಟನ್ನಿನ ವಿದೇಶಾಂಗ ಕಛೇರಿ ಅಧಿಕಾರಿಗಳೂ ಈ ವಿಚಾರವಾಗಿ ಚರ್ಚೆ ನಡೆ ಸಿದರೆಂಬುದಾಗಿ ಕಳೆದವಾರ ಪಾಕಿಸ್ತಾನದ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಮಧ್ಯಪ್ರಾಚ್ಯದ ನೀತಿ ಬಗ್ಗೆ ಬ್ರಿಟನ್ ಮತ್ತು ಅಮೆರಿಕಗಳು ಒಂದು ತೀರ್ಮಾನಕ್ಕೆ ಬಂದಿವೆ ಯೆಂದು ಹೇಳಲಾಗಿದೆ ಇದುವರೆಗೆ ಈ ವರದಿಯನ್ನು ಬ್ರಿಟನ್ ಅಮೆರಿಕಾಗಳಾಗಲಿ ಪಾಕಿಸ್ತಾನವಾಗಲಿ ನಿರಾಕರಿ ಸಿಲ್ಲದುದರಿಂದ ಈ ವರದಿಗೆ ಆಧಾರವಿದೆಯೆಂದು ನಂಬ ಲಾಗಿದೆ ಈ ಬಗ್ಗೆ ದೆಹಲಿಯಲ್ಲಿ ಅಧಿಕೃತವಾಗಿ ಏನೂ ತಿಳಿದುಬಂದಿಲ್ಲವಾದರೂ, ಮಧ್ಯಪ್ರಾಚ್ಯದ ರಕ್ಷಣೆ ಒಪ್ಪಂದಕ್ಕೆ ಪಾಕಿಸ್ತಾನವನ್ನು ಸೇರಿಸಿಕೊಳ್ಳಲು ಬ್ರಿಟನ್ ಅಮೆರಿಕಗಳು ಯತ್ನಿಸುತ್ತಿವೆಯೆಂದೂ, ಪಾಕಿಸ್ತಾನವು ಸಹ ಈ ಬಗ್ಗೆ ಕಾತುರವಾಗಿವೆಯೆಂದೂ ಗೊತ್ತಾಗಿದೆ. ತವಂಬರಿನಲ್ಲಿ ಪಾಕ್ ವಿದೇಶಾಂಗಸಚಿವರಾದ ಸರ್ ಮಹಮದ್ ಜಫರುಲ್ಲಾರವರು ನಾಸಿಂಗ್‌ಟನ್ನಿನಲ್ಲಿ ವಿದೇಶಾಂಗ ಕಚೇರಿಗೆ ಭೇಟಿ ಇತ್ತಿದ್ದರೆಂದು ವರ್ತ ಮಾನ ಬಂದಿತ್ತು ಅದೇ ಕಾಲದಲ್ಲೇ "ಪ್ರಯಾರ್ಚ್ ಟೈಂಸ್" ಪತ್ರಿಕೆಯು ಒಂದು ವರದಿಯನ್ನು ಪ್ರಕಟಿಸಿ "ಅಮೆರಿಕವು ಪಾಕಿಸ್ತಾನದ ಮಿಲಿಟರಿ ಶಕ್ತಿಯನ್ನು ಬಲಪಡಿಸಿ ಅದನ್ನು ಪಶ್ಚಿಮ ರಕ್ಷಣೆ ವ್ಯವಸ್ಥೆಗೆ ಸೇರಿಸಿ ಕೊಳ್ಳುವ ಯೋಜನೆಯಾತಿದೆ" ಎಂಬುದಾಗಿ ತಿಳಿಸಿತ್ತು ಪಾಕಿಸ್ತಾನದಲ್ಲಿ ಅಮೆರಿಕನ್ ವಿಮಾನನಿಲ್ದಾಣ ಗಳನ್ನು ನಿರ್ಮಿಸುವುದೂ ಇದರಲ್ಲಿ ಸೇರಿದೆ. ಇದುವರೆಗೆ ಪಾಕಿಸ್ತಾನವು ಬಹಿರಂಗವಾಗಿ ಭಾರತದ ವಿದೇಶಾಂಗ ನೀತಿಯನ್ನೇ ಹಾಗೂ ಅನುಸರಿಸುತ್ತ ಬಂದಿದೆ. ವಿಶ್ವ ಸಂಸ್ಥೆಯ ಮುಂದೆ ಬಂದ ಅಂತರರಾಷ್ಟ್ರೀಯ ವಿಚಾರ ಗಳಲ್ಲಿ ಎಂದೂ ವಿಶೇಷವಾದ ಕಾರ್ಯಕ್ರಮವನ್ನು ಕೈಗೊಂಡಿದೆ ಮುಂಚೆ ಪಾಕಿಸ್ತಾನವು ಮಧ್ಯಪ್ರಾಚ್ಯದ ರಕ್ಷಣೆ ಒಪ್ಪಂದಕ್ಕೆ ಸೇರಿ ಪಾಕಿಸ್ತಾನವೊಳಗೆ ಅಮೆರಿ ಕನ್ ವಿಮಾನನಿಲ್ದಾಣಗಳ ಸ್ಥಾಪನೆಗೆ ಅವಕಾಶವಿತ್ತರೆ ಪಾಕಿಸ್ತಾನವು ಈಗಿನ ವಿದೇಶಾಂಗ ನೀತಿಯನ್ನು ತ್ಯಜಿಸಿ ಮುಂದಿನ ಮಹಾಯುದ್ಧಕ್ಕೆ ತಾನೂ ಎಗೆಯಲ್ಪಡಲು ಅವಕಾಶಕೊಟ್ಟಂತೆ ಆಗುವುದೆಂದು ಹೇಳಬಹುದಾಗಿದೆ. ಇದರಿಂದ ಪಾಕಿಸ್ತಾನಕ್ಕೆ ಅಪಾರ ಕಷ್ಟನಷ್ಟ ಒದಗು ವುದೇ ಅಲ್ಲದೆ, ಭಾರತದ ಮೇಲೂ ವಿರುದ್ಧ ಪ್ರತಿಕ್ರಿಯೆ ಆಗಲು ಅವಕಾಶವಾಗುತ್ತದೆ.

ಪಂಚವಾರ್ಷಿಕಯೋಜನೆ ಕಾರ್ಯಗತ
ಮಾಡಲು ಸಲಹೆಗಾರರನ್ನು
ನೇಮಿಸಲು ನಿರ್ಧಾರ

ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡುವ ಬಗ್ಗೆ ಕೇಂದ್ರ ಮತ್ತು ಸಂಸ್ಥಾನ ಸರಕಾರ ಗಳಿಗೆ ಸಂಬಂಧವನ್ನೂ ಕಲ್ಪಿಸಲೋಸುಗ ಮೂವರು ಸಲಹೆಗಾರರನ್ನು ನೇಮಿಸಬೇಕೆಂದು ಭಾರತ ಸರಕಾರ ನಿರ್ಧರಿಸಿದೆಯೆಂದು ತಿಳಿದುಬಂದಿದೆ ಪಂಚವಾರ್ಷಿಕ ಯೋಜನೆಯ ಕೆಲಸಕಾರ್ಯಗಳ ನೇರಲ್ಲಿಚಾರಣೆಗಾಗಿ ದೇಶವನ್ನು ದಕ್ಷಿಣ, ಉತ್ತರ ನುತ್ತು ಪೂರ್ವ 'ಜೋನ್' ಗಳಾಗಿ ವಿಂಗಡಿಸಿ, ಒಂದೊಂದು 'ಜೋನ್' ಗೂ ಒಬ್ಬೊಬ್ಬರು ಸಲಹೆಗಾರರನ್ನು ನೇಮಿಸಲಾಗುತ್ತದೆ.

ಬೋಂಬಾಯಿನ ಮಾಜಿ ಗವರ್ನರ್ ಶ್ರೀ ಎಸ್. ವಿ. ರಾಮಕೃಷ್ಣಾಯಯವರನ್ನು ದಕ್ಷಿಣ "ಜೋನ್" ಗೆ ಸಲಹೆಗಾರರಾಗಿ ನೇಮಿಸಲ್ಪಟ್ಟಿದ್ದಾರೆ. ಅವರ ಮುಖ್ಯ ಕಚೇರಿ ಮದರಾಸಿನಲ್ಲಿ ಇರುತ್ತದೆ. ದಾಮೋದರ್ ಕಣಿವೆ ಯೋಜನೆಯ ಬಗ್ಗೆ ತಪಿಲೆ ನಡೆಸುತ್ತಿರುವ ಸಮಿತಿಯ ಕಾರ್ಯ ಮುಗಿದ ಕೂಡಲೇ ಆದರ ಅಧ್ಯಕ್ಷರಾದ ಶ್ರೀ ಪಿ. ಎಸ್ ರಾವ್‌ರವರನ್ನೂ ಒಂದು "ಜೋನ್" ಗೆ ಸಲಹೆ ಗಾರರಾಗಿ ನೇಮಿಸಲಾಗುವುದೆಂದು ಗೊತ್ತಾಗಿದೆ.

ಮೂರನೇ ಸ್ಥಾನದ ಸಂಬಂಧದಲ್ಲಿ ಹಣಾಬಿನ ಆರ್ಥಿಕ ಪುನರ್ವ್ಯವಸ್ಥೆ ಕಮಿಷನರಾದ ಶ್ರೀ ಪಿ. ಎಸ್. ಥಾಪರ್‌ರವರ ಹೆಸರು ಸೂಚಿಸಲ್ಪಟ್ಟಿದೆ.

ಯೋಜನೆಯ ಪ್ರಕಾರ ಅನೇಕ ಕೆಲಸಗಳನ್ನು ಸಂಸ್ಥಾನ ಸರಕಾರಗಳು ಕೇಂದ್ರದ ಸಹಾಯದಿಂದ ಕೈಗೆಳ್ಳಬೇಕಾಗಿರುವುದರಿಂದ, ಕೇಂದ್ರಕ್ಕೂ ಸಂಸ್ಥಾನ ಸರಕಾರಗಳಿಗೂ ಸಂಪರ್ಕವನ್ನು ಉಂಟುಮಾಡಲು ಸಲಹೆಗಾರರ ನೇಮಕ ಆಗಕ್ಕವೆಂದು ಭಾವಿಸಲಾಗಿದೆ. ಅವರ ಜವಾಬ್ದಾರಿ ಮತ್ತು ಕೆಲಸಗಳ ಬಗ್ಗೆ ಈ ತಿಂಗಳ ಅಂತ್ಯದ ವೇಳೆಗೆ ತೀರ್ಮಾನಿಸಲಾಗಬಹುದು.

ರಾಷ್ಟ್ರಾಧ್ಯಕ್ಷರಿಗೆ ಕಾರಿನ ಬಹುಮಾನ

ಹಸರು ಬಣ್ಣದ ಕಾರೊಂದನ್ನು (ಹಿಂದೂಸ್ತಾನ್. ೧೦) ಈ ದಿನ ರಾಷ್ಟ್ರಪತ್ನಿರವರ ಪಾಗಿ ರಾಜೇಂದ್ರ ಪ್ರಸಾದರಿಗೆ ಶ್ರೀ ಬಿ ಎಂ. ಬಿರ್ಲಾರವರು ಬಹುಮಾನ ವಾಗಿ ಇತ್ತರು. ಶೇಕಡ ೬೦ ಭಾಗಗಳನ್ನು ಇಲ್ಲಿಯೇ ತಯಾರಿಸಿ ಸಿದ್ಧಗೊಳಿಸಿರುವ ಕಾರನ್ನು ಸ್ವೀಕರಿಸಲು ತಮಗೆ ಬಹಳ ಸಂತೋಷವಾಗಿದೆಯೆಂಬುದಾಗಿ ಡಾ। ಪ್ರಸಾದರು ತಿಳಿಸಿ "ಹದಿಹಾರಾಣೆ ಸ್ವದೇಶಿ ಕಾರನ್ನು ನೀವು ನನಗೆ ಬಹುಮಾನವಾಗಿ ಕೊಡುವ ವಿಷಯವನ್ನು ಎದುರು ನೋಡುತ್ತಿದ್ದೇನೆ" ಎಂದರು.

ಸ್ವೀಕಾರ

ದೊಡ್ಡಮುದವಾಡಿ ಗ್ರಾಮದ ಪಿ. ಬಿ. ಎಸ್. ಮಾಸ್ತರ ಶ್ರೀ ದೊಡ್ಡಹುಣ್ಯಯ್ಯನವರು ಭಕ್ತಿಯಿಂದ ಪ್ರಭಾವೋತ್ಪಾದಕಾಗಿ ಸಮರ್ಪಿಸಿದ 2 ರೂ. ಗಳು ಶ್ರೀ ಸಂಗಪ್ಪ ಮರಿಸ್ವಾಮಿಯವರ ಮೂಲಕ ತಲ್ಪಿರು ತ್ತವೆ.

ಈ ಮೇಲ್ಕಾಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೇ ಇಯಲೆಂದು ಹಾರೈಸುತ್ತೇವೆ.

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಅನ್ಯಥಾರೂಪಮಾಡಿದ ಪ್ರತಿಯೊಬ್ಬ ಜಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರುದ್ರೇಣುಕಾಚಾರ್ಯರು ಜಗದ್ಧಿತಾರ್ಥವಾಗಿ ಆಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿವಾದಿಭಯಂಕರವೆನ್ನಿಸಿರುವುದು ವೀರಶೈವಮತದಲ್ಲಿ ಸದ್ಯಃ ದೊರೆಯುತ್ತಿರುವ ಗ್ರಂಥಗಳೆಲ್ಲ ಇದೇ ಮಹಾ ಪುರುಷನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು ೨೩೩೩ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವುದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಭೂತಗ್ರಂಥವೆಂದರಿಂದ, ಇದಕ್ಕೆ ಇಂದಿನವರೆಗೆ ಆಚೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಅದರ ಒಂದು ವ್ಯಾಖ್ಯಾನವಿಲ್ಲದಿರುವುದೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆ ಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿಯೋದಿದಮೇಲೆ ಖಂಡಿತ ವ್ಯಾಖ್ಯಾನದ ಮಹತ್ತ್ವವು ಪಾಠಕರಿಗೆ ವೇದ್ಯವಾಗುವುದು ಪಾಠಕರ ಅನುಕೂಲ್ಯಾರ್ಥ ಬಹು ಶ್ರಮವಹಿಸಿ ಸಿದ್ಧಪಡಿಸಿರುವ ವಿಷಯಾನುಕ್ರಮಣಿಕೆಯು ಪ್ರಕಾಶಕಸ್ಥಮೇಲಿದೆ ಈ ಗ್ರಂಥವಲ್ಲಿ ಮುದ್ರಿಸಲ್ಪಟ್ಟಿರುವ ಈ ಗ್ರಂಥವು ಒಟ್ಟು ೩೩೦ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ ಈ ಗ್ರಂಥವಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರು ರುದ್ರೇಣುಕಾಚಾರ್ಯರ ಲೀಲಾಕ್ಷರವಾದ ಹಾಗೂ ಸಕಾರಕಾಶಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ಸರ್ವಾಂತರೀಕವಾಗಿದೆ ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರಿಲ್ಲದೂ ಅವಶ್ಯವಾಗಿ ಓದಬೇಕು

ಬೆಲೆ ೩ ರೂಪಾಯಿ

ಮನಸ್ಸೋಹರವಾದ ಫೋಟೋಗಳು.

ಶ್ರೀರೇಣುಕಾಚಾರ್ಯರ ಲಿಂಗ ಪತ ದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದದ್ದು)ಸೈಜು ೧೪ × ೧೦ ಬೆಲೆ	೦—೬—೦
ಶ್ರೀಜಗದ್ಗುರು ಪಂಚಾಚಾರ್ಯರು ಗಂಡಪ ಪಸಿ ಗಳಿಗೆ ಶಿವಪಂಚಾಕ್ಷರಿಯನ್ನು ಉಪದೇಶಿಸುವ ಫೋಟೋ	೦—೪—೦
ಶ್ರೀ ಜಗದ್ಗುರು ಪಂಚಾಚಾರ್ಯ ಲಿಂಗಾವತರಿಸಿ ಫೋಟೋ ೧೪ ೧೦ ಬೆಲೆ ಒಕ್ಕೆ	೦—೩—೦
" " " ಚಿಕ್ಕ ಸೈಜು ಬೆಲೆ	೦—೧—೬
ಶ್ರೀ ಜಗದ್ಗುರು ರುದ್ರ ಮುಪೀಠ್ಠರ ಶಿವಾಚಾರ್ಯರು ಧೂರ್ಜ್ಜಟಿಯಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುಪೀಠ್ಠರ ಶಿವಾಚಾರ್ಯರಿಗೆ ಪಟ್ಟೆ ಭಿಷೇಕ ಮಾಡುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವ ಚಾರ್ಯಮಹಾಸ್ವಾಮಿಗಳವರ ಫೋಟೋ (ನಾನಾವಿಧಬಣ್ಣದ್ದು)	೦—೪—೦
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರಗಳು ಕರಿಟಿಟಿಪ ರಜವಾಡುವ ಫೋಟೋ	೦—೧—೬
ಸದ್ಯಃ ಪೀಠಾರೋಹಣಮಾಡಿರುವ ಶ್ರೀಕಾಶೀಜಗದ್ಗುರು ವಿಶ್ವೇಶ್ವರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೪—೦
ಶ್ರೀಮಮಜ್ಜಯಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗವಾಣಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಸೀಹಾಧೀಶ್ವರ ಜಗದ್ಗು ರು ಶಿವಾನಂದಶಿವ ಜಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀನಂಜುಜ್ಜಮೋ ಜಗದ್ಗುರುಗಳವರ ಸಪತ್ನಿಯ ಶ್ರೀ ಅಹೀಶ್ವರಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (೩ ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ಒಕ್ಕೆ	೦—೩—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಪೆಟೆಟೋ (ನಾ ವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ಒಕ್ಕೆ	೦—೪—೦
೧೮೫೮ ಮಿ ಅಷ್ಟಯಿಂದ ಸೀಠದ ಮಹಾನ್ ಗುರು ಅತ್ಯಂತ ಸುಂದರವಾದ ಫೋಟೋ ಒಕ್ಕೆ	೦—೧—೬
ಶ್ರೀ ಜಗದ್ಗುರು ಅಷ್ಟಯಿಂದ ಸೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ಒಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹ ಸನದ ಅತ್ಯಂತ ಸುಂದ ವಾದ ಗೊಂಬೆ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರು ಗಳವರ ಸ್ವಪಿಠಿಯ ೭ ಶಿಷ್ಯಾನ್ವಯಾಚಾರ್ಯರುಗಳ ವಿಶೇಷ ಸ್ತ್ರಿಯರ ಫೋಟೋ	೦—೧—೬
ಶ್ರೀಜಗದ್ಗುರುರಂಭಾಪುರಿ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು	೦—೨—೦

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೩ನೆಯ ಆವೃತ್ತಿ)	೧ ಆಣೆ
ಸಚ್ಚಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಹುಚ್ಚವಿಂಟಿತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನ	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ)	೩ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೩ ಆಣೆ
ಶ್ರೀರುದ್ರಮುಪೀಠಿವಾಚಾರ್ಯಶತಕ	೩ ಆಣೆ
ಶಿವಶತ್ರಿನಿವಾಸ	೩ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	೩ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ) ...	೩ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೧೦ನೆಯ ಆವೃತ್ತಿ) ...	೩ ಆಣೆ
ಜಪಸಾದಿನಿಜಶತ್ಕದರ್ಪಣ (೨ನೆಯ ಆವೃತ್ತಿ) ...	೩ ಆಣೆ
ಪಂಚಾಚಾರ್ಯಪ್ರಕಾಶ ...	೩ ಆಣೆ
ಪಂಚಾಚಾರ ಪ್ರಕಾಶಿಕಾ ...	೩ ಆಣೆ
ಶ್ರೀಗುರುತತ್ತ್ವಪದಗಳು (೩ನೆಯ ಆವೃತ್ತಿ) ...	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ) ...	೪ ಆಣೆ
ಲಿಂಗಧಾರಣವಿಧಿ ...	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ) ...	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ ...	೪ ಆಣೆ
ವೀರಶೈವ ವ್ಯಾಯತ್ರಿತ್ವವಿಧಿ ...	೪ ಆಣೆ
ವೈದಿಕವಾಙ್ಮಯರಹಸ್ಯ ...	೪ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ) ...	೪ ಆಣೆ
ಶೈವೋಪವಿತ್ಕಲಂಗ್ರಹ (ಸಂಸ್ಕೃತ) (೨ನೆಯ ಆವೃತ್ತಿ) ...	೬ ಆಣೆ
ಸಚ್ಚಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ) ...	೬ ಆಣೆ
ವೀರಶೈವಾಂಹ್ನಿಕ್ಸಿ—ಪ್ರಾರ್ದ್ಧವಿಧಿ ...	೬ ಆಣೆ
ಶಿವಾಗಮ ಪೀಠಾಮಣಿ (ಮೂಲಮಾತ್ರ ಚಿಕ್ಕಸೈಜು) ...	೮ ಆಣೆ
ಶಿವಾದ್ವೈತಕರಂಭಾಷಾ (ಸಂಸ್ಕೃತ) ...	೮ ಆಣೆ
ವೀರಶೈವಮತಾತ್ಪರ್ಯ ...	೮ ಆಣೆ
ಬಸವಧ್ಯಾಂತದಿವಾಕರ (೨ನೆಯ ಆವೃತ್ತಿ) ...	೮ ಆಣೆ
ಆಗಮಸರಜ್ಞಾನ ...	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಗಳು (ತೆಲಗು) ...	೮ ಆಣೆ
ಶ್ರೀಲಿಂಗದ್ಗುರು ಶಿವಾನಂದವಿಜಯ ...	೮ ಆಣೆ
ಶ್ರೀಜಗದ್ಗುರು ವಿಶ್ವಕರ್ಣವಿಜಯ ನಕ್ಷತ್ರಮಾಲಿಕಾ ...	೮ ಆಣೆ
ಕನ್ನಡ ನ್ಯಾಯತತ್ತ್ವಶತಕಮ್ ...	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ) ...	೧೨ ಆಣೆ
ಶಿವಾಸೂತ್ರ ಸಿದ್ಧಾಂತದರ್ಪಣ ...	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ವ್ಯಾಖ್ಯಾನಶೈ ...	೧ ರೂ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ) ...	೧ ರೂ
ವಿವೇಕಮುಕ್ತಾವಳಿ ...	೧ ರೂ
ವಿಚಾರಸಾರಾವಳಿ ...	೧ ರೂ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾಗಿ ೩ನೆಯ ಆವೃತ್ತಿ) ...	೧೫ ರೂ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ ...	೧೫ ರೂ
ಸಚಿತ್ರ ರೇಣುಕವಿಜಯ (೩ ನೆಯ ಆವೃತ್ತಿ) ...	೨ ರೂ
ಶಿವಾಗಮಸಂಗ್ರಹ (ಚಂದ್ರಜ್ಞಾನಾಗಮ-ಕಾರಣಾಗಮ ಮಕುಟಾಗಮ ಸೂತ್ರಾಗಮಗಳಿಂದ ಕೂಡಿರುವುದು) ...	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರಪಟ್ಟದ್ದು) ...	೨॥ ರೂ
ಸಿದ್ಧಾಂತಶಿಖಾಮಣಿ (ಕನ್ನಡ ವ್ಯಾಖ್ಯಾನಸಹಿತ) ...	೩ ರೂ
ವೀರಶೈವದೀಕ್ಷೆ (೩ನೆಯ ಆವೃತ್ತಿ, ೪೦ ಮಹತ್ತದ ಫೋಟೋಗಳಿರುವುದು) ...	೩ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ) ...	೧೨ ರೂ
A brief life-sketch of Pandit Sri Kashinatha Shastriji (*English*)	**4 As**
The Philosophical Aspect of Varanasi (*English*)	**8 As**
Speeches by Pandit Shri Kashinatha Shastriji (*English*)	**12 As**
ಶಿವಾಚಾರಚಂದ್ರಿಕಾ (ಉರ್ದು)	೩ ಕ
ವೀರಶೈವಚಂದ್ರ (ಮರಾಠಿ)	೧ ಕ
ಮಹಾಚಾರಚಂದ್ರಿಕಾ (ತೆಲುಗು)	೧ ಕ
ಸಂಕ್ಷಿಪ್ತವೀರಶೈವಾಚಾರಚಂದ್ರಿಕಾ (ಉರ್ದು) ...	೨ ಆಣೆ

ಮುದ್ರಕರು—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್, ಪ್ರೆಸ್, ಮೈಸೂರು.

Edited, Printed and Published by Brahmanmathadhyaksha Sri Mahadevaiah at Sri Panchacharya Electric Press, Sayaji Rao Road, Mysore.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಗುರು ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿಶರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೇಶ್ವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋದಧರ್ । ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು—ಶಾಗನೂರು ಬೃಹನ್ಮಹಾಧ್ಯಕ್ಷರಾದ ವೇದ ಪಂಡಿ ಶ್ರೀಶಾಂತಪಾಠಪ್ರವಚನಶಾಸ್ತ್ರಿಗಳವರು.

ವಾರ್ಷಿಕ ಚಂದಾ ೩ ರೂ.] ಸಂಪಾದಕರು—ಶಾಗನೂರು ಬೃಹನ್ಮಹಾಧ್ಯಕ್ಷರಾದ ಶ್ರೀ ಮಹಾದೇವಯ್ಯನವರು [ವಿ ಪಿ ಖರ್ಚು ಸೇರಿ ೩ ರೂ ೬ ಆ.

ಸಂಪುಟ ೨೬] ಸೋಮವಾರ ತಾ॥ ೨ ನೇ ಫೆಬ್ರುವರಿ ೧೯೫೩ [ಸಂಚಿಕೆ ೫೮

ಪತ್ರವ್ಯವಹಾರ

[ಪತ್ರೀದಾರರು ಆಭಿಪ್ರಾಯ ಪಡುವ ಲೇಖನಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು —ಸಂ]

ಶ್ರೀ ಗುರುಮುಲೆಯ ಶಾಂತೇಶ್ವರ ಯಾತ್ರಾಮಹೋತ್ಸವ ತೋಪಕಟ್ಟೆ ಹಿರೇನಂದಿ ನಂದಿಪುರ

ಪ್ರತಿವರ್ಷ ಪದ್ಧತಿಯಂತೆ ಇದೇ ಶಕ ೧೮೭೪ ನಂದನನಾಮ ಸಂ॥ ಮಾಘ ಶು॥ ೫ ಸೋಮವಾರ ಉದಯ ೧೦ ಘಂಟೆಗೆ ಮಲೆಯ ಶಾಂತೇಶ್ವರನ ಪೂಜೆ ಹಾಗು ಪಲ್ಲಕ್ಕೆ ಉತ್ಸವ ಮತ್ತು ಧ್ವಜವಂದನೆ ನಂತರ ಗಣಾಧಿಪತಿಯ ಸಹಿಷ್ಟಪೂಜೆ ಸಾಯಂಕಾಲ ೬ ಘಂಟೆಗೆ ರಥೋತ್ಸವವು ರಾತ್ರಿ ೧೦ ಘಂಟೆಗೆ ಧಾರವಾಡದ ತೇರ್ದಬೆಳೆಸಿರಿ ಪಲ್ಲಿ ವೀರಾರ್ಯಶಾಸ್ತ್ರಿಗಳ ಶಿವತೇಕ್ಷವ, ಅದೇ ದಿವಸ ರಾತ್ರಿ ೧೨ ಘಂಟೆಗೆ ಶ್ರೀ ಶಾಂತೇಶ್ವರ ನಾಟ್ಯ ಸಂಘ ನಂದೂರ ಇವರು ಪತಿವ್ರತೆ ಪ್ರಭಾವ ಎಂಬ ನಾಟಕವನ್ನು ಆಭಿನಯಿಸಿದರು ಮಾಘ ಶು॥ ೬ ಮಂಗಳವಾರ ಮುಂಜಾನೆ ೧೦ ಘಂಟೆಗೆ ಕುಸ್ತಿ, ಕಲ್ಲಿ ತುರಾಯಿ ಹಾಡು ಅದನಂತರ ಸಾಯಂಕಾಲ ೫ ಘಂಟೆಗೆ ಕಲಬುರ್ಗಿ ಶ್ರೀ ಜೊಡಾಪುರೀ ಹಿರೇಮಠದ ಜಡಪಟ್ಟಾಧ್ಯಕ್ಷ ಶಾಂತವೀರಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಧಾರವಾಡದ ಸಂ॥ ವೀರಾರ್ಯಶಾಸ್ತ್ರಿಗಳು, ಶ್ರೀ ಪಂ॥ ಜಿ ಎಂ ಗುರುಶಿದ್ಧಶಾಸ್ತ್ರಿಗಳು, ಶ್ರೀ ರೊಟ್ಟಿ ಡಿಗಿ ಚೆನ್ನವೀರಶಾಸ್ತ್ರಿಗಳು, ಶ್ರೀ ಜೋಗೂರ ಭಾಗಭೂಷಣಶಾಸ್ತ್ರಿಗಳು, ಅಂದೇಲಿ ಶರಣಪ್ಪಗೌಡರು ಮುಂತಾದವರ ಭಾಷಣಗಳಾದನಂತರ ಅಧ್ಯಕ್ಷರ ಭಾಷಣವಾಗಿ ಸದರಿ ಮಹದ ಶ್ರೀ॥ ಹಿ॥ ಬ್ರ॥ ಸದಾಶಿವತೀವಾ ಚಾರ್ಯಮಹಾಸ್ವಾಮಿಗಳವರ ಸಮಾರೋಪ ಭಾಷಣ ಮೊಹನೆ ಯಶಸ್ವಿಯಾಗಿ ಸಭೆಯು ಕೊನೆಗೊಂಡಿತು

ಮಹದ ಕಾರಭಾರಿಗಳು ನಂದೂರು

ಚಿಕ್ಕಮಣ್ಣೂರು ಮಹಾಸ್ವಾಮಿಗಳವರ ಧರ್ಮೋಪದೇಶ

ಧಾರವಾಡ ಜಿಲ್ಲಾ ರೋಣ ತಾಲೂಕ ಕೈಕೆ ಹೊಳೆ ಅಲೂರು ಗ್ರಾಮಕ್ಕೆ ಆಗಮಿಸಿದ ಗದಗ ಶ್ರೀ ಜಗದ್ಗುರು ರೇಣುಕಾಚಾರ್ಯ ಮಂದಿರ ಸಂಸ್ಥಾಪಕರಾದ ಶ್ರೀ ರೇವಣಸಿದ್ಧ ಶಿವಾಚಾರ್ಯಸ್ವಾಮಿಗಳು ಚಿಕ್ಕ ಮಣ್ಣೂರು ಈ ಪೂಜ್ಯ ಶಿವಯೋಗಿಗಳವರು ದಿನಾಂಕ ೧೨-೧ ೫೩ ನೇ ದಿವಸ ಶಕ್ಷಹ ಸಾಲೆಯ ಯಾವತ್ತೂ ಬಾಲಕರಿಗೂ, ಗುರುಗಳಿಗೂ ಹಾಗೂ ಸಾಲೆಯ ಜೀರ್ ಮಕ್ಕಳಿಗೂ! ತಮ್ಮ ಅಮೃತವಾಣಿಯಿಂದ ಮಾಧಕಿಕ, ನೈತಿಕ, ಶಾರೀರಿಕ, ಧಾರ್ಮಿಕ ವಿಷಯಗಳನ್ನು ಉಪದೇಶ ಮಾಡಿದರು ವಿದ್ಯಾರ್ಥಿಗಳಿಗೆ ಕಲಿಯುವ ವಯೋ ಮಾನಕ್ಕನ್ನು, ಶಿಷ್ಯರ ಶೀಲ ಮತ್ತು ಗುರುವಿನ ಆಜ್ಞೆ ಪಾಲನೆಯಿಂದ ಆಗುವ ಲಾಭ ಇವೆಲ್ಲ ಬಾಲಕರಲ್ಲಿ ಸ್ಪಿರವಾಗಿ ನೆಲೆಗೊಳ್ಳುವಂತೆ ಬಾಲಕರ ಬೋಧ ಭಾಷೆಯಲ್ಲಿ ವ್ಯಾಖ್ಯಾನಮಾಡಿದರು ಈ ಬೋಧಪರವಾದ ಅಮೃತವಾಣಿಯು ಅವರ ಆಕ್ಷೀಯತೆಯ ಪ್ರಗತಿಯನ್ನು ಸೂಚಿಸುವದು ಅಮೇಲೆ ಒಲೆಯ ಹಿಡ್ಮಾಸ್ತರರು ಶ್ರೀಗಳವರ ಗುಣಗಾನ ಮಾಡಿ ಚಿಕ್ಕಮಣ್ಣೂರು ಮಹಾಸ್ವಾಮಿಗಳವರು ಯಾವಾಗಲೂ ಸಮಾಜದ ಉದ್ಧಾರ ಒಗ್ಗೆ ಹಗಲಿರುಳು ಪ್ರಯತ್ನ ಮಾಡತ್ತ ಬೋಧಮಾಡಿ ಜನಜಾಗ್ರತೆ ಮಾಡುತ್ತಿರುವದು ಬಹು ಸ್ಪುತ್ಯವಾದದ್ದು ಈ ಮಹಪೀಠಗಳು ವಿದ್ಯಾಧಿನಾಸ್ಥಾನಗಳಾಗಿರುವದರಿಂದ ಗ್ರಂಥಗಳ ಪ್ರಹಾರ ಮಾಡುತ್ತಿರುವ ದಲ್ಲದೆ ಗದಗ ಸಮೃಣದಲ್ಲಿ ಬಡವಿದ್ಯಾರ್ಥಿಗಳ ಸಲುವಾಗಿ ವೀರಾರ್ಥಿಂಗ ಇರುವದಕ್ಕೆ ಪ್ರಸಾದ ನಿಲಯ ಕಟ್ಟಿಸುವದರಲ್ಲಿ ಮಗ್ನರಾಗಿರುವರು ಇಂತಹ ಪೂಜ್ಯರ ಆಗಮನ ನಮ್ಮ ಪಾಲಿಗೆ ಪರೀ ಅದೇ ಆಗಿ ಇದರಂತೆ ಬೋಧಿಸಿ ಧನ್ಯರನ್ನಾಗಿ ಮಾಡಬೇಕು ಇದುವರೆಗೆ ಬೋಧಮಾಡಿದ ಮಹಾಸ್ವಾಮಿಗಳವರಿಗೆ ಏನೆಲ್ಲಾ ರನ್ನು ಒಡಗೂಡಿಕೊಂಡು ಆಭಾರ ಮನ್ನಿಸಿ ಇಂದಿನ ಈ ಕಾರ್ಯವನ್ನು ಮುಕ್ತಾಯಗೊಳಿಸುತ್ತೇನೆಂದು ಹೇಳಿದ ನಂತರ ಮಂಗಲಹೊಡನೆ ಸಭೆಯು ಮುಕ್ತಾಯ ಗೊಂಡಿತು

ಗ್ರಾಮಪುರೋಹಿತ
ಮುಖ್ಯ ಗುರೂಜಿ ಹೊಳೆಲೂರು

ಶ್ರೀ ಭಗವತಿ ವಿಶಾಲಾಕ್ಷಿ ಶಿಲಾಮೂರ್ತಿ ಸ್ಥಾಪನೆ ಬೈಲವದ್ದಿಗಿ

ಇಲ್ಲಿಯ ಶ್ರೀಜಗದ್ಗುರು ವಿಶ್ವಾರಾಧ್ಯ ಶಿವಾಕ್ಷರಮಠದಲ್ಲಿ ತಾ॥ ೩೦-೧-೫೩ರ ಮಂಗಳವಾರ ಶ್ರೀ ವಿಶಾಲಾಕ್ಷೀ ಸ್ಥಾಪನ ಮಹೋತ್ಸವವು ಶ್ರೀ॥ ಹಿ॥ ಬ್ರ॥ ಗಂಗಾಧರ ಶಿವಾಚಾರ್ಯಮಹಾಸ್ವಾಮಿಗಳವರ ಘನ ನೇತೃತ್ವದಲ್ಲಿ ವೈಭವಸಂಪನ್ನವಾಗಿ ಜರುಗಿತು. ಬಳ್ಳಾರಿ, ಹೊಸಪೇಟೆ ಮುಂತಾದ ಭಾಗಗಳಿಂದ ಅನೇಕ ಮಹಾಪುರುಷ ಮಹಿಳೆಯರೂ ಭಕ್ತಿಪರರಾಗಿ ಆಗಮಿಸಿದ್ದರು. ಮೈಸೂರು ಪ್ರಸಿದ್ಧ ಶಿಲ್ಪಿವರ್ಯ ಶ್ರೀ ಸಿದ್ಧಲಿಂಗಸ್ವಾಮಿಗಳು ಈ ವಿಗ್ರಹವನ್ನು ಸುಂದರವಾಗಿ ಕೆತ್ತಿಸಿದ್ದಾರೆ ಶ್ರೀಮತಿ ಗಾಳಿ ಗುರುಮ್ಮವರು ಈ ಮೂರ್ತಿ ಅಶ್ವ ಮೆಧ ಸಪ್ಲಿಸಿದ್ದಾರೆ ವೇ॥ ಜೆಜ್ ಯಂ ಶಿವಲಿಂಗಯ್ಯ ನವರು ಪೂರೋಹಿತರಾಗಿದ್ದರು ಬೆಳಿಗ್ಗೆ ೮ ಗಂಟೆಗೆ ಸ್ಥಾಪನಾನಂತರ ಸಾವಿರಾರು ಜನಕ್ಕೆ ಅನ್ನಸಂತರ್ಪಣೆ ನೆರವೇರಿತು ಮಧ್ಯಾಹ್ನ ೩ ಗಂಟೆಗೆ ದೊಡ್ಡಿಮಠದ ಶ್ರೀ ಸಂಗಮೇಶ್ವರಶಿವಾಚಾರ್ಯಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಕಾಶೀಪೀಠ ಸಚ್ಚಕ್ಷಮಂಡಲಿಗಳು ಮತ್ತು ಪರಕ್ಷಲದ ಶಿಷ್ಯರ ಸೇವಾಕ್ಷರಂಗೆ ಫಲಿತ ಮಾರಬದ ಪೂಜ್ಯ ಶ್ರೀಗಳವರ ಶಿವೋಪದೇಶವು ನೆರೆದಿರುವ ಮಹಾಜನಂಗಳಿಗೆಲ್ಲಾ ಕಾರ್ಯ ಕೊನೆಗಂಡಿತು ಮೇಲ್ಕಂಡ ಮಹತ್ತಿಯ ರೀಲ್ಲ ಶ್ರೀ ಜಗದಾಚಾರ್ಯರು ಮಂಗಲವನ್ನೀಯಲೆಂದು ಕಾರೈಸುವ

ಪ್ರತ್ಯಕ್ಷದರ್ಶಿ

ಶ್ರೀ ಕೊಟ್ಟೂರೇಶ್ವರನ ರಥೋತ್ಸವ ಕೂಟ್ಟೂರು

ಆಗಾಧಮಹಿಮಾಶೀಲನಾದ ಶ್ರೀ ಕೊಟ್ಟೂರೇಶ್ವರನ ರಥೋತ್ಸವವು ಮಾಘ ಬ॥ ೧೧ ಮಂಗಳವಾರ ತಾ॥ ೧೦-೨-೫೩ ಮೂಲ ನಕ್ಷತ್ರದಲ್ಲಿ ಪದ್ಧತಿ ಪ್ರಕಾರ ಅತಿ ವಿಜೃಂಭಣೆಯಿಂದ ನಡೆಯುತ್ತಿದೆ ಪ್ರೇಕ್ಷಕರು ಸಾಲಾಲೈ ಆಗಮಿಸಿ ಶ್ರೀ ಸ್ವಾಮಿಯ ದರ್ಶನವನ್ನು ಪಡೆದು ಪುನೀತರಾಗುವರೆಂದು ಅಪೇಕ್ಷಿಸುವ,

ಪ್ರಭುವಿಡೆಯರಮಠದ
ಮರುಳಾರ್ಯ ಕೊಟ್ಟೂರು

ಗ್ರೂಪ ಸಮ್ಮೇಲನ ಜಂಬಿಗಿ

ವಿಜಾಪೂರ ಡಿ॥ ಜಂಬಿಗಿ ಗ್ರಾಮದಲ್ಲಿ ದಿನಾಂಕ ೧೧-೧ ೫೩ ನೇ ದಿವಸ ಕನ್ನಡ ಗಂಡುಮಕ್ಕಳ ಶಾಲೆಯಲ್ಲಿ ಶ್ರೀ ಚರಪಟ್ಟಾಧ್ಯಕ್ಷ ಪರ್ವತೇಶ್ವರಸ್ವಾಮಿಗಳವರ ಹಿರಿಯತನದಲ್ಲಿ ಗ್ರೂಪ ಸಮ್ಮೇಲನವು ನಡೆಯಿತು ಇಲ್ಲಿಯ ಮುಖ್ಯ ಗುರೂಜಿಯವರು ನಾಗಠಾಣ್ಯ ಮುಖ್ಯ ಗುರೂಜಿಯವರ ತಪ್ಪದಿಂದ ಅಧ್ಯಕ್ಷರಿಗೆ ಪೂಮಾಲೆಯನ್ನು ಆಪ ಸಿದರು

ಕಾರ್ಯಕ್ರಮಗಳು —ಬಾಲಕರ ಶಾಲಾ ಶಿಕ್ಷಣಪಡೆ ಚುವಟಿಕೆ ಹಾಗು ಕಾವ್ಯಗಾಯನ ಇತ್ಯಾದಿ ಶ್ರೀ ನಂ ರಾ ಸುಣಗಾರ ಇವರ ಬೆಗರೆ ರಚಿಸೋಣ ಎಂಬ ಬಗ್ಗೆ ಜಾತ ಕೊಟ್ಟರು ನಾಗಠಾಣ ಗ್ರೂಪದ ಮುಖ್ಯ ಗುರೂಜಿಯವರ ಭಾಷಣ, ಶಿಕ್ಷಣವಮ್ಮ ಕುರಿತು ಶ್ರೀ ಆಂದವತೆಯವರ ಭಾಷಣ ಶಿಕ್ಷಣದಲ್ಲಿ ಹಾಲಿಗಳ ಸ್ಥಾನ ಕುರಿತು ಶ್ರೀ ಸಾ ಹಂ ಮಸೂತಿ ಭಾಷಣ ಒತ್ತಾಯ ಶಿಕ್ಷಣ ಕುರಿತು ಶ್ರೀ ವೀ ಆ ಪಾಟೀಲ ಭಾಷಣ ಮೂರೋದ್ಯೋಗದ ಬಗ್ಗೆ ಅಧ್ಯಕ್ಷರು ಸಮ್ಮೇಲನಗಳ ಮಹತ್ವವನ್ನು ತಿಳಿಹೇದನಂತರ ಕಾರ್ಯಟಿಕ ವೀರ ಶರಣ ಬಗ್ಗೆ ಸಭೆಯಲ್ಲಿ ವಿಚರ್ ಚರ್ಚೆಯಾಯಿತು. ಇಲ್ಲಿಯ ಎಲ್ಲ ಪ್ರಮುಖರು ಮತ್ತು ಹೊಸದಾಗಿ ಸ್ಥಾಪಿಸಲ್ಪಟ್ಟ ಪಂಚಾಯತಿಯ ಪಂಚರು ಆಗಮಿಸಿ ಈ ಸಮ್ಮೇಲನ ಕಾರ್ಯಕ್ಕೆ ಒಳ್ಳೇ ಉತ್ತೇಜನ ಕೊಟ್ಟರು ಶ್ರೀ ಹೆಪ್ಪಳ್ಳಿಯ ಮುಖ್ಯ ಗುರೂಜಿಯವರ ಗಾಯನವನ್ನು ಒಳ್ಳೇ ಮನೋಜ್ಞವಾಗಿ ಪಡೆದ ನಂತರ ಒಂದೇ ಮಾತನಲ್ಲಿ ಗೀಡಿಯೊಡನೆ ಸಭೆ ವಿಸರ್ಜನೆ ಯಾಯಿತು.

ಮು. ಶ. ಪಾಟೀಲ, ಜೆ ಪಾ ಜಂಬಿಗಿ.

ಶ್ರೀಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯರ ಜಯಂತೀಮಹೋತ್ಸವ

ಮಹಾಶಿವರಾತ್ರಿ

ಭರತಖಂಡದಲ್ಲಿರುವ ಸಮಸ್ತ ವೀರಶೈವರು ಮಹಾಶಿವರಾತ್ರಿಯ ದಿವಸ ಶ್ರೀಜಗದ್ಗುರು ಪಂಡಿತಾರಾಧ್ಯರ ಹಾಗೂ ಶ್ರೀಜಗದ್ಗುರು ವಿಶ್ವಾರಾಧ್ಯರ ಜಯಂತೀಮಹೋತ್ಸವವನ್ನು ಅತ್ಯಂತ ವೈಭವದಿಂದ ನೆರವೇರಿಸಿ ಧನ್ಯರಾಗಬೇಕು. ಮತಸ್ಥಾಪನಾಚಾರ್ಯರ ಜಯಂತಿಗಳನ್ನು ಮಾಡುವದೇ ಆಸ್ತಿಕಮತಾನುಯಾಯಿಗಳ ಮುಖ್ಯ ಧರ್ಮವಾಗಿದೆ. ಮತಸ್ಥಾಪನಾಚಾರ್ಯರ ಜಯಂತಿಯನ್ನು ದೊಡ್ಡ ಹಬ್ಬದಂತೆ ಅತ್ಯಂತ ವೈಭವದಿಂದ ಆಚರಿಸಬೇಕು. ಪ್ರತಿಯೊಂದು ಗ್ರಾಮದಲ್ಲಿಯೂ ಮಹಾಶಿವರಾತ್ರಿಯ ದಿವಸ ಈ ಮಹಾಚಾರ್ಯರ ಭಾವಚಿತ್ರಗಳನ್ನು ಪೀಠದಲ್ಲಿರಿಸಿ ಷೋಡಶೋಪಚಾರಗಳಿಂದ ಪೂಜಿಸಿ ಮಾಹೇಶ್ವರಾರಾಧನೆಯನ್ನು ಮಾಡಬೇಕು. ಆ ದಿವಸವೇ ಈ ಪೂಜ್ಯಪಾದರ ಭಾವಚಿತ್ರಗಳನ್ನು ಪಲ್ಲಕ್ಕಿಯಲ್ಲಿರಿಸಿ ಸಕಲ ವಾದ್ಯ ವೈಭವದೊಡನೆ ಮಹೋತ್ಸವವನ್ನು ನೆರವೇರಿಸಬೇಕು. ಇದೇ ಲಿಂಗಾಂಗಿಗಳ ಮೂಲಧರ್ಮವು! ಗುರುಗಳ ಜಯಂತಿಗಳನ್ನು ಭಕ್ತಿಯಿಂದ ಆಚರಿಸುವವರೇ ನಿಜವಾದ ವೀರಶೈವರು.

ಸೂಚನೆ

ಪ್ರತಿವರ್ಷ ಪದ್ಧತಿಯಂತೆ ಮಹಾಶಿವರಾತ್ರಿ ನಿಮಿತ್ತವಾಗಿ ಮುಂದಿನ (ತಾ|| ೯—೨—೫೩) ವಾರದ ಪತ್ರಿಕೆಯು ಹೊರಡುವುದಿಲ್ಲ.

ಮ್ಯಾನೇಜರ್

ಶ್ರೀಜಗದ್ಗುರು ಪಂಚಾಚಾರ್ಯರ ಸ್ತುತಿ

ಲೇ —ಶ್ರೀ ವಿರೂಪಾಕ್ಷಶಾಸ್ತ್ರೀ ಪುರಾಣೇಳಮಠ ಹಿರೇಹಡಗಲಿ
[ಧಾಟಿ—ಶ್ರೀಗುರುಪಚಮನುಸದೇಕನಮಾಲಿನಿ ಎಂಬಂತೆ]

ಶ್ರೀಗುರುಪಂಚಾಚಾರ್ಯರ ನಾಮವ ।
ರಾಗದಿ ಭಜಿಸಲು ಬೇರೆವುದು ಮುಕುತಿ ॥೫॥

ಪರಶಿವಪಂಚಾನನಗಳಿಂ ಜನಿಸುತೆ । ಪರಶಿವರೂಪವ ಧರಿಸುತಲಿ । ಧರಣಿಯೊಳುರುತರ । ಲಿಂಗಮೊಳುದಯಿಸಿ ಧರಣಿಯ ಪಾವನಗೈದವರಂ ॥೧॥

ವರವೇದವ್ಯಾಸನಗಸ್ತ್ಯಾವಂದರು । ಮೆರೆವದಧೀಶದೂರ್ವಾಸರಿಗೆ । ಪರತರಶಿವತತ್ವನಮ ಬೋಧಿಸುತ್ತಲಿ । ವರಮುಕ್ತಿಮಾರ್ಗವತೋರಿದರಂ ॥೨॥

ಜಗದೊಳಗಪ್ಪಾವರಣಪಂಚಾಚಾರಮಿಗೆ ಪಟ್ಟುಲಗಳ । ವಿವರಗಳಂ । ಪಿಗಮಾಗಮಗಳಿಂದ । ಶಿವಭಕ್ತ್ಯವಂದಕ್ಕೆ । ಸೊಗಸಿನಿಂದಲಿ ನಿತ್ಯದೋಧಿಸರಂ ॥೩॥

ಅಕ್ಷಮಾಲಾಶಿವಲಾಕ್ಷ ಭಸ್ಮಾಂಕಿತ । ವಕ್ಷಸ್ಥಲಮಂಡಲ ಭೂಷಿತರಂ । ದೀಕ್ಷೆ ಶಿಕ್ಷೆ ನೋಕ್ಷೆ । ತ್ರಿವಿಧಗುರುತ್ವದಿ । ಈಕ್ಷಿತಮಾನವನಿಳರ ರಕ್ಷಕರಂ ॥೪॥

ದುಷ್ಕಗ್ರಹ ಶಿಷ್ಟಪಾಲನಗೈಯುತೆ । ಸೃಷ್ಟಿಯೊಳಗೆ ಕೀರ್ತಿ ಪಡೆದವರಂ । ಶ್ರೀಕ್ಷ ಹಿರೆಹಡಗಲಿ ಪೌರಾಣೇಳ ಮಠ । ಶಿಷ್ಟವಿರೂಪಾಕ್ಷ ಬುಧನುತರಂ ॥೫॥

ಗೀತಾಸಂದೇಶ

ಲೇ —ಶ್ರೀ ಸಂಗಪ್ಪಾಮಂಸ್ಥಾನ ಶಿವಲೀಲಾಕ್ಷ್ರಮ ಹೊಡ್ಡಮುದಾಣಿ

ವೇದಾಂತ ಅಧ್ಯಯನದ ಉದ್ದೇಶವು ಬ್ರಹ್ಮಜ್ಞಾನ್ವಾ, ತ್ಯಾರ ಬ್ರಹ್ಮನನ್ನು ಪಡೆಯುವುದಕ್ಕೆ ಮೊದಲು ಚಿತ್ತಶುದ್ಧಿ, ವಿವೇಕ, ಸತ್ಯವಾವುದು, ಮಿಥ್ಯೆಯಾವುದು, ನಿತ್ಯಯಾವುದು, ಅನಿತ್ಯವಾವುದು ಎಂಬುದು ತಿಳಿಯಬೇಕು.

ಶಂಕರನ ದೃಷ್ಟಿಯಂತೆ ಜಗತ್ತಿಲ್ಲವೂ ಮಾಯಾ ಬ್ರಹ್ಮನನ್ನು ಅಂದರೆ ಜಗತ್ತಿನ ಸೃಷ್ಟಿಯನ್ನು ದೇವರೆಂದು ತಿಳಿದು ಪ್ರತಿಸಿರಿ ಜ್ಞಾನ ಮತ್ತು ಭಕ್ತಿ ಇವೆರಡೂ ಮಾರ್ಗಗಳು ದೇವರ ಕಡೆಗೆ ಗಮನವಿರಲಿ ವೇದಾಂತಿಯು ಶಮ, ದಮ, ಉಪರತಿ, ಶ್ರದ್ಧೆ, ಸಮಾಧಾನ ಈ ಗುಣಗಳನ್ನು ಸಂಪಾದಿಸಬೇಕು ನಿಷ್ಕಾರ್ಥತೆಯೇ ಧರ್ಮಜೀವನದ ಮೂಲಮಂತ್ರ ಜ್ಞಾನೆಂಬುದನ್ನು ಗೆಲ್ಲುವುದೇ ಮುಖ್ಯತತ್ವ. ಮನಸ್ಸಿನ ಚಪಲತೆಗಳನ್ನು ಗೆದ್ದು ಅದನ್ನು ಶಾಂತಿಸ್ಥಿತಿಗೆ ತಂದರೆ ಬ್ರಹ್ಮನು ತಾನಾಗಿ ಅಲ್ಲಿ ಪ್ರಕಟನಾಗುವನು ನಿತ್ಯಾನಿತ್ಯ ವಿವೇಕವನ್ನು ಅನುಸರಿಸಿ ಮನಸ್ಸನ್ನು ಸತ್ಯವಾವುದರ ಮೇಲೆ ನಿಲ್ಲಿಸುವುದೇ ಅಗತ್ಯ ದೇವರನ್ನು ಕಾಣಬೇಕೆಂಬ ಆಕಾಂಕ್ಷೆ ಜಗತ್ತಿನ ಕಡೆಗೆ ಉಪೇಕ್ಷೆ ಇವನ್ನು ಮನಸ್ಸಿನ ಮುಖಾಂತರವೆ ಸಾಧಿಸಬೇಕು ಮನಸ್ಸನ್ನು ಈ ರೀತಿ ಮಾಡುವ ಶಾಸ್ತ್ರವೇ ಯೋಗಶಾಸ್ತ್ರ. ಮೋಕ್ಷ ವೆಂದರೆ ನಿರಂತರವಾದ ನಿರತಿಶಯವಾದ ಸುಖ.

ಜಗತ್ತು ತಾನಾಗಿ ಇಷ್ಟಿಸಿತು :—ಅದನ್ನು ಸೃಷ್ಟಿಸಲು ದೇವರು ಬೇಕಾಗಿಲ್ಲ ಎಂದು ಸಾಂಖ್ಯ ವೇದಾಂತಿಗಳು ಹೇಳುತ್ತಾರೆ ಇವರ ದೃಷ್ಟಿಯಲ್ಲಿ ಪ್ರಕೃತಿಯೇ ಶಕ್ತಿಮಯ. ಪುರುಷ ಬೇಕಾಗಿಲ್ಲ ದೇವರೇ ಜಗದ್ರೂಪದಲ್ಲಿ ಪ್ರಕಟವಾಗಿದ್ದಾನೆ ಅಕ್ಷರ ಪಿಂಡಾಣ, ನಿರ್ವಿಕಾರ, ಪ್ರಕೃತಿಯು ಪುರುಷನಲ್ಲಿ ಲಯವಾಗಿ ನಿಶ್ಚಾಕ್ಷರ ಸಮಾಧಿ ಸ್ಥಿತಿಯಲ್ಲಿ ಜಗತ್ತು, ಅವ್ಯಕ್ತವಾಗಿ ಪರಮಾತ್ಮನೊಬ್ಬನೇ ಇರುತ್ತಾನೆ ಸಮಾಧಿಸ್ಥಿತಿಗಳವಶಂತರ ಜಗತ್ತು ಮತ್ತೆ ಪ್ರಕಟವಾಗುತ್ತದೆ. ಪ್ರಕೃತಿ, ಆಕಾಶ, ಜೀವ, ಅವ್ಯಕ್ತ, ಅಕ್ಷರಾಕ್ಷರ ಎಂದು

ಶಾನಾ ಜೆಸರಿಸಿಂದ ಆರಿದಿಯಿತ್ತಾರೆ ಆತ್ಮನ ನೆಮ್ಮ ಅಮರಿಪಕ್ಕೆ ಸಿಕ್ಕಿದೆ ದೂರವಾಗುತ್ತದೆ ಅದು ದೂರವಾದ ಮಾತ್ರಕ್ಕೆ ಇಲ್ಲವೆಂದು ನಾವು ನಿರ್ಧರಿಸುವುದಕ್ಕಾಗುವುದಿಲ್ಲ ಉದಾಹರಣೆ —ನಾವು ' ಗಾಳಿ ನಿಮ್ಮೆಯಲ್ಲಿದ್ದಾಗ ಈ ಜಗತ್ತು ಇರಲಿಲ್ಲವೆಂದು ನಾವು ಹೇಳುವುದಕ್ಕಾಗುವುದಿಲ್ಲ ನಾವು ಮಲಗಿರುವಾಗ ಒಂದು ದಿನ ಪ್ರಳಯವಾಗಿ ಹೋಗುತ್ತೆ ಬೆಳಿಗ್ಗೆ ಎಚ್ಚರವಾದಾಗ ಜಗತ್ತು ಸೃಷ್ಟಿಯಾಗಿರುತ್ತೆ ಮೊದಲು ಸತ್ಯವಿದ್ದಿತು ಎಂದರೆ ಚಿನ್ನವಿದ್ದು ಆಮೇಲೆ ಉಂಟಾದ ಬಳ್ಳಿ, ಡಾಬು, ಚೈನಾಗಿಗಳು ಇರಲಿಲ್ಲ ಕಾಲ, ದೇಶ, ಕಾರ್ಯ, ಕಾರಣವೆಲ್ಲವೂ ಪರಸ್ಪರ ಸಂಭಂಧವುಳ್ಳವು ಜಗತ್ತು ಬದಲಾವಣೆ ಹೊಂದುತ್ತಿದೆ ವಿಜ್ಞಾನಿಯ ಪೃಷ್ಟಿಯಲ್ಲಿ ವಿಶ್ವವು ಶಕ್ತಿಯ ಸ್ವರೂಪವೆಂದು ಮಾಂಸತ್ಯದಿಂದ ಪ್ರಕಟವಾಗುತ್ತೆ

ಕಾರಣದಲ್ಲಿರುವುದು ಕಾರ್ಯದಲ್ಲಿರಬೇಕು ·—

ಹೂವಿನ ಸ್ವರೂಪ ಬೀಜದಲ್ಲಿ ಮೊದಲಿದ್ದಿರಬೇಕು ನೂಲಿಗೆ ಬಣ್ಣಹಾಕಿದರೆ ಅದರಿಂದಾದ ಬಟ್ಟೆಯು ಬಣ್ಣವಾಗಿ ಕಾಣಲೇಬೇಕು ಬೀಜವನ್ನು ಸರಿಯಾದ ಪ್ರೌಢದಲ್ಲಿಟ್ಟರೆ ಮರವಾಗಿ ಕಾಣಲೇಬೇಕು ಬೀಜವನ್ನು ಒಂದು ಸೀಸೆಯಲ್ಲಿಟ್ಟರೆ ಮರವಾಗಲಾರದು ಬೀಜದಲ್ಲಿ ಮೊದಲು ಶಕ್ತಿ ಇದ್ದುದರಿಂದ ತನ್ನ ನೈಜಸ್ವರೂಪದಲ್ಲಿ ಪ್ರಕಟವಾಯಿತು ಎಂದರೆ ಪ್ರಕೃತಿಯು ಗುಣಮಯಿ ಎಂದು ನಿರ್ಧರಿಸಿದಾಯಿತು ಸತ್ಯ ರಜ ತಮ ಈ ಮೂರು ಗುಣತ್ರಯಾನ ಜಗತ್ತಿನಲ್ಲಿ ಎಲ್ಲಾ ವಸ್ತುಗಳಲ್ಲಿಯೂ ಇವೆ ಈ ಮೂರು ಗುಣಗಳು ಹಿಂದಿನಿಂದಲೂ ಇದ್ದವೆಂದು ವಿವರಿಸುವುದು ಸಾಧ್ಯವಿಲ್ಲ

ಮೊಟ್ಟೆಯನ್ನು ಕಂಡಿದ್ದ ಮಗುವಿಗೆ ಹಕ್ಕಿ ಮರಿ ಹುಟ್ಟುವುದು ಆಶ್ಚರ್ಯವಾಗುತ್ತೆ ಆದರೆ ಹುಡುಗಪ್ಪ ವಿಚಾರ ಬಂದಾಗ ಅದು ಅರ್ಥವಾಗುತ್ತೆ ಹಾಗೆಯೇ ತಿಳಿವಳಿಕೆ ಹೆಚ್ಚಿದಾಗ ಸೃಷ್ಟಿಕರ್ತನ ರಹಸ್ಯ ವಿನೋದುದರ ಜಿಜ್ಞಾಸೆ ಹುಟ್ಟುವುದು ಹರಿಯುಹೋಗುತ್ತದೆ ಪ್ರಕೃತಿಯು ತ್ರಿಗುಣಮಯಿ ಈ ಮೂರು ಗುಣಗಳು ಈ ಜಗತ್ತಿನ ಬಂಧನ, ಮಮತೆ ಇವಕ್ಕೆಲ್ಲಾ ಕಾರಣವಾಗಿವೆ ಇವು ಅವ್ಯಕ್ತ ಪ್ರಕೃತಿಯಲ್ಲಿ ಮೊದಲಿನಿಂದ ಇದ್ದವು ಇವೇ ಈ ಜಗತ್ತಿನ ನಾನಾಬಗೆಯ ರೂಪಗಳ ಪ್ರಕಟನೆಗೆ ಕಾರಣವಾಗಿವೆ ಈ ಮೂರು ಗುಣಗಳನ್ನು ಗೆದ್ದವನು ಜ್ಞಾನಪುರುಷ ತ್ಯಾಗ, ಸೇವೆ, ಇವುಗಳ ಅಭ್ಯಾಸ, ಜ್ಞಾನಪುರುಷರಾಗಲು ಅವಶ್ಯಕ ಈ ಜಗತ್ತಿನಲ್ಲಿ ಇರುವುದು ಮೂರೇ ಗುಣ. ಪ್ರಕೃತಿಯ ಸ್ವರೂಪವನ್ನು ತಿಳಿದಾತನು ಸಂಸಾರದಿಂದ ಮುಕ್ತನಾಗುತ್ತಾನೆ ವೇದಾಂತಿಯು ವಿಜ್ಞಾನಿಯ ಶಕ್ತಿಯನ್ನು ಪ್ರಕೃತಿಯೆಂದು ಇರೆಯುತ್ತಾನೆ ಪ್ರಕೃತಿಯ ಶಕ್ತಿಯಿಂದ ಹುಟ್ಟಿರುವ ಮನುಷ್ಯನು ಸುಖ, ದುಃಖದಲ್ಲಿ ಭಾಗಿಯಾಗುತ್ತಾನೆ

ಪಂ॥ ಶ್ರೀ ಕೈಲಾಸಲಿಂಗತಿನಾಚಾರ್ಯ ಮಹಾಸ್ವಾಮಿಗಳವರ ಸಂಚಾರವು

ಶ್ರೀ ಜಗದ್ಗುರು ವಿಶ್ವೇರಾಮಾರಾಧ್ಯ ಪೀಠಾಧ್ಯಕ್ಷರಾಗಿದ್ದ ಶ್ರೀ॥ ಶ್ರೀಲಶ್ರೀಕಂಠಲಿಂಗತಿನಾಚಾರ್ಯ ಮಹಾಸ್ವಾಮಿಗಳವರ ಮುಖ್ಯಶಿಷ್ಯರಾದ ಶ್ರೀ ಕೈಲಾಸಲಿಂಗ ತಿನಾಚಾರ್ಯಸ್ವಾಮಿಗಳವರು ಧಾರವಾಡ ದಿಲ್ಲಾ— ಕುಂದಗೋಳ ಮತಾಲಿಗೆ ಸೇರಿದ ಕಿರೂರಿಂದ ಶಾ॥ ೩೩ ಗತ-೧೯೩೨ ಇವರ ದಿವಸ ಶ್ರೀ ಪುರಗಿರಿ ಸೋಮೇಶ್ವರ ಈ ಶಿವಕ್ಷೇತ್ರವಿರಾಜಿತ ಲಕ್ಷ್ಮೇಶ್ವರ ನಗರಕ್ಕೆ ಆಗಮಿಸಿದರು. ಶ್ರೀಗಳವರನ್ನು ಪುರಪ್ರಮುಖರಾದ ವೀರಶೈವ ಮಹಜನ ಗಣ್ಯಮಾನ್ಯರಾದ ಕೆಳಕಂಡ ಮಹಾನುಭಾವರು ಸ್ವಾಗತಿಸಿದರು

ವೇ॥ ಶ್ರೀ ಸುರೀಮಠದ ಶರಮೂರ್ತಿಸ್ವಾಮಿಗಳು
ವೇ॥ ಶ್ರೀ ಹಿರೇಮಠದ ಗಂಗಯ್ಯನವರು ಜಗೂ ವೀರಸೋಮಯ್ಯನವರು
ವೇ॥ ಶ್ರೀ ಗಡ್ಡದೇವರಮಠದ ಶಿವಮೂರ್ತಯ್ಯ ಸ್ವಾಮಿಗಳು
ವೇ॥ ಶ್ರೀ ಪುರಾಣಿಕಮಠದ ಶಕ್ತಿಸೋಮಯ್ಯನವರು
,, ಶಿಪ್ಪಯ್ಯನವರು.
ವೇ॥ ಶ್ರೀ ಹಾಲೇಶಿಮಠದ ಗಡಿಗೆಯ್ಯನವರು
ವೇ॥ ಶ್ರೀ ಏಳಗೀಮಠದ ರಾಚಯ್ಯನವರು
ಶ್ರೀಮನ್ಮಹಾಜಪಕಯ್ಯರ ಶಿವಶೋಗೆಪ್ಪನವರು
,, ಕಲ್ಲೂರಿ ಬಸಪ್ಪನವರು
,, ಕುಮಟಿ ಶಿವಪ್ಪನವರು
,, ಮೈಕಿ ಮುರಿಗೆಪ್ಪನವರು
,, ಸವಣೂರು ಫಕ್ಕೀರಪ್ಪನವರು -
,, ದಾಸಿ ಫಕ್ಕೀರಪ್ಪನವರು
,, ಬೋಳಶೆಟ್ಟಿ ಬಸಿಟ್ಟಿಪ್ಪನವರು
,, ಮಲ್ಲಾಂಕಶೆಟ್ಟರ ಗಡಿಗೆಪ್ಪನವರು
,, ಹುಬ್ಬಿನ ಗಂಗಪ್ಪನವರು

ಇನ್ನೂ ಅನೇಕ ಮಹಾಶಯರು ಈ ಸ್ವಾಗತ ಮೆಮೋರಿಪ್ಪನದಲ್ಲಿ ಸಮ್ಮಿಲಿತಾಗಿದ್ದರು ಶ್ರೀಗಳವರು ಕೇದಾರ ನಿಲಿದ ಮತ್ತು ಕೇದಾರೀಶ್ವರ ಶ್ರೀಜಗದ್ಗುರು ವಿಶೇಷ ರಾಮಾರಾಧ್ಯೋತ್ಸವ ಪುರಾತನಚರಿತ್ರೆಗಳನ್ನು ವರ್ಣಿಸಿದರು ಮಹಾಸ್ವಾಮಿಗಳವರ ಬೋಧೆಯನ್ನು ಕೇಳಿ ಸಂತುಷ್ಟಚಿತ್ತರಾದ ವೀರಶೈವ ಭಕ್ತಮಂಡಳಿಯವರು ಶ್ರೀಗಳವರಿಗೆ ಶ್ರೀಕಾಲಶಿವಪೂಜೆಯನ್ನು ಮಾಡಿಸುತ್ತಾ ಸಕಲ ಶಿವಭಕ್ತರು ಕೂಡಿಕೊಂಡು ಪ್ರತಿದಿನವೂ ಸಾಯಂಕಾಲದಲ್ಲಿ ಶ್ರೀ ಮಹಾಸನ್ನಿಧಿಯವರು ಬೋಧಿಸುತ್ತಿರುವ ಶ್ರೀ ಶಿವಮಾಹಾತ್ಮ್ಯವನ್ನು ಕೇಳಿ ಧನ್ಯರಾಗುತ್ತಿರುವ ದಲ್ಲದೆ ಪ್ರತಿಯೊಂದು ಓಣಿಯ ಭಕ್ತಮಜೇಶ್ವರರು ಕೂಡಿಕೊಂಡು ತಮ್ಮ ತಮ್ಮ ಮಂದಿಕೆಗಳಲ್ಲಿಯೂ ಸಮೀಪದ ದೇವಸ್ಥಾನಗಳಲ್ಲಿಯೂ ಸಭೆಯನ್ನು ಏರ್ಪಡಿಸಿ ಮಹಾಸನ್ನಿಧಿಯವರಿಂದ ಧರ್ಮೋಪದೇಶವನ್ನು ಕೇಳಿ ಪರಮಾನಂದಭರಿತರಾಗುತ್ತಿರುವರಿಗೆ ಸಮೃ ಸನ್ನಿಧಿಯವರ ಕಾಂಪು ಲಕ್ಷ್ಮೇಶ್ವರದಲ್ಲಿಯೇ ಇರು ತ್ತಿದೆ ಮಹಾಸನ್ನಿಧಿಯವರ ದರ್ಶನಾಶೀರ್ವಾದದ ಮೂಲಕ ಅಪೇಕ್ಷಿತರು ಪುನೀತರಾಗಬೇಕಾಗಿ ಪ್ರಾರ್ಥನೆ

ಫಕ್ಕೀರಪ್ಪ ಬಸಪ್ಪ ದಾಸಿ.

ವರ್ತಮಾನ ಸಂಗ್ರಹ

ಭಾಷಾವಾರು ಪ್ರಾಂತ್ಯ ನಿರ್ಣಯದ ಆಶಾಭಂಗ

ಹೈದರಾಬಾದು ಕಾಂಗ್ರೆಸ್ ಅಧಿವೇಶನದಲ್ಲಿ ಭಾಷಾವಾರು ಪ್ರಾಂತ್ಯಗಳ ಬಗ್ಗೆ ಅಂಗೀಕರಿಸಲ್ಪಟ್ಟ ನಿರ್ಣಯದಿಂದ ತಮಗೆ ಆಶಾಭಂಗ ಉಂಟಾಗಿದೆಯೆಂದು ಜೋಬಾಯಿನ್ ರಿವಿನ್ಯೂ ಸಚಿವರಾದ ಶ್ರೀ ಬಿ ಎಸ್ ಹಿರೇಯವರು ನುಡಿದರು

ಶ್ರೀ ಹಿರೇಯವರು ವಿಶೇಷ ಆಹ್ವಾನದ ಮೇಲೆ ಅಲ್ಲಿಗೆ ತೆರಳಿದ್ದರು ಮಹಾರಾಷ್ಟ್ರ ಪ್ರಾಂತ್ಯಕ್ಕೆ ಸಂಬಂಧಿಸಿದಂತೆ ಜಿಲ್ಲಾವಲ್ ನಡೆಸಲು ಈ ನಿರ್ಣಯದಿಂದೇನೂ ಪ್ರತಿಬಂಧಕವಿಲ್ಲ ಎಂಬುದಾಗಿ ಅವರು ತಿಳಿಸಿದರು

ಸ್ಟೀರಿಂಗ್ ಕಮಿಟಿಯ ಮುಂದೆ ಬಂದಿದ್ದ ಮೂಲ ನಿರ್ಣಯದ ವಿಚಾರದಲ್ಲಿ ಅವರು ಅದು ಬಹಳ ಕಠಿಣ ರೀತಿಯಲ್ಲಿದ್ದು ಅನೇಕ ಪರಿಷ್ಕರಗಳನ್ನು ಒಳಗೊಂಡಿ ತ್ತೆಂದೂ ನಿವೃತ್ತ ಒತ್ತಾಯದಿಂದ ಪಂ॥ ನೆಹರೂ ಅವರ ಕಾಣಿಕ್ಯತೆಯನ್ನು ಕಡಿಮೆಗೊಳಿಸಿದರೆಂದೂ ಹೇಳಿದರು

ಕರ್ನಾಟಕಕ್ಕೆ ಬಹಳ ಅನ್ಯಾಯವಾಗಿದೆ

ಕರ್ನಾಟಕ ಪ್ರಾಂತ್ಯ ಸ್ಥಾಪನೆಗಾಗಿ ಏಳುದಿನಗಳ ಉಪವಾಸವನ್ನು ಕೈಗೊಂಡಿದ್ದ ಶ್ರೀ ನಿಜಲಿಂಗಯ್ಯನವರು ತಮ್ಮ ಉಪವಾಸವನ್ನು ಮುಕ್ತಾಯಗೊಳಿಸುತ್ತ ಹೈದ್ರಾಬಾದ್ ಕಾಂಗ್ರೆಸ್ ಅಧಿವೇಶನದಲ್ಲಾದ ನಿರ್ಣಯವು ಹಿಂದೆ ಕಾಂಗ್ರೆಸ್ಸು ಪ್ರಜೆಗಳಿಗೆ ಕೊಟ್ಟಿದ್ದ ವಚನ ಮತ್ತು ಧರವಸೆಗಳಿಗೆ ತೀರ ವಿರುದ್ಧವಾಗಿದೆ ಎಂದರು

ಈ ವಿಚಾರದಲ್ಲಿ ಮೈಸೂರಿನ ಮುಖ್ಯಮಂತ್ರಿಗಳಾದ ಶ್ರೀ ಕೆ ಹನುಮಂತಯ್ಯನವರೂ ಮತ್ತು ಇತರ ಅನೇಕ ನಾಯಕರೂ ತೋರಿಸಿರುವ ನಿಲುವು ಸರಿಯಾಗಿದೆ ಯೆಂದರು.

ಅನೇಕ ತಿಂಗಳು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಸೂಚನೆಗೆ ತಲೆಬಾಗಬೇಕು. ಆಥವಾ ಕರ್ನಾಟಕ ಪ್ರಾಂತ್ಯ ಸ್ಥಾಪನೆಗಾಗಿ ಮುಂದಿನ ಕಾರ್ಯಕ್ರಮವನ್ನು ಸಿದ್ಧಗೊಳಿಸಬೇಕು ಎಂದರು.

ಕಾಂಗ್ರೆಸ್ ಪಕ್ಷದವರು ತಮ್ಮ ಅಕೋಪ್ತರಗಳನ್ನು ನೆರವೇರಿಸಿಕೊಡುವರೆಂಬ ನಂಬಿಕೆ ನನ್ನಲ್ಲಿ ಬಹಳ ವೇಗ ಮಾಯವಾಗುತ್ತಿದೆ. ಎಂದು ಹೇಳಿ, ಕನ್ನಡಿಗರ ನ್ಯಾಯವಾದ ಬೇಡಿಕೆಯನ್ನು ಈಡೇರಿಸಿಕೊಡಲು ವರ್ಕಿಂಗ್ ಕಮಿಟಿಗೆ ಕಟ್ಟುಕಡೆಯ ಅವಕಾಶ ಕೊಡಬೇಕೆಂದು ಅಧ್ಯಾಯಪಟ್ಟರು

ಕರ್ನಾಟಕದಲ್ಲಿ ಕಾಂಗ್ರೆಸ್ಸಿಗೆ ಸಂಬಂಧಿಸಿದ ಕಾರ್ಯಗಳನ್ನು ನಿಲ್ಲಿಸುವುದರ ಮೂಲಕ ನಾವು ಕಾಂಗ್ರೆಸ್ ಹೈಕಮ್ಯಾಂಡ್‌ನೊಂದಿಗೆ ಹೋರಾಟ ಆರಂಭಿಸಬೇಕು. ಮೊಟ್ಟಮೊದಲಿನ ಕಾರ್ಯಕ್ರಮವಾಗಿ, ನಾನಾ ಸಮಿತಿಗಳಿಗೆ ಜನಾನಾಕೆ ನಡೆಸದಂತೆ ಜಿಲ್ಲಾ ಕಾಂಗ್ರೆಸ್ ಸಮಿತಿಗಳು ಮತ್ತು ಇತರ ಅಧೀನ ಸಮಿತಿಗಳಿಗೆ ಕೆ ಪಿ ಸಿ ಸೂಚನೆ ಕೊಡಬೇಕು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯು ಅಲಸ್ಯ ನೀತಿಯನ್ನು ತ್ಯಜಿಸಿ ಧೈರ್ಯದಿಂದ ಮುಂದೆ ನುಗ್ಗಬೇಕು ಈ ಸಮಯದಲ್ಲಿ ತಕ್ಕ ಕಾರ್ಯಕ್ರಮ ಕೈಗೊಳ್ಳಲು ಕೆ ಪಿ ಸಿ ಮುಂದೆ ಒರದೇ ಇದ್ದರೆ, ಇತರರು ಸೂಕ್ತ ಕಾರ್ಯಕ್ರಮ ಕೈಗಿಳ್ಳಬೇಕು ಎಂಬುದಾಗಿ ಶ್ರೀ ನಿಜಲಿಂಗಯ್ಯನವರು ತಿಳಿಸಿದರು

ಉಪವಾಸ ಮಾಡಿದ್ದರಿಂದ ಶ್ರೀ ನಿಜಲಿಂಗಯ್ಯನವರು ದುರ್ಬಲರಾಗಿದ್ದಾರೆ

ಕರ್ನಾಟಕಪ್ರಾಂತ್ಯ ರಚನೆ ಕೂಡಲೇ ಆಗಬೇಕು

ಮೈಸೂರು ಮತ್ತು ಕೊಡಗಿನ್ನು ಒಳಗೊಂಡ ವಿಶಾಲ ಕರ್ನಾಟಕ ಸ್ವಾಪನೆಗಾಗಿ ಭಾರತ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕು. ಮತ್ತು ಪ್ರಸಕ್ತ ಪ್ರಾಂತ್ಯದ ಗಡಿ ನಿರ್ಧಾರಕ್ಕಾಗಿ ಬೌಂದರಿ ಕಮಿಷನನ್ನು ರಚಿಸಬೇಕು. ಎಂಬ ನಿರ್ಣಯವನ್ನು ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಎಂ ಎಸ್. ಗುರುಪಾದಸ್ವಾಮಿಯವರು ಮುಂದಿನ ಪಾರ್ಲಿಮೆಂಟ್ ಬಜೆಟ್ ಅಧಿವೇಶನದ ಮುಂದೆ ಮಂಡಿಸಲಿದ್ದಾರೆ. ಅಲ್ಲದೆ ಸರ್ಕಾರದ ಈಗಿನ ಆಹಾರನೀತಿ ಮತ್ತು ವಿದೇಶಾಂಗ ನೀತಿಗಳಲ್ಲಿ ಬಹಳ ಲಾವಣೆ ಆಗಬೇಕೆಂದೂ ಮತ್ತು ರಾಷ್ಟ್ರದ ಅಥಿಕ ಭದ್ರತೆಯ ಸಲುವಾಗಿ ಪ್ರಮುಖ ಕೈಗಾರಿಕೆಯ ರಾಷ್ಟ್ರೀಕರಣ ಕ್ರಮಕೈಗೊಳಿಸಬೇಕೆಂಬ ನಿರ್ಣಯಗಳನ್ನೂ ಮಂಡಿಸಲಿದ್ದಾರೆ

ಮೈಸೂರು ಸಹಿತ ಕರ್ನಾಟಕ ಪ್ರಾಂತವಾಗಬೇಕು

ಮೈಸೂರು ಸಹಿತ ಕರ್ನಾಟಕ ಪ್ರಾಂತ ನಿರ್ಮಾಣವಾಗಬೇಕು, ಎಂಬ ಒಂದು ಮನವಿಗೆ ೫೬ ಮಂದಿ ಶಾಸನ ಸಭಾ ಸದಸ್ಯರು ರುಜುಹಾಕಿ ಪ್ರಧಾನಿ ಶ್ರೀ ಜವಹರಲಾಲ್ ನೆಹರು ಅವರಿಗೆ ಕಳಿಸಿದ್ದಾರೆ, ಎಂದು ಗೊತ್ತಾಗಿದೆ

ಬಳ್ಳಾರಿ ಜಿಲ್ಲೆಯನ್ನು ವಿಭಾಗಿಸಲಾಗದು

ಬಳ್ಳಾರಿ ಜಿಲ್ಲೆಯನ್ನು ವಿಭಾಗಿಸಲಾಗದು ಇಡೀ ಜಿಲ್ಲೆಯನ್ನು ಮೈಸೂರಿನೊಂದಿಗೋ ಆಥವಾ ಪ್ರಕೃತಿಕ ಆಂಧ್ರಪ್ರಾಂತ್ಯದೊಂದಿಗೋ ಸೇರಿಸಬೇಕು—ಎಂಬುದಾಗಿ ಜಿಲ್ಲಾ ಮೋರ್ಚ್ ನವರು ನಿರ್ಣಯಮಾಡಿದ್ದಾರೆ ಇಲ್ಲದಿದೆ ಆಂಧ್ರಪ್ರಾಂತ್ಯದೊಡಿಗೆ ಕರ್ನಾಟಕ ಪ್ರಾಂತ್ಯವನ್ನು ರಚಿಸಬೇಕೆಂದು ಮತ್ತೊಂದು ನಿರ್ಣಯವಾಯ್ತು

ಭಾಷಾವಾರು ಪ್ರಾಂತ್ಯ ರಚನೆ ಒಳ್ಳೆಯದು

ಶ್ರೀ ದೇವಮುಖರವರ ಅಭಿಪ್ರಾಯ

ಸಾಂಸ್ಕೃತಿಕ ಮತ್ತು ಭಾಷಾವಾರು ಆಧಾರ ಮೇಲೆ ಪ್ರಾಂತ್ಯಗಳ ಪುನರ್ವಿಂಗಡನೆಯನ್ನು ನಾನು ಸ್ವಾಗತಿಸುತ್ತೇನೆ. ಭಾರತ ಸರಕಾರದ ಅಭಿಪ್ರಾಯವು ಅದೇ ಆಗಿದೆ—ಎಂಬುದಾಗಿ ಹರಿಜನಸೇವಕ ಶ್ರೀ ಸಿ. ಡಿ ದೇವಮುಖರವರು ತಿಳಿಸಿದರು.

ಪುಣೆಯ ಅಂದ, ಸಂಜೀವರು ಮತ್ತು [illegible]

ಪತ್ನಿಯ ಗೌರವಾರ್ಥವಾಗಿ ಏರ್ಪಡಿಸಿದ್ದ ಸತ್ಕಾರ ಕೂಟದಲ್ಲಿ ಸಚಿವರು ಮಾತನಾಡುತ್ತ 'ಅಂತಹ ಪನ ರ್ಪಚೆನೆ ನಡೆದರೂ ಭಾರತ ಸಂಸ್ಕೃತಿಯು ಅಮರವಿಶ್ವ ವಸ್ಸು ಉಳಿಸಿ ಬೆಳೆಸಿಕೊಂಡು ಬರುವುದು ಅಗತ್ಯ ಎಂದರು ಶ್ರೀಮತಿ ದುರ್ಗಾಬಾಯ್‌ರವರು ನಾಲ್ಕು ಮಾತುಗಳನ್ನಾಡಿದರು

ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಭಾಷಾವಾರು ಪ್ರಾಂತ ರಚನೆಯು ವಿಷಯ

ಹೈದರಾಬಾದಿನ ಬಳಿ ನಾನಲ್ ನಗರದಲ್ಲಿ ನೇರಿದ್ದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಭಾ ಷಾವಾರು ಪ್ರಾಂತದ ರಚನೆಯ ಬಗ್ಗೆ ತೀವ್ರವಾದ ಚರ್ಚೆ ನಡೆಯಿತು

ಕರ್ನಾಟಕ ಪ್ರಾಂತ ರಚನೆಯ ವಿಷಯ ಒಂದಾಗಿ ಮೈಸೂರಿನ ಮುಖ್ಯಮಂತ್ರಿಗಳಾದ ಶ್ರೀ ಕೆ ಹನುಮಂತ ಯ್ಯನವರು ಮಾತಾಡುತ್ತ ಭಾಷಾವಾರು ಪ್ರಾಂತ ರಚ ನೆಯ ಬಗ್ಗೆ ಸಂಬಂಧಪಟ್ಟ ಎರಡು ಪಕ್ಷಗಳ ನಡುವೆ ಒಪ್ಪಂದವಾಗಬೇಕು ಎಂದು ಒತ್ತಾಯಪಡಿಸುವುದು ಸರಿಯಲ್ಲ ಆದು ವೇವೆಲ್ ಮತ್ತು ಲಿನ್‌ಲಿತ್ಗೋ ಆವರ ಭಾಷೆಯನ್ನು ಆಡಿದಂತೆ ಭಾಷಾವಾರು ಪ್ರಾಂತ ರಚನೆಯ ವಿಷಯ ವನ್ನು ವಂದಕ್ಕೆ ದೂರದೆ ಆದರ ಬಗ್ಗೆ ಮೌಂಟ್‌ಬ್ಯಾಟನ್ ವ ನೋಭಾವವನ್ನು ಅನು ಸರಿಸುವುದು ಒಳ್ಳೆಯದು ಭಾಷಾವಾರು ಪ್ರಾಂತ ರಚನೆಯ ಒಳ್ಳೆ ಬಾಬತ್ತಾದ ತೀರ್ಮಾನವಾಗಬೇಕು ಎಂದು ತಿಳಿಸಿದರು

ಶ್ರೀ ಎಚ ಸಿ ದಾಸಪ್ಪನವರು ಮಾತನಾಡುತ ಭಾಷಾವಾರು ಪ್ರಾಂತರಚನೆಗೆ ವೈಮನಸ್ಯವಿಲ್ಲ ವಿರೋಧ ವಿಲ್ಲ ಎಂದು ತಿಳಿಸಿದರು ಕರ್ನಾಟಕ ಪ್ರಾಂತ ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ಎಸ್ ನಿಜಲಿಂಗಪ್ಪನವರು ಕರ್ನಾಟಕ ಪ್ರಾಂತ ರಚನೆ ಆವಶ್ಯ ಜಾಗ್ರತೆ ಆಗಬೇಕು ಎಂದು ಒತ್ತಾಯ ಪಡಿಸಿದರು

ವಿಜಯವಾಡದಲ್ಲಿ ಆಂಧ್ರಪ್ರಾಂತ್ಯದ ಬಗ್ಗೆ ವಿಜ್ಞಾಪನೆಗಳು

ಆಂಧ್ರಪ್ರಾಂತ್ಯದ ಬಗ್ಗೆ ಜ॥ ವಾಂಜೂರಿಯರು ವಿಜಯವಾಡಕ್ಕೆ ಆಗಮಿಸಿದ್ದರು ಆವರಿಗೆ ರಾಜಕೀಯ, ಸಾಂಸ್ಕೃತಿಕ, ವಾಣಿಜ್ಯ ಸಂಸ್ಥೆಗೂ ಮತ್ತು ಕೆಲವು ವ್ಯಕ್ತಿಗಳೂ ಆಂಧ್ರಪ್ರಾಂತದ ಬಗ್ಗೆ ವಿಜ್ಞಾಪನಾ ಪತ್ರ ಗಳನ್ನು ಸಲ್ಲಿಸಿದರು

ವಿಜಯವಾಡ ಆಂಧ್ರಪ್ರಾಂತ್ಯದ ಕೇಂದ್ರವಲ್ಲದಿದೆ ವಿಜಯವಾಡದಿಂದ ಇತರ ಪ್ರದೇಶಗಳಿಗೆ ಸಂಚಾರ ಸೌಕರ್ಯವಿದೆ ಎಲ್ಲಾ ಪ್ರಾಂತೀಯ ರಾಜಕೀಯ ಪಕ್ಷಗಳ ಕೇಂದ್ರ ಕಚೇರಿಗಳೂ ಇಲ್ಲಿಯೇ ಇವೆ ಆದುದರಿಂದ ಆಂಧ್ರದ ರಾಜಧಾನಿಯನ್ನು ಇಲ್ಲಿಯೇ ಏರ್ಪಡಿಸ ಬೇಕೆಂದೂ, ರಾಯಲುಸೀಮೆಯಲ್ಲಿ ಹೈಕೋರ್ಟನ್ನು ಸ್ಥಾಪಿಸಬೇಕೆಂದೂ ಆವರಿಗೆ ಮನವಿಪತ್ರ ಸಲ್ಲಿಸಿದರು

ಅಮೆರಿಕದ ೩೪ ನೇ ಅಧ್ಯಕ್ಷರಾಗಿ ಮಿ॥ ಐಸೆನ್ ಹೋವರ್

ಅಮೆರಿಕದ ೩೪ ನೆಯ ಅಧ್ಯಕ್ಷರಾಗಿ ಮಿ॥ ಐಸೆನ್ ಹೋವರ್‌ರವರು ತಾ॥ ೨೦ ರಲ್ಲಿ ಅಧಿಕಾರ ವಹಿಸಿ ಕೊಂಡರು

ನೂತನ ಅಧ್ಯಕ್ಷರ ಪ್ರಮಾಣವಚನ ಸ್ವೀಕಾರ ಸಮಾ ರಂಭವು ವಾಷಿಂಗ್ಟನ್ನಿನಲ್ಲಿ ಸಂಜೆ ೫ ಗಂಟೆಗೆ (ಭಾರತದ ಬೈಂ ಪ್ರಕಾರ ಈ ರಾತ್ರಿ ೧೦ ೩೦ ಕ್ಕೆ) ಅತ್ಯಂತ ವೈಭವ ದಿಂದ ನಡೆಯಿತು

ಮಿ॥ ಐಸೆನ್ ಹೋವರ್‌ರವರು ಅತ್ಯಂತ ಬೆಲೆ ಬಾಳುವ, ಕಣ್ಣಾಕೋರೈಸುವ ಉಡುಪನ್ನು ಧರಿಸಿ ಸ್ವೀಕಾರಮಂದಿರದಿಂದ ಆಲಂಕರಿಸಲಾಗಿರುವ ಭವ್ಯ ವೇದಿ ಕೆಯ ಮೇಲೆ ಸಕಸ್ತಾರು ಮಂದಿ ಪ್ರೇಕ್ಷಕರ ಸಮ್ಮುಖ ದಲ್ಲಿ ನಿಂತು ನೂತನವಧಿಯ ಪ್ರಮಾಣವಚನವನ್ನು ಸ್ವೀಕರಿಸಿದರು

ಕಳೆದ ೩೦ ವರ್ಷಗಳಲ್ಲಿ ರಿಪಬ್ಲಿಕನ್ ಪರ ಅಧ್ಯಕ್ಷ ರಾಗಿ ಅಧಿಕಾರ ಸ್ವೀಕರಿಸುವವರಲ್ಲಿ ಮಿ॥ ಐಸೆನ್ ಹೋವರ್‌ರವರೇ ಮೊದಲನೆಯವರು

ದಹಲಿಯಲ್ಲಿ ಸುಪ್ರೀಂ ಕೋರ್ಟ್ ಭವನ

೪೯ ಲಕ್ಷ ರೂ ವೆಚ್ಚವಾಗಲಿದೆ

ದೆಹಲಿಯಲ್ಲಿ ಕಟ್ಟಲಿಕೆಂದಿರುವ ಸುಪ್ರೀಂ ಕೋರ್ಟಿನ ಭವನದ ನಕಾಶೆಯನ್ನು ಮಂಗಾಮತ್ ಶಾಮಿಯವರು ಸಿದ್ಧಗೊಳಿಸುತ್ತಿದ್ದಾರೆ ಈಗಿನ ಅಂದಾಜಿನಂತೆ ಭವನಕ್ಕೆ ೪೯ ಲಕ್ಷ ರೂ ವೆಚ್ಚವಾಗಲಿದೆ ೨॥ ವರ್ಷಗಳಲ್ಲಿ ಕಟ್ಟಡವು ಮುಗಿಯುವುದೆಂದು ಹೇಳ ಲಾಗಿದೆ ವಕೀಲರುಗಳಾಗಿ ಛೇಂಬರ್ ಒಂದನ್ನು ಕಟ್ಟುವ ಯೋಜನೆ ಸಹ ಇದರಲ್ಲಿ ಸೇರಿದೆ

ಈಗ ಸುಪ್ರೀಂಕೋರ್ಟು ಪಾರ್ಲಿಮೆಂಟ್ ಭವನದಲ್ಲಿ ನಡೆಯುತ್ತಿದೆ

ವಿವಾಹ ವಿಚ್ಛೇದನ ಮಸೂದೆಗೆ ವಿರುದ್ಧ

ಈಗಿನ ಪಾರ್ಲಿ ಮೆಂಟ್ ಮುಂದೆ ಮಂಡಿಸಲಾಗಿರುವ ಹಿಂದೂ ವಿವಾಹ ಮತ್ತು ವಿಚ್ಛೇದ ಮಸೂದೆಗಳ ವಿರುದ್ಧ ರಂಮಂಡಿಸಿರುವ ಒಂದು ಸತ್ಯಾಗ್ರಹ ಹೂಡುವು ದೆಂದು ರಾ ರಾ ಪರಿಷತ್ತಿನ ಅಧ್ಯಕ್ಷೆಯಾದ ಶ್ರೀಮತಿ ಪ್ರಭಾವತಿ ಜೆಯವರು ತಿಳಿಸಿದರು ಲೋಕಭೆಯಲ್ಲಿ, ವಿಂ ಶಾಪವಿಚ್ಛೇದನಕ್ಕೆ ಅವ್ಯವಹಾರವೇನೂ ಇಲ್ಲವೆಂದೂ, ಆದರೆ ಇಡೀ ಹಿಂದೂಗಳಿಗೆ ಒಪ್ಪಿಗೆಯಿಲ್ಲವೆ ಒಂದು ಸಿವಿಲ್ ಲಾ ಮಾಡಲು ತಮ್ಮ ಆಭ್ಯಂತರವೇನೂ ಇಲ್ಲವೆಂದೂ, ಆದರೆ ಇಡೀ ಹಿಂದೂಗಳಿಗೆ ಒಪ್ಪಿಗೆಯಿಲ್ಲವೆ ಈ ಮಸೂದೆ ಯನ್ನು ಪರಿಷತ್ ಒಪ್ಪುವುದಿಲ್ಲವೆಂದೂ ಶ್ರೀಮತಿಯವರು ತಿಳಿಸಿದರು

ತುಂಗಭದ್ರಾ ಅಣೆಕಟ್ಟಿನ ಕಾರ್ಯ

೩೩ ಕೋಟಿ ರೂಗಳ ವೆಚ್ಚ ತಗಲುವ ತುಂಗ ಭದ್ರಾ ಅಣೆಕಟ್ಟಿನ ಕಾರ್ಯವು ಭರದಿಂದ ಸಾಗ ತ್ತಿದೆ ಮತ್ತು ಈ ವರ್ಷಾಂತ್ಯದೊಳಗೆ ಮುಗಿಯುವ ಸೂಚನೆ ಇದೆ ೬೧ ಮೈಲಿ ಉದ್ದದ ನಾಲೆಗಳುಳ್ಳ ಈ ಅಣೆಕಟ್ಟಿನ ಕೆಳಗೆ ೩೧೫ ೦೦೦ ಎಕರೆ ಭೂಮಿ ಸಾಗುವಳಿಯಾಗು ವುದು ಇದರಲ್ಲಿ ೭೯ ೦೦೦ ಎಕರೆ ಆಹಾರಧಾನ್ಯಗಳಿ ಗಾಗಿಯೇ ಮೀಸಲಾಗಿರುವುದು

ಅಖಿಲಭಾರತ ವೀರಶೈವ ಮಹಾಸಭೆ

ಸ್ವಾಗತ ಸಮಿತಿಯ ರಚನೆ

ಜನವರಿ ೧೯ನೇ ತಾರೀಖು ಹೈದರಾಬಾದ್ ಉಸ್ಮಾ ನಿಯಾ ಇಂಜಿನಿಯರಿಂಗ್ ಕಾಲೇಜಿನ ಸೇನೆ ಕಟ್ಟಡದ ಮಹಡಿಯ ಮೇಲೆ ವೀರಶೈವ ಮುಖಂಡರುಗಳು ಸಭೆಸೇರಿ ಮುಂದಿನ ಅಖಿಲ ಭಾರತ ವೀರಶೈವ ಮಹಾಸಭೆಯನ್ನು ಬಸವಕಲ್ಯಾಣ ದಲ್ಲಿ ಬಸವ ಜಯಂತಿಯ ಕಾಲದಲ್ಲಿ ನಡೆಸಬೇಕೆಂದು ತೀರ್ಮಾನಿಸಿದರು ಸಭಾಧ್ಯಕ್ಷತೆಯನ್ನು ಮೈಸೂರು ಸಂಸ್ಥಾನದ ಕಾಂಗ್ರೆಸ್ ಮುಖಂಡರಾದ ತುಮಕೂರು ಆರ್ ಎಸ್ ಆರಾಧ್ಯರು ವಹಿಸಿದ್ದರು ಮಹಾಸಭೆ ಯನ್ನು ನಡೆಯಿಸಲು ಒಂದು ಸ್ವಾಗತಸಮಿತಿಯನ್ನು ರಚಿಸುವ ಬಗ್ಗೆ ಚರ್ಚೆ ನಡೆಯಿತು ಸಭೆಯಲ್ಲಿ ಉಪ ಸ್ಥಿತರಿದ್ದ ಪಾರ್ಲಿಮೆಂಟ್ ಸದಸ್ಯರಾದ ಶ್ರೀ ನಿಜಲಿಂಗಪ್ಪ, ಸಿ ಆರ್ ಬಸಪ್ಪ, ಜೊಂಬಾಯಿನ ಮಂತ್ರಿ ಎಂ ಪಿ ಪಾಟೀಲ್, ಹೈದರಾಬಾದಿನ ಮಂತ್ರಿ ಅಣ್ಣಾರಾವ್ ಸಾಹೇಬ್, ಮತ್ತು ಕಲ್ಕಟ್ಟೇರಿ ಗುದ್ದೆಪ್ಪ ಸೊಲ್ಲಾಪುರದ ಬಾಬಾಸಾಹೇಬ್ ಮಾಡ್ದಾರವರು ಭಾಷಣಮಾಡಿದರು ಹೈದರಾಬಾದಿನ ಮಂತ್ರಿ ಶ್ರೀ ಅಣ್ಣಾರಾವ್ ಸಾಹೇಬ್ ರವರನ್ನು ಸ್ವಾಗತಾಧ್ಯಕ್ಷರನ್ನಾಗಿಯೂ, ಸೊಲ್ಲಾಪುರದ ಬಾಬಾಸಾಹೇಬ್ ಮಾಡ್ದಾರವರನ್ನು ಪ್ರಧಾನ ಕಾರ್ಯದರ್ಶಿ ಗಳನ್ನಾಗಿಯೂ ಸರ್ವಾನುಮತದಿಂದ ಆಯ್ಕೆಮಾಡಿ ಆಯಾಯ ಸ್ಥಾನಗಳನ್ನು ಅಲಂಕರಿಸಲಾಯಿತು

ಅಧ್ಯಕ್ಷತೆ ವಹಿಸಿದ್ದ ಶ್ರೀ ಆರ್. ಎಸ್ ಆರಾಧ್ಯರು ತಮಗೆ ತೋರಿಸಿದ ಗೌರವಕ್ಕಾಗಿ ಎಲ್ಲರನ್ನೂ ವಂದಿಸಿ ವೀರಶೈವ ಮಹಾಸಭೆಯ ಚರಸ್ಥಾಯಿ ಘಂಟಿಯಿಂದ ಆದನ್ನು ಹೆಚ್ಚು ಹಣ ಕೊಡಿಸಿ ಕೊಡಲು ಭರವಸೆ ಇತ್ತರು ಸಭೆಯ ಸಂಚಾಲಕರಾದ ಶ್ರೀ ರುದ್ರಶೆಟ್ಟಿ ಪಾಟೀಲ್‌ರವರು ಸರ್ವರನ್ನು ಅಭಿವಂದಿಸಿ ಮುಂದ ಸಭೆಯು ಯಶಸ್ವಿಯಾಗಲು ಎಲ್ಲರೂ ಸಹಾಯವದಗಿಸ ಬೇಕೆಂದು ಪ್ರಾರ್ಥಿಸಿದರು

ಸಕ್ಕರೆ ಕಾರ್ಖಾನೆಗಳಿಗೆ ಎಚ್ಚರಿಕೆ

ಹತೋಟಿ ಮಾಡಲ್ಪಟ್ಟ ಸಕ್ಕರೆಯನ್ನು, ಮುಂದೆ ಹೆಚ್ಚಿನ ಬೆಲೆಗೆ ಮಾರಿಕೊಳ್ಳಬಹುದೆಂಬ ಆಸೆಯಿಂದ ಯಾವ ಕಾರ್ಖಾನೆಗಳವರೂ ಸಂಗ್ರಹಿಸಿಡಲಾಗದೆಂದು ಭಾರತ ಸರಕಾರದವರು ಉಗ್ರವಾದ ಎಚ್ಚರಿಕೆ ಇತ್ತಿ ದ್ದಾರೆಂದು ತಿಳಿದು ಬಂದಿದೆ

ಇಳಿತಾಯಮಾಡಲ್ಪಟ್ಟ ಹತೋಟಿ ದರದಲ್ಲಿ ಕಾರ್ಖಾ ನೆಗಳಿಂದಾಗಲಿ ಸಕ್ಕರೆ ವಿಜಿಟರಿಂದಲಾಗಲಿ ಸಕ್ಕರೆ ದೊರೆಯುತ್ತಿಲ್ಲವೆಂಬುದಾಗಿ ಕೇಂದ್ರದ ಆಹಾರ ಖಾತೆಗೆ ದೂರುಬಂದಿದೆ

ಮಾಂಟೆವಾಗದಿರುವ ಸಕ್ಕರೆ ತಮ್ಮ ಬಳಿ ಇರುವ ಬೆರೆಗೆ ಯಾವ ಕಾರ್ಖಾನೆಯೇ ಆಗಲಿ ಸಕ್ಕರೆ ಕೊಡಲು ತಿರಸ್ಕರಿಸುವಂತಿಲ್ಲ ಹಾಗೇನಾದರೂ ಮಾಡಿದರೆ, ಸರ ಕಾರ ಆ ಕಾರ್ಖಾನೆ 'ಸಬ್ಸಿಡಿ'ಯನ್ನು ನಿಲ್ಲಿಸಲೇಬೇಕಾಗು ತ್ತದೆಂದೂ ಸೂಚಿಸಲಾಗಿದೆ ಇನ್ನು ಮುಂದೆ ಮಾರಾಟ ವಾದ ಸಕ್ಕರೆ ಒಗ್ಗೆ ಪ್ರತಿವಾರ ಅಂಕಿಗಳನ್ನು ಕೊಡು ವಂತೆ ಸಹ ಸೂಚಿಸಿದೆ ಆಯಲಾಗಿದೆ

ಧಾನ್ಯದ ಬೆಲೆ ಇಳಿಸದಿದ್ದರೆ ಅನ್ನಸತ್ಯಾಗ್ರಹ ಮಾಡಲಾಗುವುದು

ಆಹಾರ ಬೆಲೆಗಳ ಏರಿಕೆಯ ಒಗ್ಗೆ ಕಳೆದ ತಿಂಗಳು ೩೩ ನೇ ತಾ ವೈಸೂರು ನಗರದಲ್ಲಿ ನಡೆದ ಹರತಾಳದ ನಂತರ, ರಾತ್ರೆ ಟೌನ್‌ಹಾಲ್ ವೈದಾಂಗಣದಲ್ಲಿ ಡಾ॥ ಬಿ ಜಿ ದಾಸ್‌ರವರ ಅಧ್ಯಕ್ಷತೆಯಲ್ಲಿ ಭಾರಿ ಬಹಿರಂಗ ಸಭೆ ನಡೆಯಿತು ಆಹಾರ ಧಾನ್ಯಗಳ ಬೆಲೆ ಇಳಿಸ ಬೇಕೆಂದೂ ಮಾರಾಟ ತೆರಿಗೆಯನ್ನು ಪಡಾ ಮಾಡ ಬೇಕೆಂದೂ, ಕಿರುಕೈಗಾರಿಕೆಗಳಿಗೆ ಉತ್ತೇಜನಕೊಡ ಬೇಕೆಂದೂ ಸಭೆಯಲ್ಲಿ ಮಾತನಾಡಿದ ವಿಳಂಬು ಮಂದಿ ತಮ್ಮ ಭಾಷಣಗಳಲ್ಲಿ ವಿವರಿಸಿದರು

೧೫ ದಿನಗಳೊಳಗೆ ಹಿಂದೆ ಇದ್ದ ಬೆಲೆಗಳಿಗೆ ಆಹಾರ ಧಾನ್ಯಗಳನ್ನು ಮಾರಾಟಮಾಡದಿದ್ದರೆ, ಅನ್ನ ಸತ್ಯಾಗ್ರಹ ಹೂಡಲಾಗುವುದೆಂದು ಸರ್ಕಾರಕ್ಕೆ ಎಚ್ಚರಿಕೆ ಕೊಡುವ ನಿರ್ಣಯವೊಂದು ಸಭೆಯಲ್ಲಿ ಅಂಗೀಕೃತವಾಯಿತು

ಮಾರಾಟ ತೆರಿಗೆಯನ್ನು ರದ್ದುಗೊಳಿಸಬೇಕೆಂದೂ, ಕೈಮಗ್ಗಗಳ ಕೈಗಾರಿಕೆಗೆ ಉತ್ತೇಜನ ಕೊಡಬೇಕೆಂದೂ, ಸೂಚಿಸಲಾಗಿದ್ದ ನಿರ್ಣಯಗಳೂ ಅಂಗೀಕೃತವಾದವು

ಸಾದರ ಸ್ವೀಕಾರ

ಧಾರವಾಡ (ಮದಿಹಾಳ) ದಲ್ಲಿರುವ ಶ್ರೀ ವೀರನ ಗೌಡರು ಮೆಣಸಿಗಿ ಇವರಿಂದ ರಚಿಸಲ್ಪಟ್ಟ ಶಕೆ ೧೮೭೫ ನೇ ವಿಜಯಸಂವತ್ಸರದ ಪಂಚಾಂಗವೂ ಮತ್ತು ಶ್ರೀ ವಿಶ್ವಗುರುಮಂದಿರ ಪಾಠಶಾಲಾ ಯಡ ಗೋಡಿ ಪಂಚಾಂಗವೂ ಹೂಲಿ ಸಿದ್ಧಾಂತ ಪಂಚಾಂಗವೂ ನಮ್ಮ ಕೈಸೇರಿದ್ದು ಇವುಗಳಲ್ಲಿ ನೂತನ ವಿಜಯ ಸಂವತ್ಸರದ ಫಲಾಫಲಗಳು ವಿಸ್ತಾರವಾಗಿ ವರ್ಣನೆಗ ಲ್ಪಟ್ಟಿವೆ ಪ್ರತಿಯೊಂದು ಕಾರ್ಯದ ಜ್ಯೋತಿಷ್ಯ ವಾಹಿತಿಯು ಕೊಡಲ್ಪಟ್ಟಿವೆ ಸರ್ವರೂ ಈ ಪಂಚಾಂಗ ಗಳನ್ನು ತರಿಸಿ ಓದಿ ಧನ್ಯರಾಗಬೇಕೆಂದು ಕೋರುತ್ತೇವೆ

ಸ್ವೀಕಾರ

ಗುಲ್ಬರ್ಗಾ ಡಿ॥ ನಂದೂರು ತೋಪಲಟ್ಟಿ ಹಿರೇ ಮಠದಲ್ಲಿ ನಡೆದ ಮಲೆಯ ಶಾಂತೇಶ್ವರ ರಥೋತ್ಸವದ ಸಂತೋಷಾರ್ಥವಾಗಿ ಪ್ರಭಾವೋಪಜೀವಿಯೆಂದು ಸಮರ್ಪಿಸಿದ ೫ ರೂ ಶ್ರೀ ಯಾದಗಿರಿ ಗುರುಸಿದ್ಧಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾರಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ

Edited, Printed and Published by Brahmasrimathadhyakshaha Sri Mahadevaiah at Sri Panchacharya Electric Press, Sayaji Rao Road, Mysore

REGISTERED No. M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾ: ಪ್ರಸೀದಂತು ॥ REGISTERED No M 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೇಶ್ವರೌ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೂರ್ತಿಧರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು— ಸಾಗನೂರು ಬೃಹನ್ಮಠಾಧ್ಯಕ್ಷರಾದ ವೇ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ೩ ರೂ.] ಸಂಪಾದಕರು— ಸಾಗನೂರು ಬೃಹನ್ಮಹಾದ್ಯಕ್ಷರಾದ ಶ್ರೀ ಮಹಾದೇವಶಾಸ್ತ್ರಿಗಳವರು [ಏ ಪಿ ಖರ್ಚು ಸೇರಿ ೩ ರೂ ೬ ಆ

ಸಂಪುಟ ೨೬] ಸೋಮವಾರ ತಾ॥ ೧೬ ನೇ ಫಬ್ರುವರಿ ೧೯೩೫ [ಸಂಚಿಕೆ ೪೦

ಸತ್ಪಾತ್ರವ್ಯವಹಾರ

[ಬಾತ್ಮೀದಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು —ಸಂ]

ಶಿವರಾತ್ರಿಯ ಮಹಾಸಂದೇಶ

ಪ್ರತಿ ವರ್ಷ ಮಾಘ ಬಹುಳ ಚತುರ್ದಶಿಯಂದು ಬರುವುದು ಮಹಾ ಶಿವರಾತ್ರಿ

ಇಂದು-ಉದಯದಲಿ ಮಿಂದು ಬಹುಮುಂದಿ ಪಿಷ್ಟೆಯಿಂದಾಚರಿಪರ್ ಉಪವಾಸ ವ್ರತವನು ತಾವು ದಿನವೆಲ್ಲ

ಶ್ರೀಕೃಂಠಕರ್ತನಲ್ಲಿ ಜುಂಬಿಸುವ ಗಾಢಾಂಧಕಾರದಿಂ ಬಂದು ಮುಸುಕುವುದು ಇಂದಿನಾ ಮಹಾರಾತ್ರಿ ಇದೇ ನಮ್ಮ " ಶಿವರಾತ್ರಿ

ಶಿವನ ಭಕ್ತರು (ಮಾನವಕೋಟಿ) ಎಲ್ಲ ಪೂಜಾದಿಗಳಿಂದ ಆಚರಿಪರ್ ಜಾಗರಣೆಯನು ಈ ರಾತ್ರಿ ಮಾರನೆಯದಿನ ಅನಾವಾಸ್ಯೆಯುದಯದಲಿ ಪಾರಣೆಯೂಟ ವಮುಂಡು ಮುಗಿಸುವರು ಹಬ್ಬ ಶಿವರಾತ್ರಿ

ಈ ಹಬ್ಬದ ಬಾಹ್ಯಾಚರಣೆಯಂತರಾರ್ಥವನು ಎನಗೆ ತಿಳಿದಂತೆ ಒರೆಯಲ್ಕಿ ಸುವೆ

ಉಪವಾಸವೆಂಬ ಪದಕ್ಕರ್ಥ ಹತ್ತಿರದಿ ವಸಿಸುವುದು ಎಂದಾಗುವುದರಿಂದ ಉಪವಾಸವೆಂದೊಡೆ ದೇಹಾತ್ಮ ಭಾವನ ತೊರೆದು, ಅಂತರಾತ್ಮಭಾವದೊಳ್ ಇರಲು ಎಲ್ಲಿಯು ಸರ್ವೇಂದ್ರಿಯಪ್ರಿಗ್ರಹವೆಂಬ ಉಪವಾಸದಿಂದ

ಈ ರಾತ್ರಿಯ ಗಾಢಾಂಧಕಾರ ಹೋಗುವುದು ಜಗವ ಮುಸುಕಿರುವ ಅಜ್ಞಾನವೆಂಬ ಮಹಾಮಾಯೆ ಪ್ರತಿಯೊಬ್ಬ ವ್ಯಕ್ತಿಯೊಳು ನಾನು ನಾನೆಂದಿನಿವ ಅಹಂಭಾವ ವಮು ತಂದೊಡ್ಡಿಹುದು ಈ ಮಹಾಮಾಯೆ

ಈ ಮಾಯೆಯಿಂದಾವರಿಪ ನಂ ನಾನೆಂದಿನುವ ದೇಹಾತ್ಮಭಾವವದು ಬರದಂತೆ ಎಚ್ಚರದಿ ಕಾದುಕೊಳ್ಳಲೇಬುವುದೇ ಬರುವ ಸಂದೇಶ ಶಿವರಾತ್ರಿಯಾ ಜಾಗರಣೆಯಿಂದ

ಈ ರಾತ್ರಿ ಜಾಗರಣೆಯ ಕಾಲವನು ಕಳೆಯಬೇಕಾ ಮುದು ದೀರ್ಘಶಿವಪೂಜೆಯಿಂದ

ಎಮ್ಮೊಳಹ ದೈವಾಂತವನ ಮರೆಯದಿರಬೇಕೆಂ ಬುದೇ ಬರುವ ಸಂದೇಶ ಈ ಶಿವಪೂಜೆಯಿಂದ

ಈ ಅಂತರಾರ್ಥವ ತಿಳಿದು ಆಚರಿಸೆ ಶಿವರಾತ್ರಿ ಸೆರೆಯುವುದೆಲ್ಲರೊಳ ಜ್ಞಾನನೇತ್ರ

ಇದರಿಂದ ಅಜ್ಞಾನವದು ಹರಿದು ಜೇಗುಗುವುದು ಜ್ಞಾನ ಸರ್ವತ್ರ

ಶಿವರಾತ್ರಿ ಸಾರುತಿದೆ ಜಗಕೆಲ್ಲ ಈ ದಿವ್ಯಮಂತ್ರ

ಈ ಮಂತ್ರದಿಂ ಹರ್ಷಿಸುತ ನರ್ತಿಪನು ಎಲ್ಲರೊಳಿಹ ಫಾಲನೇತ್ರ

ಸು. ಕೃಷ್ಣಮೂರ್ತಿ,
ಉಪಾಸ್ಯಕ, ಪ್ರಸ್ಯಎದ್ಯಾ ಸದನಜ
: ದೇವಪ್ರಸಾದ , ಮೈಸೂರು

ಸ್ತ್ರೀಲಿಂಗ ಶಿವರಾತ್ರಿ ಹಾಡು

ಶಿವಶಿವ ಎನ್ನುತ್ತ ಶಿವರಾತ್ರಿ ಮಾಡುತ್ತ
ಶಿವನಿಗೆ ವಸ್ತ್ರವ ಧರಿಸ ತ್ತಾ
ಶಿವನಿಗೆ ವಸ್ತ್ರವ ಧರಿಸ ತ್ತಾ ತಾಯಮ್ಮ
ದೂರದ ಮಗಳ ನನೆದಾರ್ಪೀ ॥೧॥

ಶಿವಶಿವ ಎನು ವ ನನೆ ಶ್ರೀ ಮುಡಿಯವ ಡಿ ಮನವೆ
ಶಿವನೆ ಜ್ಞಾನದಲಿ ಇರು ವ ನನೆ !
ಶಿವನೆ ಜ್ಞಾನದಲಿ ಇರ ವ ನನೆ ಈವತ್ತು
ಜನರೊಂದಿಗಾಡಿ ಕಡಬೇಡ ॥೨

ಕಂಡುಮನುಷ್ಯಗಳ ಅಡಲ್ಯಾಕೆ ತಂಗಮ್ಮ
ನೋಡು ನಿಜಗುಣರ ವಚನವ !
ನೋಡು ನಿಜಗುಣರ ವಚನವ ಮನಗೊಟ್ಟು
ಮಾಡಿದ ಪಾಪ ಪರಿಹಾರ ॥೩॥

ಕಾವೀ ಗುರುವಯ್ಯ ಸೇವಿಪೆ ನನ್ನಯ್ಯ
ಕಾವಲಾಗಯ್ಯ ಒಡವರಿಗೆ !
ಕಾವಲಾಗಯ್ಯ ಒಡವರಿಗೆ ಭಕ್ತರಿಗೆ
ಪಾವನವಗಿ ದಿಯ ವಾಗು ॥೪॥

ಬೇಗಾಯಿತೇಳು ಎಳೆಯ ವಳೆ ತಂಗಮ್ಮ
ತೊಳೆದು ನೀ ಮ ಖವಾ ಶುಚಿಯಾಗು !
ತೊಳೆದು ನೀ ಮ ಖನ ಶ ಚಿಯಾಗು ತಂಗಮ್ಮ
ಧರಿಸಮ್ಮ ಹಣೆಗೆ ಭಸಿತಾವ ॥೫॥

ಹಾಲು ಅನ್ನ ಚಂದ ಕೊರಂಗೆ ತಾಳ ಚೆಂದ
ಬಾಲರಿ ಮಾತು ಒಲು ಚೆಂದ !
ಒಲರ ಮಾತು ಒಲು ಚೆ ದ ತಾಯಮ್ಮ
ಲೀಲೆಯೆ ಚೆಂದ ಧರೆಯೊಳಗೆ ॥೬॥

ಗುರುಗಳು ಒಂದವರೆ ಗುಲಗಂಜಿ ವೈನವಳೆ
ಸೆರಗು ಪಲ್ಲಕ್ಕಿ ನರಿಯವಳೆ !
ಸೆರಗು ಪಲ್ಲಕ್ಕಿ ನರಿಯುವಳೆ ತಾಯಮ್ಮ
ಗುರುಗಳು ಬಂದವರೆ ಶರಣೆನು ॥೭॥

ಗ ರುವೆ ನನ್ನ ಮೇಲೆ ಅರುಣವಿಲ್ಲದ ಮೇಲೆ
ಒಡವೆ ನಾನ್ಹೇಗೆ ಒಡುಕಾಲಿ !
ಬಡನೆ ನಾನ್ಹೇಗೆ ಒಡುಕಾಲಿ ಎಂದರೆ
ನಂಬಿಕೋ ಮಗಳೆ ಪರಶಿವನ ॥೮॥

ನನ್ನ ಗುರುವೀಗೆ ಬಿನ್ನ ಹ ಮಾಡಿವನಿ
ಪನ್ನೆರಗ್ಗಳೆಯ ಹಿಡಿದವನೀ !
ಪನ್ನೆರಗ್ಗಳೆಯ ಹಿಡಿದವನೀ ಗುರುಸ್ವಾಮಿ
ಒಲ್ಲೇನು ಮಗಳೆ ಹಸಿವಿಲ್ಲ ॥೯॥

ಸೂಮವಾರ ಬೇಕು ನೇಮದವ್ವರಬೇಕು
ನೇಮ ಉಳ್ಳವರ ನೆರೆ ಬೇಕು !
ನೇಮ ಉಳ್ಳವರ ನೆರೆಬೇಕು ನಮ್ಮನೆಗೆ
ಶಿಲಮ್ಮನ ಥ ಸೊಸೆ ಬೇಕು ॥೧೦॥

ಆಧಾರವಾಗು ಆದಿಯ ಶ್ರೀಗುರುವೇ
ಆಸೂಯ ಇಲ್ಲದ ಒಡವರಿಗೆ !
ಆಸರೆಯ ಇಲ್ಲದ ಒಡವರಿಗೆ ಮಕ್ಕಳಿಗೆ
ಆಧಾರವಾಗುವ ಗುರುವಯ್ಯ ॥೧೧॥

ಶಿವಶಿವ ಅನ್ನುವರ ಇರಿಸಿಯ್ಯ ನೆರೆಯಲ್ಲಿ
ಎಲ್ಲಪತ್ರೆಯ ಶಿವನಿ ಗೆ
ಬಿಲ ಪತ್ರೆಯ ಶಿವನಿಗೆ ಧರಿಸ ನರ
ಇರಿಸಿಯ್ಯ ನಮ್ಮ ನೆರೆಯಲ್ಲಿ ॥೧೨॥

ಗುರುಸಿದ್ಧ ಲಿಂಗೇಶ ಮಹಿಮೇಲಿ ಪ್ರಖ್ಯಾತ
ಉದ್ಧಾರ ಮಾಡು ಒಡವಾರ !
ಉದ್ಧಾರಮಾಡು ಒಡವಾರ ಗ ರುತಂದೆ
ಬಿದ್ದು ಬೇಡ ವೆ ಪಾದದಲೀ ॥೧೩॥

— ಜೇಳು

ಧರ್ಮರಾಜ್ಯವಾದ ಮೈಸೂರು ಧರ್ಮದ ಸೊಬಗನ್ನು ಬೀರಲಿ

ದೇಶದ ಧಾರ್ಮಿಕ ಸಂಸ್ಥೆಗಳನ್ನು ಪುನರುದ್ಧಾರ ಮಾಡುತ್ತ ಜನತೆಯ ಬಹುಪ್ರಿಯನ್ನೇ ಧ್ಯೇಯವಾಗಿಟ್ಟುಕೊಂಡಿರುವುದು ಭಕ್ತವತ್ಸಲರಾದ ಕರ್ತವ್ಯ ನಮ್ಮ ಮೈಸೂರು ದೇಶದಲ್ಲಿ ಅನೇಕ ಧಾರ್ಮಿಕ ಪೀಠಗಳನ್ನು ಅವುಗಳಲ್ಲಿ ಕೆಲವೇ ಪೀಠಗಳಿಗೆ ಮಾತ್ರ ಮೊದಲಿನ ಗೌರವವನ್ನು ಕೊಟ್ಟು ಗೌರವಿಸಿದೆ, ಇನ್ನುಳಿದ ಪೀಠಗಳಿಗೆ ಮೊದಲಿನ ಗೌರವವಿದ್ದೂ ಇತ್ತೀಚಿಗೆ ಜಲ್ಲದೇ ಹೋಗಿದೆ

ಅದರೆ ಈಗ ಮೈಸೂರು ದೇಶದಲ್ಲಿ ವೀರಶೈವ ಮತದ ಮೂಲ ಧರ್ಮಪೀಠವಾದ ರಂಭಾಪುರೀ ಪೀಠವು ಬಾಳೇಹೊನ್ನೂರಿಂ ಗ್ರಾಮದ ಹತ್ತಿರ ಭದ್ರಾನದಿಯ ತೀರದಲ್ಲಿ ವಿರಾಜಮಾನವಾಗಿದೆ ಈ ಪೀಠವು ಗತವೈಭವದಿಂದ ಕೂಡಿದ್ದು ಈ ಪೀಠಾಧೀಶರಾಗಿದ್ದ ಶ್ರೀ ಜಗದ್ಗುರು ಶಿವಾನಂದರಾಜೇಂದ್ರಶಿವಾಚಾರ್ಯ ಮಹಾಸನ್ನಿಧಿಯವರು ಆಚಾರ್ಯಪೀಠಗಳ ಕೀರ್ತಿಯನ್ನು ಪ್ರಕಾಶಪಡಿಸಿದರು ಹಿಂದಿನ ಮಹಾರಾಜರು ಅವರ ದಿವ್ಯತೇಜಸ್ಸನ್ನು ಕಂಡು ಆತ್ಮೀಯತೆಯಿಂದ ಉಚ್ಚವ ದೊಡನೆ ಅರಮನೆಗೆ ದಯಮಾಡಿಸಿಕೊಂಡು ಸತ್ಕರಿಸಿದ್ದರು ಆ ಕಾಲದಲ್ಲೇ ಸಪ್ಪಬೇಕಾದ ಮೊದಲನೇ ಗೌರವವು ಈಗ ಪ್ರಾಪ್ತವಾಗಿರುವುದು, ಅವರ ತರುವಾಯ ಈಗಿನ ಪೀಠಾಚಾರ್ಯರಾದ ಶ್ರೀ ೧೦೦೮ ಜಗದ್ಗುರು ಪ್ರಸನ್ನ ರೆ ಣುಕ ವೀರಗಂಗಾಧರರಾಜೇಂದ್ರ ಶಿವಾಚಾರ್ಯ ಮಹಾಸನ್ನಿಧಿಯವರ ತಪಃಪ್ರಭಾವದೇ ಕಾರಣವಾಗಿದೆ

ಪ್ರಕೃತ ಈಗಿನ ಶ್ರೀಮನ್ಮಹಾರಾಜರವರ ಅಧ್ಯಾತ್ಮಿಕ ವಾದ ತ್ಯಾಗಜೀವನದ ರಾಜ್ಯಭಾರ ಮತ್ತು ಶ್ರೀ ಮುಖ್ಯ ಮಂತ್ರಿಗಳ ಸಾಂಸ್ಕೃತಿಕ ಪುಣ್ಯಾಯೋಜನೆಯ ಧಾರ್ಮಿಕ ಮನೋಭಾವನೆಯೇ ಕಾರಣವಾಗಿದೆ ಪ್ರಜಾರಾಜ್ಯದಲ್ಲಿ ಪ್ರಜೆಗಳ ಹಿತವನ್ನೇ ಬಯಸಿ ಧರ್ಮದ ಸೊಬಗನ್ನು ಬೀರುವ ಶ್ರೀ ರಂಭಾಪುರೀ ಪೀಠಕ್ಕೆ ಮೊದಲನೆ ಗೌರವ ಕೊಟ್ಟು ಕಾಪಾಡುವರು ಮೈಸೂರು ಭೂಸರ್ಕಾರಕ್ಕೆ ಶ್ರೇಯಸ್ಕರವಾಗಿದೆ

ಶ್ರೀ ಶಿವಪ್ರಕಾಶಸ್ವಾಮಿಗಳು
ಉಜ್ಜಯಿನಿಪೀಠ ಚಿತ್ರದುರ್ಗ.

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವ

ಫಾಲ್ಗುನ ಶುದ್ಧ ಚತುರ್ದಶಿ (27-2-1953) ಶುಕ್ರವಾರ

ಶ್ರೀ ಕುಲ್ಪಾಕೆ ಸೋಮನಾಥಲಿಂಗದಿಂದ ಶ್ರೀ ಜಗದ್ಗುರು ರೇಣುಕಾಚಾರ್ಯರ ಅವತಾರವು

ಶ್ರೀಜಗದ್ಗುರು ರೇಣುಕಾಚಾರ್ಯರ ಜ ಂ ನ್ನ ಫ ಲ್ಗುನ ಶ ದ್ಧ ಚತುರ್ದಶಿ ಶುಕ್ರವಾರ (೨೭-೨-೫೩) ದಿವಸ ಭರತ ಖಂಡದಲ್ಲಿರುವ ಸಮಸ್ತ ವೀರಶೈವರು ಆತ್ಯಂತಭಕ್ತಿಯಿಂದ ನೆರವೇರಿಸಬೇಕಾ ಶ್ರೀರೇಣುಕಾಚಾರ್ಯರು ಸಾಧಾರಣ ಗುರುಗಳೆಲ್ಲ. ಸಪ್ತಸಮುದ್ರಗಳನ್ನೇ ಒಂದು ಹನಿಯಂತೆ ಪಾನಮಾಡಿ ಲೋಕವಿಖ್ಯಾತರಾದ ಅಗಸ್ತ್ಯಮಹರ್ಷಿಗಳನ್ನುದ್ಧರಿಸಿದವರು. ಲೋಕಚಕ್ರ ವರ್ತಿಯಾದ ವಿಭೀಷಣನ ಇಷ್ಟಾನುಸಾರವಾಗಿ ವಿಶ್ವಕಾಲದಲ್ಲಿಯೇ ಮೂ ಕೋಟಿ ಗುಪುರೂಪವನ್ನು ಧರಿಸಿ ಮೂರುಕೋಟಿ ಶಿವಲಿಂಗಗಳನ್ನು ಸ್ಥಾಪಿಸಿ ರಾವಣನನ್ನೂ ವಿಭೀಷಣನನ್ನೂ ಉದ್ಧರಿಸಿದವರು ಗರ್ವಾಂಧನಾದ ಗೋರಕ್ಷನ ಗರ್ವವನ್ನು ತಮ್ಮ ಮಹಿಮಪ್ರಭಾವದಿಂದ ನಾಶಮಾಡಿ ಶಿವಸಿದ್ಧಾಂತೋಪದೇಶದ್ವಾರಾ ಅವನನ್ನು ಉದ್ಧರಿಸಿದವರು. ಲೋಕಕಂಟಕರಾಗಿದ್ದ ಯಕ್ಷ ದಂಪತಿಗಳನ್ನು ತಮ್ಮ ಫಾಲನೇತ್ರದಿಂದ ಸುಟ್ಟು ಬೂದಿಮಾಡಿ ಸಮಸ್ತ ಪ್ರಪಂಚಕ್ಕೆ ಕಲ್ಯಾಣವನ್ನುಂಟುಮಾಡಿದವರು. ನೀಲಗಲ ಚಕ್ರವರ್ತಿಯ ಭಕ್ತಿಯನ್ನು ಪರೀಕ್ಷಿಸುವದಕ್ಕೋಸ್ಕರ ಕೋಟ್ಯನುಕೋಟಿ ಪ್ರಮಥಪ್ರರೂಪವನ್ನು ಧರಿಸಿ ಅವನ ನೈಜವಾದ ಭಕ್ತಿಯನ್ನು ನಾನಾರೀತಿಯಿಂದ ಪರೀಕ್ಷಿಸಿ ಅಂತ್ಯದಲ್ಲಿ ಅವನಿಗೆ ಪ್ರಸನ್ನರಾಗಿ ಅವನನ್ನುದ್ಧರಿಸಿದವರು ಕಾಂಚೀಕ್ಷೇತ್ರದಲ್ಲಿರುವ ವಿಷ್ಣು ಮೂರ್ತಿಯ ಚಲಿಸುತ್ತಿದ್ದ ಮಸ್ತಕವನ್ನು ತಮ್ಮ ಮಹಿಮಪ್ರಭಾವದಿಂದ ಸ್ಥಿರಗೊಳಿಸಿ ಚೋಳಭೂಪಾಲನಿಗೆ ಗುರುಗಳಾದವರು. ಇವೇ ಮೊದಲಾದ ಅನಂತಾನಂತ ಲೀಲೆಗಳನ್ನು ಮಾಡಿ ಸಮಸ್ತಪ್ರಪಂಚವಂದ್ಯರಾದ ಶ್ರೀ ಜಗದ್ಗುರುಗಳವರ ಜಯಂತಿಯನ್ನು ಸರ್ವರೂ ಅತಿಭಕ್ತಿಯಿಂದ ನೆರವೇರಿಸಿ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇವೆ.

ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಪುಣ್ಯದಿನ

ತಕೆ ನಿಲ್ಲಿಲ್ಲ ಶಾ॥ ಶು॥ ೧೦ ಸೋಮವಾರ (ತಾ॥ ೨೩-೨-೧೯೫೩)

ನಾಗನೂರು ಬೃಹನ್ಮಠಾಧೀಶ್ವರರಾದ
ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು

ನಾಗನೂರು ಬೃಹನ್ಮಠಾಧೀಶ್ವರರೂ ಗುರು ವಂಶಸಂಜಾತರೂ ದೇವಭಾಷಾವಿಶಾರದರೂ, ಸಕಲ ಶಾಸ್ತ್ರಕೋವಿದರೂ, ಅನೇಕ ಮಾನ್ಯ ಬಿರುದಾಂಕಿತರೂ ಅಬಾಲಬ್ರಹ್ಮಚಾರಿಗಳೂ, ತತ್ವಜ್ಞೇತ್ರರೂ, ಏಕೈಕಸಿದ್ಧರೂ ಸತ್ಯಸಂಧರೂ, ಗುರುಕುಲೋದ್ಧಾರಕರೂ, ಸನಾತನಧರ್ಮಪ್ರೇಮಿಗಳೂ, ದೇಶ ವಿದೇಶಗಳಲ್ಲಿ ಹೆಸರುವಾಸಿಯಾದವರೂ, ವೀರಶೈವದರ್ಮಸ್ಥಾಪಕರಾದ ಶ್ರೀಜಗದ್ಗುರು ಪಂಚಾಚಾರ್ಯರ ಧ್ವಜವನ್ನು ಆಸೇತು ಹಿಮಾಚಲಪರ್ಯಂತ ಪೆರಿಯಿದನೆರೂ, ನಿಸ್ಪೃಹವಾಗಿದ್ದ ಪಂಚಪೀಠಕಗಳನ್ನು ಸತೇಜಗೊಳಿಸಿದವರೂ, ವೀರಶೈವಧರ್ಮತತ್ವಗಳನ್ನ ಜನಸಾಮಾನ್ಯರಲ್ಲಿ ಬೀರಿ ಧರ್ಮದ ಗೌರವವನ್ನು ಕಾಪಾಡಿದವರೂ, ಗುರುವರ್ಗದ ನಿಜನಿತಿಯನ್ನು ಜೈಲಿಗೆ ತಂದವರೂ, ಕುಹಕಿಗಳ ಕುಚೇಷ್ಟೆಯನ್ನು ಉಪನಿಷತ್ತುಗಳೆಂಬ ಹುಲಿಯ ಗುಡುಗಿನಿಂದ ಹೊಡೆದೋಡಿಸಿದವರೂ, "ಪಂಚಾಚಾರ್ಯ ಪ್ರಭಾ" ಪತ್ರಿಕೆಯ ದ್ವಾರಾ ನೀತಿಧರ್ಮಗಳನ್ನು ಬೋಧಿಸಿದವರೂ ಆದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಸ್ಥೂಲದೇಹವನ್ನು ತ್ಯಜಿಸಿ ಪರಶಿವನಲ್ಲಿ ಐಕ್ಯರಾಗಿ ಇಂದೇ ಫಾಲ್ಗುಣ ಶು॥ ೧೦ ಮಿತಿಗೆ ಮೂರು ವರ್ಷಗಳು ಮುಗಿದವು ಭೀಷ್ಮಬ್ರಹ್ಮಚಾರಿಗಳಾಗಿ, ಗುರುಸೇವೆಯಲ್ಲಿ ಆಯುಷ್ಯವನ್ನು ಸವಿಸುತ್ತ ವೀರಶೈವಧರ್ಮಜ್ಯೋತಿಯನ್ನು ಪ್ರಕಾಶಗೊಳಿಸಿ ರತ್ನದಂತೆ ಪ್ರಕಾಶಮಾನವಾದ ಪುಸ್ತಕಗಳೊಡೊಡಗೂಡಿದ "ಕಾಶೀನಾಥಗ್ರಂಥಮಾಲೆ"ಯನ್ನು ಇರಿಸಿ ಕೀರ್ತಿಕಾಯರಾದ ಶ್ರೀಪಂಡಿತಜೀಯವರ ಆತ್ಮವು ಪರಮಾತ್ಮನಲ್ಲಿ ಬೆರೆತ ದಿನವು ಪುಣ್ಯದಿನವಾದ್ದರಿಂದ ಆ ದಿನಸ ಭರತಖಂಡದಲ್ಲಿರುವ ಸಮಸ್ತ ಗುರುವರ್ಗಾಭಿಮಾನಿಗಳು ಪಂಡಿತರ ಭಾವಚಿತ್ರವನ್ನು ಪೂಜಿಸಿ ಮಾಹೇಶ್ವರಾರಾಧನೆಯನ್ನು ಮಾಡಿ ಧನ್ಯರಾಗಬೇಕಲ್ಲದೆ ಆ ಮಹೋದಯರ ಸ್ಮರಣಾರ್ಥವಾಗಿ 'ಪಂಚಾಚಾರ್ಯಪ್ರಭಾ' ಪತ್ರಿಕೆಗೆ ಕಾಣಿಕಾದಿಗಳನ್ನು ಸಮರ್ಪಿಸುವುದರ ಮೂಲಕವೂ ಹೊಸದಾಗಿ ಚಂದಾದಾರರನ್ನು ಮಾಡಿಸುವುದರ ಮೂಲಕವೂ ಪ್ರಭಾದೇವಿಯನ್ನು ಸರ್ವತ್ರ ಬೆಳಗುವಂತೆ ಮಾಡಿ ಪಂಡಿತರ ಆತ್ಮಕ್ಕೆ ಶಾಂತಿಯನ್ನು ಉಂಟುಮಾಡುವರೆಂದು ಆಶಿಸುತ್ತೇವೆ.

ಹೈದರಾಬಾದಿನ ಮಾನ್ಯ ಮಂತ್ರಿಗಳ ಆಗಮನ ಸಭೆ ಅಥಜಲಪುರ

ಶ್ರೀ॥ ಶಿವಮೂರ್ತಿ ಶಾಲೂಕು ಅಥಜಲಪುರ ಬೃಹ ನ್ಮಠಾಧ್ಯಕ್ಷರಾದ ಪೂಜ್ಯ ಶ್ರೀಗುರು ಹಾ॥ ಬ್ರ॥ ಭೀಷ್ಮ ಬ್ರಹ್ಮಚಾರಿ ಮಹಾತ್ಮಾ ಪ್ರಸಕ್ತ ಮರುಗಾಡ್ಯ ಮಂತ್ರಿಗಳಾದ ಶಾಂತವೀರರಿವಾಹಾರ್ಯರ ದರ್ಶನಕ್ಕೆ ಹೈದ್ರಾಬಾದ ಸ್ಟಾನಿಕ ಸ್ವರಾಜ್ಯದ ಆದರಣೀಯ ಮಾನ್ಯ ಮಂತ್ರಿಗಳಾದ ಅಣ್ಣಾರಾಯರು ಗಣಾಮಿಪಿ ಬಿ.ಎ, ಎಲ್ ಎಲ್.ಬಿ, ಈ ಮಹಾಶಯರು ದಿನಾಂಕ ೨೬-೧-೫೩ ಮಂಪ್ರವಾರ ಅಂದರೆ ಲೋಕಸಜ್ಜಾಕ್ಕೆ ದಿವಸ ಆಗಮಿಸಿದರು. ಅಂದು ಪೂಜ್ಯ ಗುರುವುಗಳವರು ತಮ್ಮ ಮಹಡಿ ಒಳಹೊರಗೂ ರಂಧಾಸ್ತ್ರಂಭಗಳಿಂದಲೂ ಶತಕರ ಪುಷ್ಪಫಲಗಳಿಂದಲೂ ಜಗದಾಚಾರ್ಯರ ವಿಜಯಧ್ವಜಗಳಿಂದಲೂ ಹಾಗೂ ರಾಷ್ಟ್ರದ ಧಾವುಟ ಗಳಿಂದಲೂ ಅಲಂಕರಿಸಿದ್ದರು ಕಾರ್ಯಾರಿ ಸೋತಿವರಿಗೆ ಸಾಕ್ಷಾತ್ ಶಿವಕಲ್ಯಾಣದ ಶಿವಾಸುಭವಮಂಟಪವೋ ಏನೋ ಎಂಬಂತೆ ಭಕ್ತಳನ್ನೆ ಹೋಲುತ್ತಿತ್ತು ಪೂಜ್ಯ ಗುರುವರ್ಯರು ಮಾನ್ಯ ಮಂತ್ರಿವರ್ಯರನ್ನು ಒಳ್ಳೆ ದೇಂಡ್ ಜಟ್ಟೆಂಕ್ರಿ ಮಾನ್ಯಗಳಿಂದಲೂ, ಹಾಗೂ ಜಗದಾಚಾರ್ಯರ ಜಯಘೋಷಗಳಿಂದಲೂ, ಮುತ್ತಿ ದಿಯರ ಪಂಚಾರತಿಗಳಿಂದಲೂ, ಉರ ಗೌಡ, ಶುಲಕರ್ಣಿ, ಶ್ರೀಮಂತ, ತಹಸೀಲದಾರ, ಸಾಹೇಬ, ಪೆಷಕಾರರಾಹೇಬ, ಪೋಷಾಲ ಪಾರ್ಟಿಗಳಿಂದಿಗೆ ಮಂತ್ರಿ ಕರೆಕಂದರು, ಹಾಗೂ ಸುಸ್ವಾಗತಿಸಿದರು ಮಾನ್ಯ ಮಂತ್ರಿಗಳು ಗುರು ಪೂಜನವರಿಗೆ ಪವಿತ್ರ ಪುಷ್ಪಮಾಲೆಯನ್ನು ಧರಿಸಿ ಸಾ॥ ಪಮಸ್ಕಾರಗಳನ್ನು ಮಾಡಿ ಸಮ್ಮುಖ ಮಹಾತ್ಮಾ ಮಳೇಂದ್ರಾ, ತಮ್ಮ ಪವಿತ್ರ ಪಾದಧೂಳಿಯಿಂದ ಇಂದು ನಾವು ಪವಿತ್ರರಾದೆ ಈ ಮಾನ್ಯ ಮಂತ್ರಿಪದವಿ ಯಾರದು ತಮ್ಮ ದಿವ್ಯ ಕೈಪಾಕಲಾಕ್ಷದಿಂದಲೆ ಲಭಿಸಿತು ಏನಮಾಗಮಗಳಲ್ಲಿ ಸಾರಿದ "ಗುರುರೋರಧಿಕಂ" ಎಂಬ ಮಹಾವಾಕ್ಯದ ಪ್ರಧಾನವೂ ಪ್ರತ್ಯಕ್ಷ ಇಂದು ಸಕ್ಷ ನಿದರ್ಶನಕ್ಕೆ ಒಂದಿತು. ಇನ್ನು ಮುಂದೆ ಇದರಂತೆ ಕಾಪಾಡಬೇಕೆಂದು ಬೇಡಿಕೊಂಡ ಹುಡಿಗೆ

ಮಹಾತ್ಮಾ ಮಳೇಂದ್ರ ಗುರುಮೂರ್ತಿಗಳು ಸಂತೋಷಭರಿತರಾಗಿ ಪೂಮಾಲೆಯನ್ನು ಹಾಕಿ ಆಶೀರ್ವದಿಸಿ ಶೃಂಗರಿಸಿದ ಪೀಠದ ಮೇಲೆ ಕುಳ್ಳರಿಸಿ ಮಾನ್ಯ ಮಂತ್ರಿವರ್ಯರೇ ತಮ್ಮ ಪವಿತ್ರ ಗುರು ಭಕ್ತಿಯು ತಮ್ಮನ್ನು ಕಾಪಾಡುವುದು ಜಗಜ್ಯೋತಿ ಮಹಾತ್ಮಾ ಬಸವಣ್ಣನವರಂತೆ ಜಗತ್ಕಲ್ಯಾಣಕಾಯ್ಕಾಗಿ ಮುಡಿಯುವವರಾದ ತಮ್ಮಂತಹ ಪಿತೃರತ್ನಗಳಿಗೆ ಆ ದಯಾಭಿನಾದ ಗುರುನಾಥನು ಕಾಪಾಡಲೆಕ್ಕೆನ್ನಿನೆ 'ತನ್ನಂತೆ ಜಗೆದವಿಕೆ ಕೈಲಾಸ ಬನ್ನ ಣವಳ್ಳು ಸರ್ವಜ್ಞ" ಎಂಬ ನಾಣ್ನುಡಿಯು ನಿಮ್ಮ ಅಂತ ಕರಣದಲ್ಲಿ ಉಳಿ ಯಲಿ ಮುರೆಯಬೇಡಿರೆಂದು ಮತ್ತೊಮ್ಮೆ ಆಶೀರ್ವದಿಸಿ ಮೊದಲು ಕೊಟ್ಟ ಅಮಂತ್ರಣದ ಪ್ರಕಾರ ಅಮಂತ್ರಣದ ನೃವಸ್ಥೆಯನ್ನು ನಡೆಸಿದರು ನೆರೆದ ಸಭಿಕರೆಲ್ಲರು ಸಂತೋಷಭರಿತರಿಂಗಿ ಕರತಾಡನ ಮಾಡಿದರು ಜಗದಾಚಾರ್ಯರ ಜಯಘೋಷ ಮೊಳಕಂದಿರು ಜಯ ಬೋಲೋ ಮಾನ್ಯ ಶ್ರೀನಿವಾಸರಾವ ಮಂತ್ರಿವರ್ಯ ರಿಗೆ ವಿಜಯವೆಂಗಲಿ ಎಂಬ ಕೂಗಿನಿಂದ ಸರ್ವರು ಗದ್ದರಿಸಿದರು ಬಳಿಕ ತಮ್ಮ ಮಹಾಗುರುಮರವಪ್ಪಲಿಯೇ ಫೀನಾಸಪಿಯ ಗುದಕವಿ ದತಯಾರಿಸಿದ ಸೀತಕಬಿಬ್ಬ ವೆನ್ನು ಗುರುಗಳು ತಮ್ಮ ಪವಿತ್ರ ಗುರ ಪ್ರಸಾದವೆಂದು ಮಾನ್ಯ ಮಂತ್ರಿಯವರಿಗೂ ಬಂದಂಥ ಆತಿಥಿಯವರಿಗೂ ಸಂತೃಪ್ತಪಡಿಸಿದರು ಸನಾತನ ವೀರಶೈವ ಆಸ್ಥಾ ನವರ್ಜಾಂಕಿಗಳಾದ ಪವಿತ್ರ ಗುರುತೀರ್ಥ ಪ್ರಸಾದ ಮಹಾತ್ಮಕ್ಕೆ ಜಗದೊಳಗೆ ಮತ್ತೆಮ್ಮಂದು ಸರಿಯುಟಿ ಎಂದು ಬಂದಂಥ ಆತಿಥಿಗಳು ಮಹಾತ್ಮಾ ಮಳೇಂದ್ರ ಗುರುಮರಿಕಿಗಳ ಮಹಾತ್ಮಕ್ಕೆ ಕೋಡಾಡತೊಡ ಗಿದರು ಬಳಿಕ ಮಂಗಲ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು

ಕಲ್ಯಾಣಪ್ಪ ಮಲ್ಲಪ್ಪ ಪಂದಿ .
ಅಥಜಲಪುರ

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ರಥೋತ್ಸವ, ರಾಣೆಬೆನ್ನೂರು

ಧಾರವಾಡ ಜಿ॥ ರಾಣೆಬೆನ್ನೂರು ಶತಕದ ಶ್ರೀ ರೇಣುಕ ಮಂದಿರದಲ್ಲಿ ವೀರಶೈವ ಧರ್ಮಸಾಸ್ಥಪಕರೂ, ಅಗಾಧಮಹಿಮಾತೀಶರೂ ನಿಸ್ಪೃಹಾಸಕ್ತಿಸಮರ್ಥರೂ ಸೋಮಸಾಥಲಿಂಗೋದ್ಭವರೂ ಆದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮೂಲಳವಾಗಿ ಇಡೇ ಫಾಲ್ಗುಣ ಶು॥ ೧೩ ಗುರುವಾರ (ತಾ॥ ೨೬ ೨ ೫೩) ದಿವಸ ಪೂಜೆ ಅನ್ನ ಸಂತರ್ಪಣೆಗಳು ಜೆಡೆಸಲ್ಪಟ್ಟು ಸಾಯಂಕಾಲ ೫ ಘಂಟೆಗೆ ಶ್ರೀ ಸ್ವಾಮಿಯ ರಥೋತ್ಸವವು ಅತಿ ವಿಜೃಂಭಣೆಯಿಂದ ಜರುಗುವದು ಸರ್ವರೂ ಸಕಾಲಕ್ಕೆ ಆಗಮಿಸಿ ದರ್ಶನಾಶಂದವನ್ನು ಪಡೆಯುವರಿಗಾಗಿ ಅಪೇಕ್ಷಿಸುವ,

ಕಾರ್ಯಭಾಗಿ.

ಸಾದರ ಸ್ವೀಕಾರ

ಗದಗ ಶತಕರವಾಸಿಗಳಾದ ಶ್ರೀ ವೇ॥ ಹೀಟೆಪ್ಪಯ್ಯ ಶಾಸ್ತ್ರಿಗಳು ಹಿರೇಮಠ ಇವರಿಂದ ರಚಿಸಲ್ಪಟ್ಟ "ಬಸವೇಶ್ವರ ಪಂಚಾಂಗ"ವು ನಮ್ಮ ಪತ್ರಿಗತ ವಾಗಿದ್ದು ಅದರಲ್ಲಿ ಜನೋಪಯೋಗದ ಅನೇಕ ವಿಷಯ ಗಳು ಅತಿಶಯವಾಗಿವೆ ಸದರ ಪಂಚಾಂಗವು ಬಹುದಿನ ಗಳಿಂದ ಹೊರಡುತ್ತ ಅದರಂತೆಯವಾಗಿವೆ ಇತ್ತ ಮುಂದಾದರೂ ಜಗದಾಚಾರ್ಯರ ಅಮೃತ್ಯಹದಿಂದ ಕರ್ನಾಟಕದ ತುಂಬಾ ಪಸರಿಸಲೆಂದು ಹಾರೈಸುತ್ತೇವೆ.

ಸಂ.—

ವಿವಾಹಮಹೋತ್ಸವ ಗಡಗ

ಗಡಗ ಶಹರವಾಸಿಗಳಾದ ವೇ॥ ಲಿಂಗಯ್ಯನವರು ಶಿಲ್ಪಿಮರ ಮುನಿಸಿಪಲ್ ಕೌನ್ಸಿಲರ ಇವರ ಅಜ್ಞಾನವರಾದ ವೇ॥ ನೋಮಯ್ಯನವರ ಸುಪುತ್ರ ಚಿ॥ ಶಿವಯ್ಯನವರ ವಿವಾಹವು ಬೆಳಗಾಂವ್ ಹಿರೇಸುರದ ವೇ॥ ಸಿದ್ಧರಾಮಯ್ಯನವರ ಸುಪುತ್ರಿ ಚಿ॥ ಕುಂ॥ ಸೌ॥ ನೀಲಾದೇವಿಯೊಡನೆ ಮಂಗಳೂರು ಅರಳೆಲೆಮಠದ ಪಟ್ಟದಸ್ವಾಮಿಗಳವರ ನೇತೃತ್ವದಲ್ಲಿ ಜರುಗಿತು ವಿವಾಹ ಸಮಯದಲ್ಲಿ ಶ್ರೀ ರಂಭಾಪುರೀ ಜಗದ್ಗುರುಗಳೂ ಇನ್ನೂ ಆನೇಕ ಸುಜಾಜನಗಳೆಂದಲೂ ಒಂದ ಸಂದರ ಓದಿ ನೂತನ ವಧೂ-ವರರಿಗೆ ಮಂಗಲಪ್ರಸಾದ ಕೋರಲಾಯಿತು ಶ್ರೀ ಜಗದ್ಗುರು ಪಂಚಾಚಾರ್ಯರ ಆಶೀರ್ವಾದದಿಂದ ವಧು ವರರು ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದಿ ಚಿರಾಯುಗಳಾಗಿ ಬಾಳಲೆಂದು ಕೋರುವ,

ಓರ್ವ ಪೃತ್ಯಪ್ಪದರ್ತಿ

ವಿವಾಹಮಹೋತ್ಸವ ಅತ್ತಿಹಲೂರು

ಧಾರವಾಡ ಡಿ॥ ಅತ್ತಿಹಲೂರು ಗ್ರಾಮವಾಸಿಗಳಾದ ಶ್ರೀ ಮಳೆಯಯ್ಯನವರು ರಾಜಯ್ಯನವರು ಹಿರೇವರ ಇವರು ತಮ್ಮ ಸುಪುತ್ರಿ ಕುಂ॥ ಸೌ॥ ಅಕ್ಕನಾಗಮ್ಮ ಉರ್ಫ್ ಲಕ್ಷ್ಮೀದೇವಿಯೆಂಬ ವಧೂವನ್ನು ಕದರಮಂಡಲಿಗಿ ಹಿರೇಮಠದ ಕೈ॥ ಅನ್ನದಾನಯ್ಯನವರ ದತ್ತಪುತ್ರ ಚಿ॥ ಜನ್ನ ಬಸವಯ್ಯ ಎಂಬ ವರನಿಗೆ ಕೊಟ್ಟು ಇದೇ ಮಾಘ ಬ॥ ೪ ಬುಧವಾರ (ತಾ॥ ೪-೨-೫೩) ದಿವಸ ಅಕ್ಷತಾರೋಪಣ ಕಾರ್ಯವನ್ನು ನೆರವೇರಿಸಿದರು ಈ ವಿವಾಹಕ್ಕೆ ಸಂ॥ ಹರಿಕ್ಷೇತ್ರದಶಾಸ್ತ್ರಿಗಳವರು ಆಗಮಿಸಿದ್ದರು. ನೂತನ ದಂಪತಿಗಳು ಶ್ರೀ ಜಗದ್ಗುರು ಪೀಠಾಚಾರ್ಯರ ಆಶೀರ್ವಾದದಿಂದ ಅಭಿವೃದ್ಧಿಹೊಂದಿ ಬಾಳಲೆಂದು ಕೋರುವ,

ಓರ್ವ ಕಾರ್ಯಭಾಗಿ

ಸ್ವೀಕಾರ

ಗಡಗ ಪಟ್ಟಣವಾಸಿಗಳಾದ ವೇ॥ ನೋಮಯ್ಯನವರು ಶಿಲ್ಪಿಮಠ ಇವರ ಚಿ॥ ಶಿವಯ್ಯನವರ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ವರನ ಕಡೆಯಿಂದ **ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ವರನ ಕಡೆಯಿಂದ 5** ರೂ. ವಧುವನ ಕಡೆಯಿಂದ **2** ರೂ ಒಟ್ಟು **7** ರೂ ಗಳು ಶ್ರೀ ಬಸವಗೌಡಾ ಕೊಂಡಿಹಾಳ ಇವರ ದ್ವಾರಾ ತಲ್ಪಿರುತ್ತವೆ

ಧಾರವಾಡ ಡಿ॥ ಅತ್ತಿಹಲೂರು ಗ್ರಾಮವಾಸಿಗಳಾದ ಶ್ರೀ ಹಿರೇಮಠದ ಮಳೆಯಯ್ಯನವರು ತಮ್ಮ ಪುತ್ರಿಯ ವಿವಾಹದಲ್ಲಿ ಪ್ರಭಾಪೋಷಣಕ್ಕಾಗಿ **2** ರೂ ಗಳನ್ನು ಸಮರ್ಪಿಸಿ ಕಳಿಸಿದ್ದಾರೆ

ಧಾರವಾಡ ಡಿ॥ ಲಕ್ಷ್ಮೇಶ್ವರ ಗ್ರಾಮವಾಸಿಗಳಾದ ಕೈ॥ ಸಂಗನಬಸಪ್ಪ ಹೂವಿನ ಇವರ ಸುಪುತ್ರಿ ಕುಂ॥ ಸೌ॥ ಕಾಶವ್ವನನ್ನು ರಾಣೆಬೆನ್ನೂರ ಶಹರವಾಸಿಗಳಾದ ಶ್ರೀ ಚನ್ನ ಪ್ಪನವರು ಜಂಬಿಗಿ ಇವರ ಸುಪುತ್ರ ಚಿ॥ ಕೇತಪ್ಪನಿಗೆ ಕೊಟ್ಟು ತಾ॥ ೬-೨-೫೩ ನೇ ಶುಕ್ರವಾರ ನಡೆದ ವಿವಾಹ ಸಮಾರಂಭದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ **2** ರೂ ಗಳು ಶ್ರೀ ವೀರಪ್ಪ ಹೂವಿನ ಇವರ ದ್ವಾರಾ ತಲ್ಪಿರುತ್ತವೆ

ಡಾವಣಗೆರೆ ಪಟ್ಟಣವಾಸಿಗಳಾದ ಶಿಳವಳ್ಳಿ ಶೆಟ್ಟರು ಶ್ರೀ ನಂಜುಂಡಪ್ಪನವರ ಧರ್ಮಪತ್ನಿ ಚಿಂದ್ರಮ್ಮನವರು ತಾರೀಖು ೮-೨-೫೩ ನೇ ಭಾನುವಾರ ಸ್ವರ್ಗಸ್ಥರಾದ ಮೂಲಕ ಕೈಲಾಸ ಸಮಾರಾಧನೆಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಸಿದ **2** ರೂ ಗಳು ಶ್ರೀ ಜೆಜ್ ಎಂ ಶಿವಾನಂದಸ್ವಾಮಿಶಾಸ್ತ್ರಿ ಇವರ ದ್ವಾರಾ ತಲ್ಪಿರುತ್ತವೆ

ಈ ನೇಲ್ಯಂದಿ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ತಾವೈಸುತ್ತೇನೆ

ವರ್ತಮಾನಸಂಗ್ರಹ

ಕರ್ನಾಟಕ ಪ್ರಾಂತ್ಯರಚನೆಯನ್ನು ಯಾರೂ ತಡೆಗಟ್ಟಿಲಾರರು

ಶ್ರೀ ನೆಹ್ರುಯವರ ಸ್ಪಷ್ಟೋಕ್ತಿ

ಭಾಷಾವಾರು ಪ್ರಾಂತ್ಯ ಚಳುವಳಿಯನ್ನು ತುಳಿಯಲಾಗುವುದೆಂದು ಬೈದ್ರಾಬಾದ್ ಅಧಿವೇಶನದಲ್ಲಿ ನಾಯಕರು ಹಾಕಿದ ಬೆದರಿಕೆಗಳಂದ ಕರ್ನಾಟಕದ ಚಳುವಳಿ ಎಂದಿಗೂ ನಿಲ್ಲುವುದಿಲ್ಲ ಕರ್ನಾಟಕ ಪ್ರಾಂತ್ಯ ರೂಪು ಗೊಳ್ಳದಂತೆ ತಡೆಗಟ್ಟುವ ಶಕ್ತಿ ಯಾವ ನಾಯಕರಿಗೂ ಇಲ್ಲ—ಎಂಬುದಾಗಿ ಪಾರ್ಲಿಮೆಂಟ್ ಸದಸ್ಯರಾದ ಟಿ ಆರ್ ನೆಹ್ರುಯವರು ತಿಳಿಸಿದರು ಶ್ರೀ ಅಂದಾನಪ್ಪ ದೊಡ್ಡ ಮೇಟಿಯವರ ಅಧ್ಯಕ್ಷತೆಯಲ್ಲಿ ಅವರು ಜಿಲ್ಲಾ ಕರ್ನಾಟಕ ಯುವಜನ ಸಮ್ಮೇಳನದ ಆರಂಭೋತ್ಸವನ್ನು ನೆರವೇರಿಸುತ್ತ, ಕನ್ನಡಿಗರ ಆಕ್ಷೋತ್ಪರವು ಬೇಗನೆ ನೆರವೇರಿ ಪ್ರತ್ಯೇಕ ಕರ್ನಾಟಕ ಪ್ರಾಂತ್ಯ ಸ್ಥಾಪನೆಯಲ್ಪಡಬೇಕು ಎಂದರು ಪ್ರತ್ಯೇಕ ಕರ್ನಾಟಕ ಪ್ರಾಂತ್ಯ ಸ್ಥಾಪನೆಯಲ್ಪಡಬೇಕೆಂದು ಭಾರತ ಸರಕಾರವನ್ನು ಒತ್ತಾಯಪಡಿಸುವ ನಿರ್ಣಯವಾಯಿತು ನಾನೆಲ್ ನಗರದ ಕಾಂಗ್ರೆಸ್ ಅಧಿವೇಶನವಲ್ಲೂ ಭಾಷಾವಾರು ಪ್ರಾಂತ್ಯಗಳ ಬಗ್ಗೆ ಆದ ನಿರ್ಣಯದ ಬಗ್ಗೆ ಅಸಮಾಧಾನವನ್ನು ವ್ಯಕ್ತ ಪಡಿಸಲಾಯಿತು

ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ಯರ ನಿಧನ

ಭಾರತದ ರಕ್ಷಣಾಮಂತ್ರಿ ಶ್ರೀ ಎನ್ ಗೋಪಾಲ ಸ್ವಾಮಿ ಅಯ್ಯಂಗಾರ್ಯರು ತಾ॥ ೧೦ ನೇ ದಿನ ಬೆಳಿಗ್ಗೆ ೩ ಗಂಟೆ ಸಮಯದಲ್ಲಿ ಮದ್ರಾಸ್ ಜನರಲ್ ಆಸ್ಪತ್ರೆಯಲ್ಲಿ ನಿಧನರಾದರು

ಇವರಿಗೆ ಅಂತ್ಯಕಾಲದಲ್ಲಿ ೭೧ ವರ್ಷ ವಯಸ್ಸಾಗಿತ್ತು ಬ್ರಿಟಿಷರ ಕಾಲದಲ್ಲಿಯೇ ಪೂರ್ಣ ಆಡಳಿತಾನುಭವ ಪಡೆದಿದ್ದ ಶ್ರೀ ಅಯ್ಯಂಗಾರ್ಯರು, ಭಾರತ ಸ್ವತಂತ್ರವಾದ ನಂತರ ತಮ್ಮ ಅಪಾರ ಅನುಭವವನ್ನು ದೇಶಸೇವೆಗಾಗಿ ಅರ್ಪಿಸಲು ಮುಂದೆ ಬಂದರು ಅಂದಿನಿಂದ ಅಂತ್ಯಕಾಲದವರೆಗೆ ಅವರು ವಿಶಿಷ್ಟಸ್ಥಾನವಾಗಿ ಮಾನ್ಯ ಭೂಮಿಯ ಸೇವೆ ಸಲ್ಲಿಸಿದರು ನೃತರ ಆಕ್ಷಕ್ಕೆ ದೇವರು ಶಾಂತಿಯನ್ನಿಯಲಿ

ಪಾರ್ಲಿಮೆಂಟ್ ಭವನದ ಮೇಲೆ ತಿರುಗುವ ಚಕ್ರ

ಕೇಂದ್ರ ಪಾರ್ಲಿಮೆಂಟ್ ಭವನದ ಮುಂಭಾಗದಲ್ಲಿ ನೀಲುಗಡೆ ಚಕ್ರವೊಂದನ್ನು ಇಡಲಾಗುದಿಯೆಂದೂ, ಆ ಚಕ್ರವು ಪಾರ್ಲಿಮೆಂಟ್ ಅಧಿವೇಶನ ನಡೆಯುತ್ತಿರುವ ಕಾಲದಲ್ಲಿ ತಿರುಗುತ್ತಿರುವುದೆಂದೂ ಇಲ್ಲದ ವೇಳೆಯಲ್ಲಿ ಸುಮ್ಮನಿರುವುದೆಂದೂ ವರದಿಯಾಗಿದೆ

ಚೀಣದಲ್ಲಿ ಆಟಂಬಾಂಬುಗಳನ್ನು ಹಾಕಬೇಕು

ಚೀಣದಲ್ಲಿ ಆಟಂಬಾಂಬುಗಳನ್ನು ಹಾಕಿ ನೌಕಾದಿಗ್ಬಂಧನವನ್ನೇರ್ಪಡಿಸಬೇಕೆಂದು ಅಮೆರಿಕದ ಉನ್ನತ ಅಧಿಕಾರಿಗಳು ಸೂಚಿಸಿರುವುದಾಗಿ ನ್ಯೂಯಾರ್ಕ್ ಟೈಂಸ್ ಪತ್ರಿಕೆ ವರದಿಮಾಡಿದೆ.

ಚೀಣ ಸಂಗ್ರಾಮದಲ್ಲಿ ರಷ್ಯ ತಲೆ ಹೊಕ್ಕುವುದೇ ?

ಇನ್ನು ಮೂರು ಅಥವಾ ಆರು ತಿಂಗಳಲ್ಲಿ ಕಮ್ಯೂನಿಸ್ಟ್ ಚೀಣ ಮೇಲೆ ಪೂರ್ಣ ದಂಡಯಾತ್ರೆ ನಡೆಸಲಾಗುವುದು-ಎಂದು ಚಿಯಾಂಗ್ ಕೈಷೆಕ್‌ರವರ ಎಕ್ಸಿಕ್ಯುಟಿವ್ ಕೌನ್ಸಿಲ್ ಸದಸ್ಯರಾದ ಮಿ॥ ಚಾಪೊಮಿನ್‌ರವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು" ರಷ್ಯವು ಈ ದಂಡಯಾತ್ರೆಯಲ್ಲಿ ತಲೆಹಾಕುವುದರ ಬಗ್ಗೆ ಅವರು ತಮ್ಮ ಸಂಶಯ ವ್ಯಕ್ತಪಡಿಸಿದರು.

ನವಚೀಣದಮೇಲೆ ಯುದ್ಧಹೂಡಿದರೆ ಪೂರ್ಣ ಬೆಂಬಲಕೊಡುವುದಾಗಿ ಭರವಸೆ ತಂತಿ

ನವಚೀಣದ ಮೇಲೆ ರಾಷ್ಟ್ರೀಯ ಚೀಣ ಯುದ್ಧ ಹೂಡಿದಲ್ಲಿ ತಾವೆಲ್ಲರೂ ಪೂರ್ಣ ಬೆಂಬಲ ನೀಡುವುದಾಗಿ ಭರವಸೆಯಿತ್ತು ಸಿಂಗಪುರದ ಹೂರಳ್ಳಿ ಮಿಗಿಲಾಗಿ ಚೀಣದ ಸಂಘಗಳು ಏಸೆನ್‌ಹೋವರ್‌ರವರಿಗೂ, ರಾಷ್ಟ್ರೀಯ ಚೀಣದ ಪ್ರಧಾನ ಚಿಯಾಂಗರಿಗೂ ತಂತಿ ಕಳುಹಿಸಿದ್ದಾರೆ

ಉಃ॥ ಕೊರಿಯ ಮಂತ್ರಿಯ ಎಚ್ಚರಿಕೆ

ಉತ್ತರ ಕೊರಿಯಾದ ರಕ್ಷಣಾಸಚಿವರಾದ ಚಾಯ್ ಯಂಗ್ ಕನ್‌ರವರು ಕೊರಿಯ ಜನತಾ ಪ್ರಜಾಧಿಕೃತ ಐದನೆಯ ವಾರ್ಷಿಕೋತ್ಸವದಲ್ಲಿ ಮಾತನಾಡುತ್ತಾ, ಕೊರಿಯದ ಜನತೆ ಬಹಳ ಎಚ್ಚರದಿಂದಿರಬೇಕೆಂದೂ, ದೀರ್ಘಕಾಲದ ಯುದ್ಧಕ್ಕೆ ಸಿದ್ಧರಾಗಿರಬೇಕೆಂದೂ ಎಚ್ಚರಿಸಿದ್ದಾರೆ ಉತ್ತರ ಕೊರಿಯದ ಸೇನೆಯು ಅಜೇಯವಾಗಿದೆಯೆಂಬು ಅವರು ತಿಳಿಸಿದರು ಆಮಿಕರವು ಮತ್ತೆ ತನ್ನ ಮಿಲಿಟರಿ ಉದ್ಯಮವನ್ನು ವಿಸ್ತರಿಸಲು ಪ್ರಯತ್ನಿಸಿದರೆ ಅದಕ್ಕೆ ಬಲವಾದ ಪೆಟ್ಟು ಕೊಡಲು ಸಿದ್ಧ-ಎಂದು ಅವರು ಎಚ್ಚರಿಸಿದರು.

ವಿಮಾನ ಹಿಂದಕ್ಕೆ ಕೊಡುವುದಿಲ್ಲ

ಹಂಗೇರಿಯು ಈ ಹಿಂದೆ ಅಮೆರಿಕದ ವಿಮಾನವೊಂದನ್ನು ವಶಪಡಿಸಿಕೊಂಡಿತ್ತು, ಅದನ್ನು ವಾಪಸ್ ಕೊಡ ಬೇಕೆಂದು ಅಮೆರಿಕ ಮಾಡಿದ್ದ ಮನವಿಯನ್ನು ಹಂಗೇರಿ ಸರಕಾರ ತಿರಸ್ಕರಿಸಿದೆ.

ದಂಪತಿಗಳಿಗೆ ಗಲ್ಲಿನ ಶಿಕ್ಷೆ

ಅಣುಬಾಂಬ್ ರಹಸ್ಯವನ್ನು ರಷ್ಯಕ್ಕೆ ಹೊರಗೆಡವಿದ ರೆಂಬ ಆಪಾದನೆಯ ಮೇಲೆ ಗಲ್ಲಿನ ಶಿಕ್ಷೆಗೆ ಗುರಿಮಾಡಲ್ಪಟ್ಟಿರುವ ತರುಣದಂಪತಿಗಳಾದ ಜೂಲಿಸ್ ರೋಸೆನ್‌ಬರ್ಗ್ ಮತ್ತು ಆತನ ಪತ್ನಿ ಮಿಸೆಸ್ ಎಥಿಲ್‌ರವರ ವಿಷಯದಲ್ಲಿ ತಾವು ಕೈಹಾಕುವುದಿಲ್ಲವೆಂದು ಅಮೆರಿಕದ ಅಧ್ಯಕ್ಷರಾದ ಮಿ॥ ಏಸೆನ್‌ಹೋವರ್‌ರವರು ತಿಳಿಸಿದ್ದಾರೆ.

ಗಲ್ಲಿನ ಶಿಕ್ಷೆಗೊಳಗಾಗಿರುವ ದಂಪತಿಗಳು ಅಧ್ಯಕ್ಷರಲ್ಲಿ ಕ್ಷಮೆಗಾಗಿ ಅರ್ಜಿ ಸಲ್ಲಿಸಿದ್ದರು ಈ ತರುಣದಂಪತಿಗಳಿಗೆ ಗಲ್ಲಿನಶಿಕ್ಷೆಯನ್ನು ೫೧ ನೆ ತಾರಿಖಿನಂದು ವಿಧಿಸಲಾಯಿತು. ಆನಂತರ ಅವರು ಹೈಕೋರ್ಟ್ ಮತ್ತು ಸುಪ್ರೀಂಕೋರ್ಟುಗಳಲ್ಲಿ ಸಲ್ಲಿಸಿದ್ದ ಅರ್ಜಿಗಳನ್ನು ವಿಚಾರಣೆಗೆ ತೆಗೆದುಕೊಳ್ಳಲು ಆ ಕೋರ್ಟುಗಳು ನಿರಾಕರಿಸಿದುವು ಆವನ್ನು ಜ ೧೭ ರಂದೇ ಗಲ್ಲಿಗೇರಿಸಬೇಕಾಗಿತ್ತು ಆದರೆ ಅಧ್ಯಕ್ಷರಲ್ಲಿ ಅವರು ಸ್ವಯಂ ಅರ್ಜಿ ಸಲ್ಲಿಸಿದ್ದುದರಿಂದ ಶಿಕ್ಷೆ ಜಾರಿಗೆ ತರುವುದನ್ನು ಮುಂದಕ್ಕೆ ಹಾಕಲಾಗಿತ್ತು ಅವರನ್ನು ಗಲ್ಲಿಗೇರಿಸಲಾಗುವುದೆಂದು ಗೊತ್ತಾಗಿದೆ

ಬೆಂಗಳೂರಿನಲ್ಲಿ ಎರಡಂತಸ್ತಿನ ಬಸ್

ನಗರದ ಬಿ ಟಿ ಸಿ ಕಂಪನಿಯವರು ಹಿಂದುಸ್ತಾನ್ ವಿಮಾನ ಕಾರ್ಖಾನೆಯಲ್ಲಿ ತಯಾರಾದ ಎರಡಂತಸ್ತಿನ (ಡಬ್ಬಲ್ ಡೆಕ್) ಎರಡು ಬಸ್‌ಗಳನ್ನು ಕೊಂಡುತಂದಿದ್ದಾರೆ ಈ ಬಸ್ಸುಗಳು ಇಸ್ಪಾರ್ಲೆ ಮೆಜೆಸ್ಟಿಕ್-ರಸೆಲ್ ಮಾರ್ಕೆಟ್ ಪಾಡಿಯಲ್ಲಿ ಸಂಚರಿಸುವುವು ಈ ಬಸ್‌ಗಳಲ್ಲಿ ೧೦೦ ಜನಕ್ಕೆ ಸ್ಥಳವಕಾಶ ಕಲ್ಪಿಸಲಾಗಿದೆ.

ಭಾರತದ ಪ್ರಧಾನಪದವಿ

ಪ್ರಧಾನಿ ಪಂಡಿತ್ ನೆಹ್ರುರವರು ರಾಣಿಯ ಕಿರೀಟ ಧಾರಣಮಹೋತ್ಸವದಲ್ಲಿ ಭಾಗವಹಿಸಲು ಲಂಡನ್ನಿಗೆ ತೆರಳುವ ಕಾಲದಲ್ಲಿ ಅವರು ಹಿಂದಿರುಗುವವರೆವಿಗೂ ಶ್ರೀ ಸಿ ರಾಜಗೋಪಾಲಾಚಾರಿಯವರೇ ಭಾರತದ ಮಹಾ ಪ್ರಧಾನರ ಕೆಲಸಕಾರ್ಯ ನೋಡಿಕೊಳ್ಳುವರೆಂದೂ ದೆಹಲಿಯ ರಾಜಕೀಯ ವೃತ್ತಗಳಲ್ಲಿ ಬಂದ ಸುದ್ದಿ ತಿಳಿಸಿದೆ

Edited, Printed and Published by Bruhanmathadhyaksha Sri Mahadevaiah at Sri Panchacharya Electric Press, Sayaji Rao Road, Mysore

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿಕರ್ ಪಂಚಾಸ್ಯಬೀಜಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋದಕರ್ । ಪಂಚಾಚಾರ್ಯಜಗದ್ಗುರೂತ್ತಮವರ್ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು—ಶಾಗನೂರು ಬೃಹನ್ಮಹಾಧ್ಯಕ್ಷರಾದ ವೇ॥ ಪಂ॥ ಶ್ರೀ ಶಾಂತಿಶಾಸ್ತ್ರಿಗಳವರು.

ವಾರ್ಷಿಕ ಚಂದಾ ೩ ರೂ.] ಸಂಪಾದಕರು—ಶಾಗನೂರು ಬೃಹನ್ಮಹಾಧ್ಯಕ್ಷರಾದ ಶ್ರೀ ಮಹಾದೇವಯ್ಯನವರು [ವಿ ಪಿ ಖರ್ಚು ಸೇರಿ ೩ ರೂ ೬ ಆ.

ಸಂಪುಟ ೨೬] ಸೋಮವಾರ ತಾ॥ ೨೩ ನೇ ಫೆಬ್ರುವರಿ ೧೯೫೩ [ಸಂಚಿಕೆ ೪೧

ಮೈಸೂರು ಶ್ರೀಮನ್ಮಹಾರಾಜರವರಿಗೆ
ಪುತ್ರರತ್ನ ಜನನ

ಕರ್ನಾಟಕ ರತ್ನಸಿಂಹಾಸನಾದೀಶ್ವರ ಶ್ರೀಮನ್ಮಹಾರಾಜ ಜಯಚಾಮ ರಾಜೇಂದ್ರ ಒಡೆಯರ್ ಮಹಾಪ್ರಭುಗಳು ತಮ್ಮ ಆಳಿಕೆಯಲ್ಲಿ ಶಾಂತಿಯಿಂದ ರಾಜ್ಯಸೂತ್ರಗಳನ್ನು ನಿರ್ವಹಿಸಿಕೊಂಡು ಪ್ರಜೆಗಳ ಪ್ರೇಮಾದರಗಳನ್ನು ಮನ್ನಿಸುತ್ತ, ಭರತಖಂಡದ ಸಕಲ ಪುಣ್ಯಕ್ಷೇತ್ರ ತೀರ್ಥಗಳಿಗೆ ದರ್ಶನಕೊಟ್ಟು ಪೂಜೋತ್ಸವ ಗಳನ್ನು ನಡೆಸುತ್ತ, ಆತಿಯಾಗಿ ದಾನಧರ್ಮಗಳನ್ನು ನೂಡುತ್ತ ಬಂದುದರ ಫಲವಾಗಿ ಧರ್ಮಸಿಂಹಾಸನದ ತೇರ್ತಿಯನ್ನು ಪಸರಿಸಲೋಸುಗ ಧರ್ಮಮೂರ್ತಿಯೇ ಅವತರಿಸಿದಂತೆ ಪರಮಾತ್ಮನ ಕೃಪೆಯಿಂದ ಮಹಾಪ್ರಭುಗಳವರಿಗೆ ಇಪೇ ಫಾಲ್ಗುಣ ತು॥ ೭ ಗುರುವಾರ (ತಾ॥ ೧೯-೨-೧೯೫೩) ದಿವಸ ಪುತ್ರರತ್ನವು ಜನಿಸಿದ ಶುಭ ವಾರ್ತೆಯನ್ನು ಕೇಳಿ ರಾಜಭಕ್ತಿಯುತರಾದ ಮೈಸೂರು ಸಂಸ್ಥಾನದ ಆರ್ಯಾತ್ ಕನ್ನಡಿಗರ ಆನಂದಕ್ಕೆ ಸಾರವೇ ಇಲ್ಲವೆಂತಾಗಿದೆ.

ಮೈಸೂರು ಸಂಸ್ಥಾನದ ಉತ್ತರಾಧಿಕಾರಿಯಾಗಿಯೂ ಕನ್ನಡನಾಡಿನ ದೊರೆಯಾಗಿಯೂ ಜನಿಸಿದ ಈ ರಾಜಕುಮಾರರು ರಾಜಕುಲವ್ಯೆವತವಾದ ಶ್ರೀ ಚಾಮುಂ ಡೇಶ್ವರಿಯ ಕೃಪೆಯಿಂದ ಚಿರಾಯುಗಳಾಗಿ ಬಾಳಲೆಂದೂ ರಾಜಕುಟುಂಬವು ಆರೋ ಗ್ಯಭಾಗ್ಯವನ್ನು ಹೊಂದಲೆಂದೂ ಹೃರ್ಪೂರ್ವಕ ಶುಭಾಶಯಗಳನ್ನು ಕೋರುತ್ತೇವೆ

ಪತ್ರವ್ಯವಹಾರ

[ಖಾತ್ರೀದಾರರು ಅಭಿಪ್ರಾಯ ಪಡುವ ಲೇಖನಗಳಿಗೆ ತಕ್ಕಶಿಕ್ಷೆಯನ್ನು ಪತ್ರಿಕಾಕರರು ಜವಾಬ್ದಾರರಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡಬೇಕೆಂದು ಪ್ರಾರ್ಥನೆ. —ಸಂ]

ಗೀತಾಸಂದೇಶ

ಈ —ಶ್ರೀ ಸಂಗಮ್ಮಾಸ್ವಾಮಿ ಶಿವಲೀಲಾಶ್ರಮ
ದೊಡ್ಡಮುದವಾಡಿ

ಪ್ರಶ್ನೆ—ಸ್ವರೂಪಜ್ಞಾನವು ಜನರಿಗೆ ಅದೇಕೆ ಅಸಾಧ್ಯವಾಗಿದೆ ?

ಉತ್ತರ— ಸ್ವಸ್ವರೂಪಜ್ಞಾನವು ತಿಳಿಯಬೇಕಾದರೆ ಇದರಲ್ಲಿ ತನ್ನ ಸ್ವರೂಪವಂ ತಾನೇ ತಿಳಿಯಬೇಕಾಗಿರುವುದರಿಂದಲೂ, ಸ್ವರೂಪವಂ ತೋರಿಸುವುದಕ್ಕೆ ಬುದ್ಧಿಯು ಕನ್ನಡಿಯಾಗಿರುವುದರಿಂದಲೂ ಜಗಜ್ಞಾನಿಯೆಂಬ ಧೂರ್ತಿಂದ ಮಲಿನವಾಗಿರುವುದರಿಂದಲೂ, ಅಸಾಧ್ಯವಾಗಿರುತ್ತದೆ. ಆದರೆ ಬುದ್ಧಿಗೆ ವಿವೇಕ, ಸತ್ಸಂಗಗಳ ಶೋಷಣೆಯಾದರೆ ಸಾಣಿಗೆ ಕೊಟ್ಟ ಪಲಗೆಯಂತೆ ಹದನಾಗಿಯೂ ಪೊರೆಬಿಚ್ಚಿದ ಹಾವಿನಂತೆ ಶುದ್ಧವಾಗಿಯೂ ಆಗಿ ಸ್ವಸ್ವರೂಪವೆಂಬ ಪ್ರತಿಬಿಂಬವನ್ನು ಗ್ರಹಿಸುವುದಕ್ಕೆ ಯೋಗ್ಯವಾಗುವುದು

ಅನುಭವಮಂತಿಪ-ಪತ್ಯ, ಧ್ಯಾನ, ಕ್ಷೆಮ, ತೀಲ, ಸೌಜನ್ಯ. ತಪ, ಕರುಣೆ ಇತ್ಯಾದಿ ಸದ್ಗುಣಗಳು ಯಾರಲ್ಲಿ ನೆಲಸಿವೆಯೋ ಅವನೇ ಬ್ರಾಹ್ಮಣನು ಮಿಕ್ಕವರೆಂದಿಗೂ ಅಲ್ಲ ಒಂದು ಜಾತಿಯಲ್ಲಿ ಹುಟ್ಟುವುದರಿಂದಲೇ ಮೋಕ್ಷ ದೊರೆಯುವುದಿಲ್ಲ ಅದು ಗುಣ, ತೀಲ, ಜ್ಞಾನ, ಸಾಧನ ಗಳಿಂದ ಮಾತ್ರ ದೊರೆಯುತ್ತೆ.

೧ ಶ್ರದ್ಧಾಪೂರ್ವಕತ್ವದಿಂದ ಉದ್ಯೋಗ ಮಾಡಿದರೆ ಉದ್ಯೋಗಕ್ಕೆ ಗೌರವ ನಿಜವಾಗಿಯೂ ಬರುವುದು ಎಂತಹ ಬಿಕ್ಕಟ್ಟುಗಳು ಬಂದೊದಗಿದರೂ ನಿರಾಶೆಯನ್ನು ಹೊಂದಬಾರದು ಕೆಲವುಸಾರಿ ನಮ್ಮ ಉದ್ಯೋಗದಲ್ಲಿ ಅಪೇಕ್ಷಯು ಬರಬಹುದು ಅದರಿಂದ ಮನಸ್ಸನ್ನಲ್ಲಿ ಚಿಂತೆಗೆ ಅವಕಾಶ ಕೊಟ್ಟರೆ ನಮ್ಮ ಪ್ರಯತ್ನದ ಬಲವು ಕುಗಿಮೆಯಾಗುವುದು. ನಿರಾಶರಾದರೆ, ಉದ್ಯೋಗಮಾಡಲಿಕ್ಕೆ ಉತ್ಸುಕತೆಯುಂಟಾಗುವುದಿಲ್ಲ. ಯತ್ನಮಾಡಿ ಸೋತರೆ ದೋಷವಿಲ್ಲ.

೨ ಸುಳ್ಳು, ಜಾತಿ, ವಿಶ್ವಾಸ ಘಾತ, ಕ್ರೂರತನ, ಅಪಟ ಮುಂತಾದ ಕೆಟ್ಟ ಕೆಲಸಗಳನ್ನು ಮಾಡಲು ಹಿಂಜರಿದರೆ ಅಡ್ಡಿಯಿಲ್ಲ ಆದರೆ ಸತ್ಯ, ಪರೋಪಕಾರ, ದೈರ್ಯ, ಸ್ವಧರ್ಮಪ್ರೀತಿ, ಸ್ವದೇಶ ಪ್ರೀತಿ ಮುಂತಾದ ಒಳ್ಳೆಯ ಕೆಲಸಗಳನ್ನು ಮಾಡಲು ಎಂದಿಗೂ ಹಿಂಜರಿಯಬಾರದು

೩ ನಾವು ಸೋತರೆ ಜನರು ನಗುವರೆಂಬ ಹೆದರಿಕೆಯಿಂದ ನಮ್ಮ ಪ್ರಯತ್ನವನ್ನು ಬಿಡುವುದು ಹುಚ್ಚುತನವು ಹೇಡಿಗಳು ವ್ಯತ್ಯವಿಗೆ ಹೆದರಿ ಸಾಯುವರು ವೀರರು ತಾವಾಗಿ ವ್ಯತ್ಯವನ್ನು ಕರೆದು ಮಡಿಯುವರು ಧೈರ್ಯವು ಹೊರಟರೆ ಎಲ್ಲವೂ ನಾಶವಾದಂತೆ, ಧೈರ್ಯವನ್ನು ಕಳೆದುಕೊಂಡಮೇಲೆ ಭೂಮಿಯಮೇಲೆ ಹುಟ್ಟದೆ ಇರುವುದು ವಾಸಿ

೪ ಕಳೆದುಕೊಂಡ ಜೀವನ್ನು ತಿರುಗಿ ಗಳಿಸಬಹುದು ಕಳೆದುಕೊಂಡ ಆರೋಗ್ಯವನ್ನು ತಿರುಗಿ ಹೊಂದಬಹುದು ಆದರೆ ಮನಸ್ಸಿನೊಳಗಿನ ಧೈರ್ಯವನ್ನು ಕಳೆದುಕೊಂಡು ನಿರಾಶೆಯಿಂದ ಕುಳಿತರೆ ಕೆಲಸವನ್ನು ಮಾಡುವ ಉತ್ಸುಕತೆಯು ಎಂದಿಗೂ ಬರುವುದಿಲ್ಲ ಆದುದರಿಂದ ನಮ್ಮ ಕೆಲಸವನ್ನು ಮಾಡುವಾಗ ಅಪಜಯ, ದುಃಖ, ತೊಂದರೆ ಇವುಗಳು ಎಷ್ಟು ಬಂದರೂ ನಾವು ಸಮಾಧಾನದಿಂದ ತಡೆದುಕೊಳ್ಳಬೇಕು.

೫ ಪ್ರತಿಯೊಬ್ಬರೂ ತಪ್ಪುಗಳನ್ನು ಮಾಡುತ್ತಾರೆ, ತಪ್ಪುಗಳನ್ನು ಮಾಡದೆ ಇರುವವರು ಯಾವ ಕೆಲಸಗಳನ್ನೂ ಮಾಡಲಾರರು ಮತ್ತೊಬ್ಬನ ಅಂತಹ ತಪ್ಪನ್ನು ಮಾಡದೆ ಎಚ್ಚರಿಕೆಯಿಂದ ನಡೆಯುವುದು ವಿವೇಕವು ಒಳ್ಳೆಯತನ, ವಿದ್ಯೆ, ಬೆದೈರ್ಯ ಗಳಿಸುವವರು ಎಲ್ಲರಿಗಿಂತ ಹೆಚ್ಚಿನ ಪೌಖ್ಯವನ್ನು ಅನುಭವಿಸುವರು ಎಲ್ಲಾ ನಾಶಗಳಿಗಿಂತ ನಮ್ಮ ಸ್ವಂತಶ್ರಮದಿಂದಾಗುವ ನಾಶವು ಹೆಚ್ಚು ಕಷ್ಟ ಇರುವಾಗ ಮೈಗಳ್ಳತನದಿಂದ ಕಾಲಕಳೆದು ಕಷ್ಟ ಹೋದಾಗ ಮಿಡುಕುವುದು, ತಾರುಣ್ಯದಲ್ಲಿ ಅವಿಚಾರ ಕೃತ್ಯಗಳನ್ನು ಮಾಡಿ ಮುಪ್ಪಿನಲ್ಲಿ ದುಃಖವನ್ನು ಅನುಭವಿಸುವುದು ಉಚಿತವಲ್ಲ ಮಾಡಿದುದು ಮರೆಯ ಲರಿಯದು. ಹೋದುದು ಬರಲರಿಯದು ಆದುದರಿಂದ ಕಾಲವು ಹೋದಮೇಲೆ ಬಂದಬುದ್ಧಿಯು ನಿಷ್ಪ್ರಯೋಜನವಾಗುವುದು

ಅಮೃತವಚನ—ಫಲಾಪೇಕ್ಷೆ ಇಲ್ಲದೆ ಕರ್ತವ್ಯ ಕರ್ಮವನ್ನು ಆಚರಿಸುವಂತವನೇ ಸನ್ಯಾಸಿ, ಅಕ್ಷರೇ ಯೋಗಿ, ಪೆಂತಿಯನ್ನಾಗಲೀ ಶ್ರೆಯಸ್ಸನ್ನಾಗಲೀ ಕೈಜಸಿ ದಂಥವನು ಯೋಗಿಯೂ ಅಲ್ಲ, ಸನ್ಯಾಸಿಯೂ ಅಲ್ಲ. ತನ್ನಂತೆಯೇ ಪರರು ಎಂಬಾಗಿ ಎಲ್ಲರನ್ನೂ ಸಮಾನ ದೃಷ್ಟಿಯಿಂದ ಕಾಣುವುವಿಂದರೆ, ಒಳ್ಳೆಯದೂ ಕೆಟ್ಟದ್ದೂ ಎಲ್ಲವನ್ನೂ ಒಂದೇ ಎಂದು ತಿಳಿಯುವುದಾದರೆ, ಅಂಥ ನನು ಉತ್ತಮ ಯೋಗಿ ಎನಿಸುವನು. ನುವನ್ನು ಹತೋಟಿಯಲ್ಲಿಟ್ಟುವುದು ನಿಸ್ಪಂಹಯಾಗಿಯೂ ಬಹಳ ಕಷ್ಟಸಾಧ್ಯವಾದುದು. ಆದರೆ ಅದನ್ನು ಬಿಗಿಹಿಡಿಯಲು ಮತ್ತು ಹತೋಟಿಯಲ್ಲಿಟ್ಟುವುದು ಅಧ್ಯಾಸಮೂಲಕವೂ, ವೈರಾಗ್ಯಬಲದಿಂದಲೂ ಸಾಧ್ಯವಾಗುವುದು.

ಪಂಚಾಚಾರ್ಯಪ್ರಭಾ

೧೯೫೩ ನೆಯ ಫೆಬ್ರವರಿ ತಾ॥ ೩೩ ನೇ ಸೋಮವಾರ

ಲಿಂಗಪೂಜೆಗೆ ಸೂತಕದೋಷವಿಲ್ಲ

ಯಾಗಕರ್ಮವು ಯಾಗಕರ್ತರಾದ ಪತಿ-ಪತ್ನಿಗಳ ಆತ್ಮನಲ್ಲಿ ಒಂದು ಸಂಸ್ಕಾರವನ್ನು ಹುಟ್ಟಿಸಿ ತಾನು ನಾಶವಾಗುವಂತೆ ದೀಕ್ಷಾಕರ್ಮವು ದೀಕ್ಷಿತನ ಅಂಗದಲ್ಲಿ ಒಂದು ಸಂಸ್ಕಾರವನ್ನು ಹುಟ್ಟಿಸಿ ತಾನು ನಾಶವಾದರೂ ಆ ದೀಕ್ಷಾಕರ್ಮಜನ್ಯವಾದ ಸಂಸ್ಕಾರವು ಯಾವ ಸೂತಕಗಳೊದಗಿದರೂ ನಾಶವಾಗುವುದಿಲ್ಲ ಯಾಗ ಜನ್ಯಸಂಸ್ಕಾರದಂತೆ ತಾನು ದೇಹವಿರುವ ವರೆಗೂ ಸ್ಥಿರವಾಗಿದ್ದುಕೊಂಡು ಯಾವಜ್ಜೀವ ಕರ್ತವ್ಯವಾದ ಶಿವಲಿಂಗಪೂಜೆಗೆ ಆನುಕೂಲತೆಯನ್ನುಂಟುಮಾಡಿ ಕೊಡುವುದರಿಂದ ಅಶುಚಿಶರೀರದ ಸ್ಪರ್ಶದಿಂದ ಲಿಂಗದಲ್ಲಿ ನೆಲೆಗೊಂಡ ಸಂಸ್ಕಾರವು ಎಂದೂ ನಸ್ಯವಾಗಲಾರದು ಈ ವಿಷಯದಲ್ಲಿ ಅನೇಕ ಶಿವಾಗಮಗಳ ಪ್ರಮಾಣಗಳು ಘಂಟಾಘೋಷವಾಗಿ ಸಾರುತ್ತಿವೆ ಇದರ ಮೇಲೆ ಒಂದು ವೇಳೆ ಪ್ರಮಾಣಗಳನ್ನು ಅತಿಕ್ರಮಿಸಿ ರಜಸ್ವಲಾದಿ ಸೂತಕಗಳೊದಗಿದ ಕಾಲದಲ್ಲಿ ಸೂತಕಸಂಪರ್ಕದಿಂದ ಶರೀರವು ಅಪವಿತ್ರವಾಗುವದೆಂದೂ ಇಂಥ ಅಪವಿತ್ರವಾದ ಶರೀರಸಂಪರ್ಕದಿಂದ ಆ ಶರೀರದಲ್ಲಿ ಧರಿಸಲ್ಪಟ್ಟಿರುವ ಶಿವಲಿಂಗವು ಸಹ ಅಪವಿತ್ರವೆನಿಸುವುದೆ ಮೂ ಎಂದರೆ ಷಡಧ್ವದೋಷಗಳಾದಿ ಕರ್ಮಗಳಿಂದ ಶಿವಲಿಂಗದಲ್ಲಿ ನೆಲೆಗೊಂಡಿರುವ ಸಂಸ್ಕಾರವು ಮೊದಲು ನಾಶವಾದ ಹೊರತು ಶಿವಲಿಂಗವು ಅಪವಿತ್ರವಾಗಲಾರದು ಅದರಿಂದ ಶಿವಲಿಂಗವು ಅಪವಿತ್ರವಾಗದಿರುವ ಹೇತುವನ್ನು ಕೈಂತ ಮುನ್ನವೇ ಆ ಶಿವಲಿಂಗದಲ್ಲಿರುವ ಸಂಸ್ಕಾರವೇ ನಾಶವಾಗಬೇಕಾಗುವದು ಕರ್ಮಜನ್ಯವಾದ ಸಂಸ್ಕಾರವು ಮೃತ್ಯದಲ್ಲಿ ಯಾವ ವಿದನಾದ ತಿರಿಪಕ ಕೆಯಾ-ಟಾದರೂ ತಾನು ಫಲವನ್ನು ಕೊಡುವವರೆಗೆ ನಾಶವಾಗದೆ ದೀಪ ವಿರುವ ವರೆಗೂ ಕದಡಿದಂತೆ ಸ್ಫಟಿರವಾಗಿ ನಿಂತಿರುವು ದೆಂದು ಸಕಲ ಶಾಸ್ತ್ರಕಾರರೂ ಒಪ್ಪಿರುತ್ತಾರೆ ಇದರ ಮೇಲೆ ಆತ್ಮಜ್ಞಾನದಿಂದ ಸಂಸ್ಕಾರವು ನಾಶವಾಗಲೇ ಬೇಕೆಂದರೆ ಯಜ್ಞಕರ್ತನ ನ್ಯತ್ತು ಆತನ ಧರ್ಮಪತ್ನಿಯ ಅಂಗದಲ್ಲಿ ನಿಂತಿರುವ ಯಾಗಜನ್ಯವಾದ ಸಂಸ್ಕಾರಕ್ಕೂ ಆತ್ಮಜ್ಞಾನದಿಂದ ನಾಶವನ್ನು ಹೇಳಬೇಕಾಗುವದು ಬಹುದ್ರವ್ಯವ್ಯಯದಿಂದ ಒಮ ಆಯಾಸಸಾಧ್ಯ ವಾದ ಯಾಗವನ್ನು ನೋಡಿ ಅದರಿಂದ ಸ್ವರ್ಗಾದಿಸಲಸಾಧ್ಯ ವಾದ ಒಂದು ಸಂಸ್ಕಾರವನ್ನು ಆಜ ಸಿದ್ಧಿ ಆ ಭೌತಿಕ ಶರೀರವನ್ನು ತ್ಯಜಿಸಿದ ಮೇಲೆ ಸಂಭವಿಸಲೇಕಾದ ಅಂಥ ಸ್ವರ್ಗಾದಿಸಿದ್ಧಿರೂಪ ಫಲವನ್ನು ಕೊಡುವುದಕ್ಕೆ ಸಿದ್ಧ ವಾಗಿರುವ ಯಾಗಜನ್ಯ ಸಂಸ್ಕಾರವೇ ನಸ್ಯವಾಗಿ ಹೋಗವೇಳೆ ಯಾಗಕರ್ಮವೇ ನಿಸ್ಫಲವಾಯಿತು ಸ್ವರ್ಗರೂಪಸಲವನ್ನು ಕಾರಿತು ಯಾಗಜನ್ಯ ಸಂಸ್ಕಾರವು ತ್ಪತ್ಕಾರಣವಾದ ಸಂಸ್ಕಾರವೇ ನಾಶವಾದಮೇಲೆ ಕಾರ್ಯೋತ್ಪತ್ತಿಯಾಗುವುದೆಂತು ? ಇದರಂತೆ ಒಬ್ಬನು ಅಪಾರ ದ್ರವ್ಯವ್ಯಯಮಾಡಿ ಗಂಗಾಸ್ನಾನವನ್ನು ಮಾಡುತ್ತಾನೆ ಮತ್ತೊಬ್ಬನು ತೀರ್ಥಯಾತ್ರೆಗಳನ್ನು ಮಾಡುತ್ತಾನೆ ಇನ್ನೊಬ್ಬನು ವಿಶೇಷ ಅನ್ನ ಶಾಂತಿಯನ್ನು ಮಾಡುತ್ತಾನೆ ಗಣದೊಬ್ಬನು ದೇವಾಲಯಗಳನ್ನು ಕಟ್ಟಿಸುತ್ತಾನೆ. ವಾಪೀಕೂಪತಟಾಕಗಳನ್ನು ಮಾಡಿಸುತ್ತಾನೆ ಇಂಥ ಪುಣ್ಯಕರ್ಮಾಚರಣೆಯಿಂದ ಅಯಾಯ ಕರ್ಮಾಫಲ ಖೂಲಗಳಾದ ಸಂಸ್ಕಾರಗಳು ಪ್ರಾಪ್ತವಾಗುವವು ಪುಣ್ಯ ಕರ್ಮಗಳನ್ನು ಮಾಡಿದಮೇಲೆ ಮಧ್ಯಕಾಲದಲ್ಲಿ ಅನೇಕ ವಿಧಗಳಾದ ಸೂತಕಗಳು ಬರಿದೆ ಇರುವುದಿಲ್ಲ ಇಂಥ ಸೂತಕಗಳ ಸ್ಪರ್ಶದಿಂದ ಪುಣ್ಯಕರ್ಮಜನ್ಯವಾದ ಆ ಸಂಸ್ಕಾರಗಳಿಗೆಲ್ಲಾ ನಾಶಹೇಳುತ್ಕಹೋದರೆ ಆ ಕರ್ಮ ಗಳಿಗೆಲ್ಲಾ ಫಲವೇ ಇಲ್ಲದಂತಾಗುವದಲ್ಲದೆ " ಸ್ವರ್ಗ ಕಾಮೋಯಜೇತ " ಇತ್ಯಾದಿ ಕರ್ಮಫಲಬೋಧಕ ಗಳಾದ ವೇದಾಗಮಪುರಾಣಾದಿ ಸಕಲ ಶಾಸ್ತ್ರಗಳೂ ಸಹ ವ್ಯರ್ಥವಾಗಿ,

ಭ್ಯುಚ್ಚಯತ್ಕ ವೇಚಕ್ಕ ಪುನರಾಗಮನಂಕುತಃ ।
ತಸ್ಮಾತ್ಪರ್ವಪ್ರಯತ್ನೇನ ಮುಣಾಲ್ಕತ್ಪಾಲ್ಕಕಂಬಿಜೇತ್ ॥

ಇತ್ಯಾದಿ ಪ್ರಮಾಣಾನುಸಾರವಾಗಿ ನಾಸ್ತಿಕಮತ ಪ್ರವೇಶವಾಗುವ ಸಂಭವವುಂಟಾಗುತ್ತದೆ ಅದ್ದರಿಂದ

ಸ್ವಯಂ ಲಿಂಗಾರ್ಚನಂ ಯಸ್ಯ ಯಶ್ಚಾತ್ಮಪರಿಗ್ರಹಃ ।
ವಾನಪ್ರಸ್ಥಯತೀನಾಂ ಚ ಶರೀರೇ ನಾಸ್ತಿ ಸೂತಕಂ ॥

ಯಾವನು ಶಿವಲಿಂಗಾರ್ಚನೆಯಲ್ಲಿ ಆಸಕ್ತನಾಗಿರುವನೋ, ಯಾವನು ಯಾಗವನ್ನು ಮಾಡುವುದರಲ್ಲಿ ಆಸಕ್ತನಾಗಿರುವನೋ, ಯಾರು ವಾನಪ್ರಸ್ಥ ಯತ್ನಿಯ ಶ್ರಮಗಳನ್ನು ಹೊಂದಿರುತ್ತಾರೆಯೋ, ಅವರ ಶರೀರದಲ್ಲಿ ಸೂತಕಕರ್ದೋಷಗಳುಂಟಾಗುವುದಿಲ್ಲ ಎಂದು ಪರಾಶರಸ್ಮೃತಿಯು ಸ್ಪಷ್ಟವಾಗಿ ಹೇಳುವುದರಿಂದ ಯಜ್ಞಕರ್ತನ ಶರೀರದಲ್ಲಿ ಉದಯಿಸಿದ ಆಪೂರ್ವ ರೂಪಸಂಸ್ಕಾರವು ಸೂತಕ ದೋಷದಿಂದ ನಾಶವಾಗದಿರುವಂತೆ ಲಿಂಗಾಂಗಿಯ ಶರೀರದಲ್ಲಿ ಸೂತಕಕರ್ದೋಷಗಳಿಲ್ಲದಿರುವುದರಿಂದ, ಆಂಧ ದೀಕ್ಷಿತವಾದ ಶರೀರದಲ್ಲಿ ಧರಿಸಲ್ಪಟ್ಟಿರುವ ಶಿವಲಿಂಗ ದಲ್ಲಿರುವ ಸಂಸ್ಕಾರವು ಸಹ ನಾಶವಾಗದೆ ಸ್ಥಿರಗೊಂಡಿರು ವುದರಿಂದ, ಆಶೌಚವು ಸಂಸ್ಕಾರವನ್ನು ನಾಶಗೊಳಿಸ ಲಾರದು ಸಂಸ್ಕಾರವು ನಾಶವಾಗದೆ ಮೇಲೆ ಶಿವಲಿಂಗವು ಎಂದೂ ಅಶುಚಿತ್ವವನ್ನೊಸಲಾರದು ದೀಕ್ಷದಲ್ಲಿ ಧರಿಸಲ್ಪ ಟ್ಟಿರುವ ಇಷ್ಟಲಿಂಗವು ಅಶುಚಿ ಶರೀರಸಂಬಂಧದಿಂದ ತಾನು ಅಪವಿತ್ರಾಗಲಾರದೆಂದು ಹೇಳಿದ ನ್ಯಾಯವು ವನ್ನು ದೇವಾಲಯದಲ್ಲಿ ಪ್ರತಿಷ್ಠಿತವಾದ ಸ್ಥಾವರ ಲಿಂಗಕ್ಕೂ ಅನ್ವಯಿಸಬಹುದಾದಿರಿಂದ ಸೂತಕಾದಿ ದೋಷಗಳುಳ್ಳ ಭರ ವನ ವ್ಯರ್ಥದಿ ದ ಭೂಮಿಪ್ರತಿಷ್ಠಿತ ವಾದ ಶಿವಲಿಂಗದಲ್ಲಿರುವ ಸಂಸ್ಕಾರವೂ ಸಹ ನಾಶವಾಗದೆ ಸ್ಥಿರವಾಗಿರಬೇಕಲ್ಲವೆ ? ಆಮ ವೇಕೆ ಸ ಪ್ರಾಣ್ಪಪ್ರತಿಷ್ಠಾದಿ ಗಳಿಗೆ ಕರ್ತವಾಗಿವವ ? ಎಂಬ ಪ್ರಶ್ನೆಯು ಸಂಶೆಹ ವನು ಪರಿಹರಿಸಲಿಳ್ಳಲೆ ಬೇಕಾಗಿದೆ ಆದರೆ ದೀಕ್ಷದಲ್ಲಿ ದರಿಸ್ಪಟ್ಟಿ ಲಿಂಗಕ್ಕಿಲ್ಲದ ಪ್ರ ಷ್ಠಾದಿ ಪೂರ್ವಕವಾದ ಲಿಂಗಕ್ಕೆ ಮಾತ್ರವೇ ಏನಾದರೂ ವಿಶೇಷವಿರಬಹುದೆಂದು ಶಂಕಿಸಿ ಪ್ರಶ್ನೆಯನ್ನು ಮಾಡಿದ ಪ್ರಾಜ್ಞರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವೆವು ಆದರೆ ಪ್ರತಿಷ್ಠಾದಿ ಲಿಂಗವು ಇಷ್ಟಲಿಂಗವೇ ಸರ್ವ, ಪರವಿದೆ ಭೂವಿ ಯಲ್ಲಿ ಪ್ರತಿಷ್ಠಿತವಾದ ಲಿಂಗವು ಸ್ಥಾವರಲಿಂಗವೆಂಬ ಹೆಸರನ್ನು ಪಡೆದಿದೆ ಮತು ಈ ಸ್ಥಾವರಲಿಂಗವನ್ನು ಪಡಿದಿನಪೂಗ ಒಬ್ಬನೇ ಪೂಜಿಸಬೇಕೆಂಬ ನಿಯಮವೇನೂ ಇಲ್ಲ ಒಬ್ಬನು ಸೂತಕದೋಷದಿಂದ ತಕ್ಷಣಮಾದರೆ ಶಚಿಯಾದ ನ ತೊಬ್ಬನು ಪೂಜಿಸಿಲಿ ಗ್ಗಾಜಾಕಾರ್ಯವನ್ನು ನಿರ್ವಹಿಸಬಹುದೆಂದು ನಿಶ್ಚಯವಿಧಿಯಿರುವಾಗ ಇನ್ನು ಲಿಂಗವಾದರೋ ಆ ನಿಯಮ ವನು ಅನುಸರಿಸುವುದಿಲ್ಲ ಯಾವನು ದೀಕ್ಷೆಯಾಗಿರುವಲ್ಲಿ ಯಾಜ್ಞೇವನೂ ಬಿಡದೆ ಪೂಜೆಯನ್ನೆಸಗುವನು ಪ್ರತಿಜ್ಞೆ ಮಾಡಿ ಧರಿಸಿರುತ್ತಾನೆಯೋ ಇನನೇ ಆ ಲಿಂಗವನ್ನು ಪೂಜಿಸುತ್ತ ಧಾರಿಕ ತ್ತಲಿರಬೆ ಕೆಂಬ ವೀರಶೈವ ಸಿದ್ಧಾಂತವು ಬೋಧಿಸುವುದರಿಂದ ಒಬ್ಬ ಪುರುಷನೇ ತನ್ನ ಜೀವಮಿರುವವರಗೂ ಲಿಂಗದಿಂದ ಲಿಂಗವನ್ನು ಆ ವಿಂದೆ

ಲ್ಕಾಲ್ಕಾಪಾಂ ಬಹುನ್ಯೋ ನಿಜಲಿಂಗಂ ಪೂಜೋದಿತಂ ।
ಆಜ್ಞಾ ಲಂಘಭಪ್ರಾಪ್ತಿಃ । ಕರಿಷೀರೇ ನಸಾಸಾಂಶಃ ।

ಎಂಬ ವೀರಾಗಮೋಕ್ತಿಯನ್ನನುಸರಿಸಿ ಯಾವಾಗಲೂ ಆ ಲಿಂಗವನ್ನು ಪೂಜಿಸುತ್ತಿರಬೇಕಾಗಿರುವುದರಿಂದ ಲಿಂಗ ಪೂಜೆಯೇ ಇವರಿಗೆ ಯಾವಜ್ಜೀವ ಕರ್ತವ್ಯವಾದ ಮಹಾವ್ರತವಾದ್ದರಿಂದ ಆಪಚಿಕಾಲಗಳಲ್ಲಿಯೂ ಆ ಪ್ರಾಣಲಿಂಗವನ್ನು ಅಂಗದಲ್ಲಿ ಧರಿಸಿರುವುದರಿಂದ ಜಲಾಗಲಿ ಪೂಜಿಸುವುದರಿಂದಲಾಗಲಿ ಯಾವಜ್ಜೀವ ಸ್ಥಿರವಾಗಿ ಲಿಂಗದಲ್ಲಿ ನೆಲೆಗೊಳಿಸಿರುವ ಸಂಸ್ಕಾರವು ಎಂದೂ ನಾಶ ವಾಗಲಾರದೆಂದು ವೀರಶೈವ ಸಿದ್ಧಾಂತವು ಸ್ಪಷ್ಟಪಡಿ ಸಿರುವುದರಿಂದ ಇಷ್ಟಲಿಂಗದಂತೆ ಸ್ಥಾವರಲಿಂಗದಲ್ಲಿ ಆಚಾರ್ಯಕೃತ ಸಂಸ್ಕಾರವು ಸ್ಥಾಯಿಯಾದುದಲ್ಲ ದೀಕ್ಷಾಕಾಲದಲ್ಲಿ ಆಚಾರ್ಯಕೃತ ಸಂಸ್ಕಾರವು ಇಷ್ಟ ಲಿಂಗದಲ್ಲಿ ಸ್ಥಾಯಿಯಾಗಿರುವುದರಿಂದ ಆತ್ಮಶುದ್ಧಯರ್ತ ದೇಹಸಂಬಂಧದಿಂದ ಆದು ಎಂದೂ ನಾಶವಾಗಲಾರದು.

ವ್ಯಾಸರ ಸ್ಮಾರಕ

' ಮಹಾಭಾರತ 'ವನ್ನು ರಚಿಸಿದವರು ವ್ಯಾಸಮಹಾಕವಿಗಳು. ಅವರ ನೆನಪಾಗಿರಲೆಂದು ೧೫೦ ಅಡಿಗಳ ಒಂದು ಸ್ಮಾರಕವನ್ನು ಕಾಶಿಪುರಿಕ್ಕೆ ೫೦ ಮೈಲಿ ದೂರ ದಲ್ಲಿ ಸ್ಥಾಪಿಸಲಾಗಿದ್ದು ಅದರ ಕಂಬಸ್ಥಾಪನೆಯನ್ನು ಗೌರ್ನರ್ ಶ್ರೀ ಕೆ. ಎಂ. ಮುನ್ಷಿಯವರು ನೆರವೇರಿ ಸಿದರು.

ಶಿವಪ್ರಸನ್ನ ಸ್ತವನಂ

ಲೇ — ವೇದಮೂರ್ತಿ ಪ್ರಸಭ, ಬಿರ್ಜಾಪುರ

ಶಿವಶಿವಾರ್ಧವಯವ ಕರುಣಾ ।
ದ್ರವ ಸರಸಗಂಗೋತ್ಪತ್ತಾಂಗನೆ ।
ಭವಭಯಹಾರಿಣಿ ವಿಭವವರದಾಭಯ ಮಹಾದೇವ ॥
ಶಿವಭಿಷರುದ್ರಾಕ್ಷಧರ ಹರ ।
ಸುವಿಮಲಸಚ್ಚಂದ್ರಶೇಖರ ।
ಜುವನರಜಿನಾಸ್ಥಿತವಿನಾಶಕಜಯಶರಣ್ಯಜಯ ॥೧॥

ತ್ರ್ಯಂಬಕ ! ತ್ರಿಪುರಿಂತಕ ! ಶಿವಾ- ।
ರಂಭ ! ಯೋಗಾಚಾರ್ ! ದಂಭಾ- ।
ದಂಭ ! ಗುರುತರ ! ಸ್ಯಾಂಭು ! ವಿಶ್ವಾವಾಸ ! ವಿಶ್ವೇಶ ॥
ಸಾಂಬ ! ತುತ್ಯ ! ಸದಾಶಿವ ! ಮಹಾ- ।
ದಂಭ ತಪನಾಧ್ಯಕ್ಷ ವಿಜಯ ಪ- ।
ದಾಂಬುಜದ್ವಯ ಸರಸಿಜಾಕ್ಷನಮಿತೇಶ ನಮಾಮಿ ॥೨॥

ಭೋ ! ಶಿವಾತ್ಮಕ ! ಶಾಂತ ! ಸರ್ವ- ।
ಜ್ಞೇಶ ! ಜಗದಾನಂದಕಂದ ಮ ।
ಹೇಶ ! ವಿಶ್ವಾರಿಂದ್ಯ ! ವಿಶ್ವಾಧಾರ ! ಸಾರಾರ ॥
ಆಖಿಪೇಶಾರೂಪ ! ನಾನಾ ।
ವೇಷಧರ ! ವಿಧಿವಿಷ್ಣುಪೂಜಿತ ।
ಶೇಷಭೂಷಣ ! ವೃಷವಾಹ ! ನಮಾಮಿಭೂಲಾಲ್ಯ ॥೩॥

ಮಂಗಳಾನಂದಾಮಿತಂ ।
ಸಂಗಮಯ ಪ್ರಕೃತಿತ್ರೀನಿಂತಾಮಯ ।
ಭಂಗಮವನಪ್ರಳಯಜೀಲನ ! ರುದ್ರ ! ನಿದರಾ ॥
ಜುಂಗಾರ್ಭಳಿತ್ಪಾವನೆ ಸಲಿ ವಾ- ।
ಮಾಂಗ ಗೌರೀವರನೆ ! ಪರಮೋ- ।
ತ್ತುಂಗಶಿವಾಂಘಾಶ್ರಿತಗಂಗಾಶ್ರಯನಿಮಂಗಳವು ॥೪॥

ಭೋ ! ತನುಗಾಯಿ ! ಧೀಶ್ವರೇಶ್ವರ ।
ಜೂತಪಾಧಿನೆ ! ಜ್ಯೋತಿರೂಪನೆ ।
ಶ್ರೀತರುಮಳಿಪ್ರಿಯನೆ ಲಕ್ಷ್ಯೀರಮಣವಿಭೋ ॥
ಕಾತರದಿ ನಾನಿನ್ನ ನಾನುವ ।
ನೀತಪ್ಪುವಿನೀಳಿಸವರತವು ನಂ- ।
ಸೈತಸಾರಾಂಶುಧರ ! ಪರಮೇಶಾನ್ ! ಪಂಚಮುಖಾಂಶ ॥೫॥

ಪಾವನತೀಕಾಂತ ! ಪರಮೇಶ್ವರ ।
ಸರ್ವಲೋಕಾನ್ಮಾಪ್ತಶಂಕರ ।
ಸಾರ್ವಭೌಮ ! ಜಗದ್ಗುರು ರೂಪೇಂದ್ರೇಂದ್ರಶಾಸನಭೋ ।
ಸರ್ವವಿದ್ಯಾನಿಧಿ ಕಲಾನಿಧಿ ।
ಸರ್ವಕಾಲಕಲಾಗುಣಾಕ್ಷರ ।
ಶರ್ವ ಧರ್ಮಾರ್ಯವೃಯತ್ಯಕೃತಭೀಷ್ಮವಿನೋ ॥೬॥

(ಸಕೀಪ)

ಸುಪ್ರಸಿದ್ಧ ಗುರುಪೀಠಾಭಿಮಾನಿಗಳ ನಿಧನ

ಒಳ್ಳಾರಿ ಡಿ। ಹೊಸಪೇಟೆ ಪುರವಾಶಿಗಳಾದ ಕವಕೇರಿ ಮುರದ ಶ್ರೀಮಾನ್ ವಸ್ತ್ರದ ಸಾಂಬ್ರಯ್ಯನವರು ತಾ॥ ೨೨-೨೩ನೇ ಸೋಮವಾರ ದಿವಸ ಕೈಲಾಸ ವಾಸಿಗಳಾದರೆಂಬ ವಿಷಯವನ್ನು ತಿಳಿಸಲು ಅತ್ಯಂತ ವಿಷಾದವಿಸುತ್ತಿದೆ ಅಂತ್ಯಸಮಯದಲ್ಲಿ ಇವರಿಗೆ ೭೫ ವರ್ಷ ವಯಸ್ಸಾಗಿತ್ತು ಇವರು ಈ ಪ್ರಾಂತ್ಯದಲ್ಲಿ ಬಹಳ ಪ್ರಮುಖರಿದ್ದು ಒಳ್ಳೇ ಮೇಷಾವಿಗಳೂ, ಧೈರ್ಯ ಶಾಲಿಗಳೂ, ಮತಾಭಿಮಾನಿಗಳೂ, ಗುರುಸೇವಾನಿರತರೂ ಆಗಿದ್ದರು ಇವರ ನಿಧನದ ವಾರ್ತೆಯನ್ನು ಕೇಳಿ ಬಹು ಜನರು ಕೋಡಿಕಾಗಾರದಲ್ಲಿ ಮುಳುಗಿದರು ಇವರ ಕೈಲಾಸಯಾತ್ರೆಗೆ ಅಸಂಖ್ಯ ಜನಸ್ತೋಮವು ಕಡಿದಿ ದ್ದೊಡ್ಡ ಜಾತ್ರೆಯಂತೆ ಪರಿಣಮಿಸಿತು. ಇವರ ವಂಶ ಗುರುಗಳಾದ ಕಜಿಗಿ ಶ್ರೀ ಮಲ್ಲಿಕಾರ್ಜುನ ಪಟ್ಟೆದ ಸ್ವಾಮಿಗಳು, ಬನಾಪುರದ ಶ್ರೀ ಪಟ್ಟದಸ್ವಾಮಿಗಳು ಇನ್ನು ಮುಂತಾದ ಗುರುಗಳು ಆಗಮಿಸಿದ್ದರು ಗುರು ಗಳ ಅಧ್ಯಕ್ಷತೆಯಲ್ಲಿ ಅಂತ್ಯಸಂಸ್ಕಾರವು ನೆರವೇರಿತು. ಇವರ ಪುತ್ರ ಶ್ರೀ ವಸ್ತ್ರದ ಕೊಟ್ರಯ್ಯನವರು ವಿಶೇಷ ವಾಗಿ ದಾನಧರ್ಮಗಳನ್ನು ಮಾಡಿದರು. ಶ್ರೀ ಜಗದೀ ಶ್ವರರು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುವ '

ಒಳ ಮುಖಾಂ.

ವರ್ತಮಾನಸಂಗ್ರಹ

ಶ್ರೀ ವಿ. ವಿ. ಪಾಟೀಲರ ಉಪವಾಸ ಮುಕ್ತಾಯ

ಹುಬ್ಬಳ್ಳಿಯಲ್ಲಿ ೧೩-೧೪ ದಿನಗಳಿಂದ ಉಪವಾಸ ನಡೆಸುತ್ತಿದ್ದ ಶ್ರೀ ವಿ. ವಿ ಪಾಟೀಲರು ಉಪವಾಸ ವನ್ನು ಕೊನೆಗಾಣಿಸಿದರು ಜೊಂಬಾಯಿ ಅಸೆಂಬ್ಲಿ ಸದಸ್ಯತ್ವಕ್ಕೆ ಅವರು ರಾಜೀನಾಮೆಕೊಟ್ಟಿದ್ದಾರೆ ಕೇವಲ ಅತ್ಮ ಪರಿಶೋಧನೆಗಾಗಿ ತಾವು ಈ ಉಪವಾಸವನ್ನು ಕೈಕೊಂಡುದಾಗಿ ಅವರು ತಿಳಿಸಿದರು. ಕರ್ನಾಟಕ ಪ್ರಾಂತ್ಯ ನಿರ್ಮಾಣಕ್ಕೆ ಪೂರ್ಣಕಾಲವನ್ನು ವಿನಿಯೋಗಿ ಸಲು ಅವಕಾಶವಾಡಿಕೊಳ್ಳುವದೇ ತಮ್ಮ ರಾಜೀ ನಾಮೆಗೆ ಕಾರಣವೆಂದು ಅವರು ಹೇಳಿದರು

ಮಂತ್ರಿಗಳ ರಾಜೀನಾಮೆ

ಹೈದರಾಬಾದಿನ ಮಂತ್ರಿಮಂಡಲದಲ್ಲಿ ಭಿನ್ನಾಭಿಪ್ರಾಯ ಉಂಟಾಗಿತ್ತಂತೆ ಅದ್ದರಿಂದ ಎಲ್ಲ ಮಂತ್ರಿಗಳೂ ರಾಜೀ ನಾಮೆಯನ್ನ ಸಲ್ಲಿಸಿದ್ದಾರೆ

ಮಂತ್ರಿಮಂಡಲವನ್ನು ಪುನರ್ರಚಿಸಬೇಕು, ಎಂಬ ಉದ್ದೇಶದಿಂದ ಎಲ್ಲ ಸಚಿವರೂ ರಾಜೀನಾಮೆ ಕೊಟ್ಟ ದ್ದಾರೆ

ಕ್ಷಾಮನಿವಾರಣೆಗೆ ೧೫ ಕೋಟಿ ರೂಪಾಯಿ

ಕೇಂದ್ರ ಸರಕಾರವು ರಾಷ್ಟ್ರದ ಕ್ಷಾಮನಿವಾರಣಕ್ಕಾಗಿ ೧೫ ಕೋಟಿ ರೂ ಗಳನ್ನು ತೆಗೆದಿಟ್ಟಿದೆ ಅದರ ಪೈಕಿ ೬ ಕೋಟಿ ರೂ ಗಳನ್ನು ಬೊಂಬಾಯಿಗೆ ಕೊಡಲಾಗು ವುದೆಂದು ತಿಳಿದುಬಂದಿದೆ

ಒಂದು ಮಣ ಅಕ್ಕಿಗೆ ಒಂದು ಮಣ ಗೊಬ್ಬರ

ರೈತರು ಎಕರೆ ಒಂದಕ್ಕೆ ಒಂದು ಮಣ ಅಕ್ಕಿಯನ್ನು ಸರಕಾರಕ್ಕೆ ಕೊಟ್ಟರೆ ಒಂದು ಮಣ ಸೀಮೆಗೊಬ್ಬರವನ್ನು ಕೊಡಬಹುದೆಂದು ಕೇಂದ್ರದ ವ್ಯವಸಾಯ ಸಚಿವರು ಆಹಾರ ಮಂತ್ರಿಗಳ ಸಭೆಯಲ್ಲಿ ತಿಳಿಸಿದರು.

ಸಕ್ಕರೆ ಕಾರ್ಖಾನೆಯನ್ನು ನಿಲ್ಲಿಸಬೇಕಾಗುವುದು

ಕೃಷ್ಣರಾಜಸಾಗರದಲ್ಲಿ ನೀರಿನ ಮಟ್ಟವು ಕಡಮೆ ಯಾಗಿರುವುದರಿಂದ ಅಲ್ಲಿನ ವಿದ್ಯುತ್ ಶಕ್ತಿಯನ್ನು ಸರಬರಾಜಾಗುತ್ತಿಲ್ಲ ಅಲ್ಲಿನ ಬೆಳೆ ಚೆನ್ನಾಗಿ ಆಗಿದ್ದರೆ ಮಂಡ್ಯದ ಸಕ್ಕರೆ ಕಾರ್ಖಾನೆಯನ್ನು ೧೮ ತಿಂಗಳ ಕಾಲ ನಿಲ್ಲಿಸಬೇಕಾಗಬಹುದು, ಎಂದು ಆ ಕಾರ್ಖಾನೆಯ ಮುಖ್ಯಾಧಿಕಾರಿಗಳು ತಿಳಿಸಿದ್ದಾರೆ

ಇರಾನಿನಲ್ಲಿ ಭೂಕಂಪ

ಕೇಂದ್ರ ಇರಾನಿನಲ್ಲಿ ಕಳೆದ ೧೩ನೇ ಶಾ॥ ದಿನ ಉಂಟಾದ ಭೂಕಂಪದಿಂದ ೧,೫೦೦ ಮಂದಿ ಸುಡಿದ ರೆಂದು ವರದಿಯಾಗಿದೆ ಭೂಮಿ ಬಿರಿದಾಗ ಇಡೀ ಹಳ್ಳಿ ಯೇ ಅದರಲ್ಲಿ ಕುಸಿದುಬಿದ್ದಿತೆಂದೂ ಹಳ್ಳಿಯ ಸುಮಾರು ೨ ಸಹಸ್ರಮಂದಿ ಪೈಕಿ ಕೇವಲ ೫೦ ಮಂದಿ ಮಾತ್ರ ಉಳಿದರೆಂದೂ ವರದಿಯಾಗಿದೆ.

ಪರೀಕ್ಷೆಗಳು ಮುಂದಕ್ಕೆ ಹೋದುವು

ವಿಶ್ವವಿದ್ಯಾಲಯದ ಪರೀಕ್ಷೆಗಳು ಮಾರ್ಚ್ ೨ನೆಯ ತಾರೀಖು ಪ್ರಾರಂಭವಾಗಬೇಕಾಗಿತ್ತು. ಆ ಪರೀಕ್ಷೆಗಳು (ಇಂಟರ್‌ಮೀಡಿಯೆಟ್, ಬಿ.ಎ., ಬಿ.ಎಸ್‌ಸಿ ಮೊದಲಾದುವು) ಏಪ್ರಿಲ್ ೨ನೆಯ ತಾರೀಕಿನಿಂದ ಪ್ರಾರಂಭವಾಗುವುವು, ಎಂದು ಗೊತ್ತಾಗಿದೆ.

ಹತ್ತರಲ್ಲೊಂದು ಭಾಗ ಭೂಮಿ ಮುಳುಗಿದೆ

ಪಶ್ಚಿಮ ಯೂರೋಪಿನಲ್ಲಿ ಪ್ರವಾಹದ ಆಣಕುಕ ಪಡೆಯುತ್ತಿದೆ ಆ ಖಂಡದಲ್ಲಿ ಹಾಲೆಂಡ್‌ದೇಶ ತುಂಬ ನಷ್ಟಕ್ಕೊಳಗಾಗಿದೆ ಆ ದೇಶದ ಅಷ್ಟಂಕ ಫಲವತ್ತಾದ ಭೂಮಿಯ ಪೈಕಿ ಹತ್ತರಲ್ಲೊಂದು ಭಾಗ ನೀರಿನಲ್ಲಿ ಮುಳುಗಿದೆ, ಎಂದು ತಿಳಿದುಬಂದಿದೆ.

ಮುಳುಗಿರುವ ಜಮೀನಿನ ವಿಸ್ತೀರ್ಣ ಸುಮಾರು ನಾಲ್ಕೂವರೆ ಲಕ್ಷ ಎಕರೆಗಳು.

ಬಂದಿಗಳಿಗೆ ಅಕ್ಷರಾಭ್ಯಾಸ

ಹೈದರಾಬಾದು ಸರಕಾರ ಜೈಲಿನಲ್ಲಿ ಅಕ್ಷರ ಪ್ರಜಾ ತರಗತಿಗಳನ್ನು ತೆರೆದಿದೆ ಬಂದಿಗಳು ತರಗತಿಗಳಿಗೆ ಬಂದು ಅಕ್ಷರ ಕಲಿತು ಪರೀಕ್ಷೆಯಲ್ಲಿ ತೇರ್ಗಡೆಯಾದರೆ ಅವರ ಶಿಕ್ಷೆಯ ಅವಧಿಯಲ್ಲಿ ೩೦ ದಿನಗಳನ್ನು ಕಡಮೆ ಮಾಡಬೇಕೆಂದು ಸರಕಾರ ಆಜ್ಞೆಮಾಡಿದೆ ಈ ರೀತಿ ಯಿಂದ ಎಲ್ಲ ವರ್ಗಗಳ ಬಂದಿಗಳಿಗೂ ಅನ್ವಯಿಸುತ್ತದೆ ತರಗತಿಗಳಿಗೆ ತಪ್ಪದೆ ಒಂದೂ ತೇರ್ಗಡೆಯಾಗದಿದ್ದರೆ ಅಂಧವಂಗಗಳ ಒಂದು ಪ್ರವಾಹದಲ್ಲಿ ಶಿಕ್ಷೆಯ ಅವಧಿ ಯನ್ನು ಕಡಮೆ ಮಾಡಲಾಗುತ್ತದೆ

ಉಸ್ಮಾನಿಯಾ ಅಕ್ಷರಶ್ರೇಯಿಲ್ಲಿ ರಕ್ತದ ಬ್ಯಾಂಕು ಇದೆ. ರಕ್ತದ ಬ್ಯಾಂಕು ಎಂದರೆ ಸಾಕಷ್ಟು ರಕ್ತವಿಲ್ಲದ ರೋಗಿ ಗಳಿಗೆ ರಕ್ತವನ್ನು ಒದಗಿಸಲು ವಿರ್ಪಡಿಸಿರುವ ರಕ್ತದ ಖಜಾನೆ ಆರೋಗ್ಯವಾಗಿರುವವರು ಆ ಖಜಾನೆಗೆ ರಕ್ತ ವನ್ನು ದಾನವಾಗಿ ನೀಡಬಹುದು ಹಾಗೆ ರಕ್ತವನ್ನು ದಿನವೂಡುವ ಕೈದಿಗಳಿಗೂ ಶಿಕ್ಷೆಯ ಅವಧಿಯಲ್ಲಿ ೧೫ ದಿನ ಕಡಮೆ ಮಾಡಲಾಗುವುದು ಅಥವಾ ಆ ಕೈದಿಗೆ ೧೦ ರೂಪಾಯಿ ಬಹುಮಾನ ನೀಡಲಾಗುವುದು

ಚೀನಾದ ಮೇಲೆ ನೌಕಾ ನಿರ್ಬಂಧ

ಕಮ್ಯೂನಿಸ್ಟ್ ಚೀನಾದ ಮೇಲೆ ನೌಕಾ ನಿರ್ಬಂಧ ವನ್ನು ಹಾಕಬೇಕೆಂದು ಅಮೆರಿಕ ಆಲೋಚಿಸುತ್ತಿದೆ, ಎಂದು ಗೊತ್ತಾಗಿದೆ ಇಲ್ಲದೆ ಅಮೆರಿಕ ರಾಷ್ಟ್ರೀಯ ಚೀನಾಕ್ಕೆ ನೌಕಾ ಸಹಾಯವನ್ನು ಒದಗಿಸುವ ವಿಷಯ ವನ್ನೂ ಆಲೋಚಿಸುತ್ತಿದೆಯಂತೆ! ಹಾಗಾದರೆ ರಾಷ್ಟ್ರೀಯ ಚೀನಾಕ್ಕೂ ಕಮ್ಯೂನಿಸ್ ಚೀನಾಕ್ಕೂ ಪ್ರಬಲವಾದ ಯುದ್ಧ ನಡೆಯುವ ಸಂಭವ ಇದೆ, ಎಂದು ಹೇಳಲಾಗಿದೆ ರಾಷ್ಟ್ರೀಯ ಚೀನಾ ತನಿರಿಕ ಸಹಾಯ ವೆನ್ನು ಅಪೇಕ್ಷಿಸುತ್ತಿದೆಯಂತೆ! ಬ್ರಿಟನ್ ಅಮೆರಿಕದ ವಿದೇಶಾಂಗ ನೀತಿಯನ್ನು ಒಪ್ಪಿದೆ ಆದರೆ ಅದು ಅಲೋಚಿಸುತ್ತಿರುವ ನೌಕಾ ನಿರ್ಬಂಧ ಕಾರ್ಯವನ್ನು ಬ್ರಿಟನ್ ವಿರೋಧಿಸಿದೆಯಂತೆ!

ರಾಜಧಾನಿಯಲ್ಲಿ ಅಮಿತಾನಂದ ಸಂಭ್ರಮ

ಶ್ರೀಮನ್ಮಹಾಭಾರವರಿಗೆ ಪಟ್ಟಕ್ಕೇತ್ಸವವಾಯಿತೆಂಬ ಸುದ್ದಿ ವೀಣಾದ್ಯಂತ ಪ್ರಜೆಗಳಿಗೆ ಅಮಿತಾನಂದವನ್ನುಂಟು ಮಾಡಿದೆ ಈ ಶುಭಸೂಚನಾರ್ಥವಾಗಿ ಅವನ ಅರಮನೆಯ ಬೀದಿಯಂದ ೨೧ ಕುಣಿಲ ತೋಪು ಗಳನ್ನು ಹಾರಿಸಲಾಯಿತು

ಅರಮನೆ ದರ್ಬಾರ್ ಭಕ್ಷಿಯವರೂ, ಅನೇಕ ಸರ್ದಾರಿ ಉನ್ನತ ಹುದ್ದೆಗಾರಿಗಳೂ ನೆರೆದ ಪ್ರಮುಖರೂ, ಅರಸು ಮನೆತನದವರೂ ಅರಮನೆಗೆ ಬಂದು ಜಪಾನಿದ ರಾಜಕುಮಾರರಿಗೆ ರಾಜೋಚಿತ ಗೌರವಗಳನ್ನರ್ಪಿ ಸಿದರು

ದೇವಾಲಯಗಳಲ್ಲೂ, ಮಠಗಳಲ್ಲೂ ವಿಶೇಷ ಪೂಜೆ ಉತ್ಸವಗಳು ನಡೆದವು. ಜಾಮುಂಡಿ ಬೆಟ್ಟದಲ್ಲಿ "ಸಂಚಮಾಭಿಷೇ" ವಿಶೇಷೋತ್ಸವ ನಡೆಯಲಿದೆ.

ಪುಷ್ಕೋತ್ಸವದ ಶುಭಸೂಚನಾರ್ಥ ಅಂದು ರಾತ್ರಿ ಅರಮನೆ, ಜಾಮುಂಡಿ ಬೆಟ್ಟ, ಕೆ. ಆರ್. ಸಾಗರಗಳಲ್ಲಿ ವಿಶೇಷ ದೀಪೋತ್ಸವ ನಡೆಯಿತು.

೨೭೨ ಹಳ್ಳಿಗಳಲ್ಲಿ ಆಹಾರದ ಅಭಾವ

ಹೈದರಾಬಾದ್ ಸಂಸ್ಥಾನದ ಔರಂಗಾಬಾದ್ ಜಿಲ್ಲೆಯ ೨೭೨ ಹಳ್ಳಿಗಳಲ್ಲಿ ಆಹಾರದ ಅಭಾವ ಉಂಟಾ ಗಿದೆ ಜನರಿಗೆ ಪರಿಹಾರ ಕಾಂಗಾರಿಗಳನ್ನು ಕಲ್ಪಿಸ ಲಾಗಿದೆ.

ಹಾಸನ-ಮಂಗಳೂರು ರೈಲ್ವೆ

ಹಾಸನದಿಂದ ಮಂಗಳೂರಿಗೆ ರೈಲು ಹಾಕುವ ಕೆಲಸ ವನ್ನು ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗಿದೆ, ಎಂದು ಗೊತ್ತಾಗಿದೆ. ಇನ್ನು ಕೆಲವು ವರುಷಗಳಲ್ಲಿಯೇ ಆ ಕಾರ್ಯ ಪೂರೈಸುವುದೆಂದು ತಿಳಿದುಬಂದಿದೆ.

ಪ್ರಪಂಚದ ವೈದ್ಯ ಪ್ರವೀಣರು

ಪ್ರಪಂಚದ ವೈದ್ಯ ಪ್ರವೀಣರು ಎರಡು ತಿಂಗಳ ಕಾಲ ಭಾರತದಲ್ಲಿ ಪ್ರವಾಸಮಾಡಲು ಬಂದಿದ್ದಾರೆ. ಅವರು ಕಳೆದ ವಾರ ಬೊಂಬಾಯಿಗೆ ಬಂದರು

ತುರ್ಕಿಭಾಷೆಯಲ್ಲಿ ಭಗವದ್ಗೀತೆ

ತುರ್ಕಿಯ ವಿದ್ವಾಂಸರಾದ ಶ್ರೀ ಕೆಮೂಲ್ ಕಾಡ್ಡಾಸ್ ರವರು 'ಭಗವದ್ಗೀತೆ'ಯನ್ನು ತುರ್ಕಿಭಾಷೆಗೆ ಭಾಷಾಂ ತರ ಮಾಡಿದ್ದಾರೆ, ಎಂದು ಗೊತ್ತಾಗಿದೆ

ಶ್ರೀಜಗದ್ಗುರು ಪಂಚಾಚಾರ್ಯರ ಜಯಂತಿಸಮಾರಂಭ, ಕನಕಗಿರಿ

ಇದೇ ನಂದನನಾಮಸಂವತ್ಸರ ಮಾಘೆ ಬಹುಳ ೧೪ ಗುರುವಾರದಿನ ರಾಯಚೂರು ಜಿಲ್ಲೆಗೆ ತೇರಿದ ಕನಕ ಗಿರಿ ಬೃಹತ್ಕಟದಲ್ಲಿ ಪ್ರತಿವರುಷ ಪದ್ಧತಿಯಂತೆ ಶ್ರೀ ಜಗ ದ್ಗುರು ಪಂಡಿತಾರಾಧ್ಯ, ವಿಶ್ವಾರಾಧ್ಯ ಮೂರ್ತಿಗಳಿಗೆ ಶ್ರೀ॥ ಷ॥ ಬ್ರ॥ ಪಂಚಾಕ್ಷರಿಶಿವಾಚಾರ್ಯರು ಹಿರೇಮಠ ಕನಕಗಿರಿ ಇವರ ನೇತೃತ್ವದಲ್ಲಿ ಶ್ರೀ ರುದ್ರಾಭಿಷೇಕವೂ, ಸಹಸ್ರಬಿಲ್ವಾರ್ಚನೆಯೂ ಮಹಾಮಂಗಲಪೂರ್ವಕ ಅತ್ಯಂತ ವಿಜೃಂಭಣೆಯಿಂದ ಆಚರಿಸಲ್ಪಟ್ಟ ನಂತರ ಶ್ರೀ ಜಗದ್ಗುರುಚಾರ್ಯರ ಜಯಘೋಷಪೂರ್ವಕ ಅಂದಿನ ಕಾರ್ಯವು ಸಮಾಪ್ತಿಗೊಳಿಸಲ್ಪಟ್ಟಿತು

ಒರ್ವ ದರ್ಶನಭಾಗಿ.

ಸ್ವೀಕಾರ

ಒಳ್ಳಾರಿ ಡಿ॥ ಹೊಸಪೇಟೆ ರಥಬೀದಿನಿವಾಸಿಗಳಾದ ಶ್ರೀ ವೆಕ್ಕಿದ ಸಾಂಬಯ್ಯನವರು ತಿನಾಧೀನರಾದ ಸಮಯ ದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ **25** ರೂ. ಗಳು ಶ್ರೀ ವೈಯೂರು ವೈದ್ಯಲಿಂಡಿತ ಸಿದ್ದಯ್ಯನವರ ದ್ವಾರಾ ಕಲ್ಪಿರುತ್ತವೆ.

ಧಾರವಾಡ ಡಿ॥ ಗರಗ ಗ್ರಾಮವಾಸಿಗಳಾದ ಶ್ರೀ ವೀರಪ್ಪ ವೀರಭದ್ರಪ್ಪ ಬಳೆಗಾರ ಇವರು ತಮ್ಮ ಗೃಹ ದಲ್ಲಿ ಪುತ್ರವಧು ೪ ದಿವಸ ಶ್ರೀ ಜಗದ್ಗುರು ಸಿದ್ಧಲಿಂಗ ತಿವಾಚಾರ್ಯರ ಪುಣ್ಯತಿಥಿಯನ್ನು ಮಾಘೆ ಬ॥ ೧೪ ಗುರುವಾರ ಶ್ರೀ ಜಗದ್ಗುರು ಪಂಡಿತಾರಾಧ್ಯ ವಿಶ್ವಾ ರಾಧ್ಯರ ಜಯಂತಿಮಹೋತ್ಸವವನ್ನು ವೇದಮೂರ್ತಿ ಚನ್ನಮಲ್ಲಯ್ಯಸ್ವಾಮಿಗಳವರಿಂದ ವೇದೋಕ್ತವಾಗಿ ವಿಧಿ ಯಿಸಿದ ಸಂದರ್ಭದಲ್ಲಿ ಪ್ರಭಾಪೋಷಣೆಗೆ **6** ರೂ. ಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ

ತಿನರ್ಗಾ ಡಿ॥ ಜಗಮೊದಿ ಗ್ರಾಮವಾಸಿಗಳಿಂದ ಶ್ರೀ ಕೆ ವಿ ರುದ್ರರಾಜಗೌಡರು ತಮ್ಮ ಸುಪುತ್ರಿಯ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೆ **1** ರೂ. ಸಮರ್ಪಿಸಿ ಕಳಿಸಿದ್ದಾರೆ.

ಈ ಮೇಲ್ಕಂಡ ಮಹಾಕಾರ್ಯಗಳೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬ ಜಂಗಮ ನಿಶ್ಚಯಂತಹಿತಾಸಾಗ್ರಂಥವು ಪ್ರಾಣಪ್ರತಿಷ್ಠಿರುವುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ಮರೀಚಿಗುರು ಶಾಂಭಾರು ಜಗದ್ವಿಖ್ಯಾತವಾದ ಆಗಸ್ತ್ಯಮಹರ್ಷಿಗಳಿಗೆ ನಿರಂತರೈವಿದ್ಯಾಂತವನ್ನು ಉಪದೇಶಸಾರಾಂಶ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳೆಲ್ಲವ್ಲ ಇದೇ ಇಹು ಪುರಾತನಗ್ರಂಥವೆಂಬಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು **೨೨೫೦ನೇ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರಿಂದ ಆಚಾರ್ಯರಿಂದ ರಚಿಸಲ್ಪಟ್ಟಿರುವುದು ಈ ಮಹಾಗ್ರಂಥವು ವೀರಶೈವವಿಶ್ವಕ್ಕೆ ಹೊಸಬೆಳಕನ್ನು ಬೀರಿರುವುದೆಂದು ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಅವರಲ್ಲಿ ಒಂದು ವ್ಯಾಖ್ಯಾನವಷ್ಟೆಯಾದರೂ ಗೂಢಾರ್ಥಗರ್ಭಿತವಾದ ಪ್ರೌಢಶೈಲಿಗಳಿಂದ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವ ಕುಲಜರಿಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಹಿಂದೆಯೇ ಪ್ರಕಟಿಸಬೇಕೆಂದು ಪ್ರಯತ್ನಪಟ್ಟರಾದರೂ ಸಾಮಾನ್ಯವಾದ ಕಾರಣಗಳಿಂದ ಮುಂದೂಡಲ್ಪಟ್ಟಿದ್ದು ಈಗ ಅದು ಸಾಧ್ಯವಾಗಿರುವುದು ಸಾರಕರ ಅನುಕೂಲ್ಯಕ್ಕಾಗಿ ಒಂದು ಶ್ರಮಮಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ ಪ್ರೌಢೋಪಾಧ್ಯಾಯರಿಂದ ಬರೆಯಲ್ಪಟ್ಟಿರುವ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ ಈ ಗ್ರಂಥವು ಒಟ್ಟು ೭೩೩ ಪುಟಗಳಿಂದ ಕೂಡಿದ್ದು ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುಸೋಮಾಚಾರ್ಯರ ಲೀಲಾತ್ಮಕವಾದ ಹಾಗೂ ಅತಿರಮಣೀಯವಾಗಿರುವ ಜೋಡಿಸಲ್ಪಟ್ಟಿರುವ ಪದ್ಯ ಗದ್ಯರೂಪವಾದ ಪ್ರೌಢಸೌಂದರ್ಯವು ವರ್ಣಾತೀತವಾಗಿದೆ ಕೈಪಿಲ್ಯಕ್ಕೆ ಪ್ರಯಾಣಿಸುವವರಿಗೆ ಈ ಗ್ರಂಥವು ಅತ್ಯುಪಯುಕ್ತವಾಗಿರುವ ಈ ಅಮೂಲ್ಯಗ್ರಂಥವನ್ನು ವೀರಶೈವಲೆಲ್ಲರೂ ಅವಶ್ಯವಾಗಿ ಓದಬೇಕ

ಬೆಲೆ ೩ ರೂಪಾಯಿ

ಮನೋಹರವಾದ ಫೋಟೋಗಳು.

ಶ್ರೀರೇಣುಕಾಚಾರ್ಯರ ಲಿಂಗವಹಿರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು)ಸೈಜು ೧೪ × ೧೦ ಬೆಲೆ ೦—೬—೦

ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮುಹಸ್ಥಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ೦—೩—೦

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧೪ .. ೦—೪—೦

" " " ಚಿಕ್ಕ ಸೈಜು ಬೆಲೆ ೦—೧—೬

ಶ್ರೀ ಜಗದ್ಗುರು ರುದ್ರಮುಖೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ .. ೦—೧—೬

ಶ್ರೀ ರೇಣುಕಾಚಾರ್ಯರು ರುದ್ರಮುಖೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೧—೬

ಶ್ರೀರೇಣುಕಾಚಾರ್ಯರು ಶ್ರೀಕಂಠಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ ೦—೧—೬

ಶ್ರೀರೇಣುಕಾಚಾರ್ಯರು ವಿಘ್ನೇಶ್ವರನ ಪ್ರಾರ್ಥನೆಯಂತೆ ೫ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ ೦—೧—೬

ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ (ನಾನಾವಿಧಬಣ್ಣದ್ದು) ೦—೪—೦

ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ ೦—೧—೬

ಸದ್ಯಃ ಪೀಠಾರೋಹಣನಾಮಾಡಿರುವ ಶ್ರೀಕಾಶೀಜಗದ್ಗುರು ವಿಶ್ವೇಶ್ವರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ ೦—೪—೦

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗೇಶ್ವರಾಚಾರ್ಯರ ಫೋಟೋ ೦—೧—೬

ಶ್ರೀಮದ್ರಂಭಾಪುರೀ ಸೀಹಾಧೀಶ್ವರ ಜಗದ್ಗುರು ಶ್ರೀ ಸಂಪಿಗೆ ಕಾಡಿನ ಮಹಾಸ್ವಾಮಿಗಳವರ ಫೋಟೋ ೦—೧—೬

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಉಳಿಸುಕೊಂಡಿರುವ ಫೋಟೋ ೦—೧—೬

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕ ಸೈಜು ೧೪ .. ೦—೨—೦

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡ ಸೈಜು ೧೪ .. ೦—೪—೦

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾಸ್ವಾಮಿಗಳವರ ಅಕ್ಕಂತ ಸುಂದರವಾದ ಫೋಟೋ ೧೪ .. ೦—೧—೬

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅಕ್ಕಂತ ವ್ಯಾಘ್ರಚರ್ಮ ಕಟ್ಟಿದ ಸುಂದರ ಫೋಟೋ ೧೪ .. ೦—೧—೬

ಶ್ರೀ ಜಗದ್ಗುರು ಕೇದಾರೇಶಿಂಹಾಸನದ ಅಕ್ಕಂತ ಸುಂದರವಾದ ಗೋಪುರದ ಫೋಟೋ ೦—೧—೬

ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ ೦—೧—೬

ಶ್ರೀಜಗದ್ಗುರುರಂಭಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು ೦—೩—೦

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಸಟಿ (೩ನೆಯ ಆವೃತ್ತಿ)	....	..	೧ ಆಣೆ
ಸತ್ಯಾಸತ್ಯಮವಿವೇಕ (೩ನೆಯ ಆವೃತ್ತಿ ಸಂಸ್ಕೃತ)	..	..	೧ ಆಣೆ
ಹಂಚವಿಂಶತಿ ಪ್ರಶ್ನ ಪ್ರಕಾಶ (೫ನೆಯ ಆವೃತ್ತಿ)	..	..	೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನ	...	..	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ)	..	..	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	..	..	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	...	..	೨ ಆಣೆ
ಶಿವಶಕ್ತಿವಿಲಾಸ	...	..	೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ			೨ ಆಣೆ
ಬಿಲ್ವಮಾಹಾತ್ಮ್ಯ (೩ನೆಯ ಆವೃತ್ತಿ)	....	..	೨ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೧೦ನೆಯ ಆವೃತ್ತಿ)			೩ ಆಣೆ
ಆಷವಾದಿನಿಜತತ್ವದರ್ಪಣ (೫ನೆಯ ಆವೃತ್ತಿ)			೩ ಆಣೆ
ಪಂಚಾಚಾರ್ಯಪ್ರಕಾಶ	....	..	೩ ಆಣೆ
ಪಂಚಾಚಾರ ಪ್ರಕಾಶಿಕಾ	.	..	೩ ಆಣೆ
ಶ್ರೀಗುರುತತ್ತ್ವಪದಗಳು (೩ನೆಯ ಆವೃತ್ತಿ)	....	..	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	....	..	೪ ಆಣೆ
ಲಿಂಗಧಾರಣವಿಧಿ	....	..	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	....	..	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	....	..	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	....	..	೪ ಆಣೆ
ವೈದಿಕವಾಙ್ಮಯರಹಸ್ಯ	....	..	೪ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)	....	..	೪ ಆಣೆ
ಕೈವೋಪನಿಷತ್ಸಂಗ್ರಹ (ಸಂಸ್ಕೃತ) (೨ನೆಯ ಆವೃತ್ತಿ)	....	..	೬ ಆಣೆ
ಷಣ್ಮತಾಶ್ರಮವಿಮರ್ಶತತ್ತ್ವನಿರೂಪಣ (೩ನೆಯ ಆವೃತ್ತಿ)	....	..	೬ ಆಣೆ
ವೀರಶೈವಾಂಹ್ನಿಕ-ಪ್ರಾತ್ಸವಿಧಿ	....	..	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	....	..	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	....	..	೮ ಆಣೆ
ವೀರಶೈವಮಹಾತ್ಮರು			೮ ಆಣೆ
ಬಸವಧ್ಯಾಂತದಿವಾಕರ (೩ನೆಯ ಆವೃತ್ತಿ)	..	..	೮ ಆಣೆ
ಅಗಮಪರಿಜ್ಞಾನ			೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)			೮ ಆಣೆ
ಶ್ರೀಜಗದ್ಗುರು ಶಿವಾನಂದವಿಜಯ	..	..	೮ ಆಣೆ
ಶ್ರೀಜಗದ್ಗುರು ವಿಶ್ವಕರ್ಣಾವಿಜಯ ವಕ್ಷಸ್ಥಮಾಲಿಕಾ			೮ ಆಣೆ
ಶಬ್ದ ರತ್ನಾಕರ	...	..	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)			೧೨ ಆಣೆ
ಶಿಷ್ಟಾಸೂತ್ರಸಿದ್ಧಾಂತದರ್ಪಣ			೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ			೧ ರೂ
ಮೌಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)			೧ ರೂ
ವಿವೇಕಮುಕ್ತಾವಳಿ			೧ ರೂ
ವಿಚಾರಸಾರಾವಳಿ	..	..	೧ ರೂ
ವೈದಿಕಶಿವಪೂಜಾವಿಧಿ (ವೈದಿಕ್ಸ್ವರಯುಕ್ತವಾದುದು ೨ನೆಯ ಆವೃತ್ತಿ)			೧॥ ರೂ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	..	..	೧॥ ರೂ
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ)	..	....	೨ ರೂ
ಶಿವಾಗಮಸಂಗ್ರಹ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)			೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರಪ್ಪದಿ)	....	..	೨॥ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	....	..	೩ ರೂ
ವೀರಶೈವವರ್ಷ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುದು)			೩ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೮ ಪುಟ)	....	..	೧೨ ರೂ
A brief life-sketch of Pandit Sri-Kashinatha Shastriji (*English*)			**4 As-**
The Philosophical Aspect of Virasaivism (*English*)			**8 As**
Speeches by Pandit Shri Kashinatha Shastriji (*English*)			**12 As**
ಶಿವಾಚಾರಚಂದ್ರಿಕಾ (ಉರ್ದು)			೩ ಕ
ವೀರಶೈವರತ್ನ (ಮರಾಠಿ)	..	..	೧ ರೂ
ಷಣ್ಮತಾಶ್ರಮವಿಮರ್ಶತತ್ತ್ವನಿರೂಪಣ (ತೆಲುಗು-ಉರ್ದು)			೧ ರೂ
ವೀರಶೈವಧರ್ಮಪ್ರದೀಪಿಕಾ (ಉರ್ದು)	..	..	೨ ಆಣೆ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್, ಪ್ರೆಸ್, ಮೈಸೂರು.

Edited, Printed and Published by Brahanmathadhyaksha Sri Mahadevaiah at Sri Panchacharya Electric Press, Sayaji Rao Road, Mysore

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಗ್ರಣಿ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನವಂಕಜಾತಜನಿತರ್ ಪಂಚಾಸ್ಯವೀರಾಧಿಪರ್ । ಪಂಚಕ್ಲೇಶವಿನಾಶಕರ್ ಪರತಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು—ನಾಗನೂರು ಬೃಹಸ್ಮತಿಶಾಧ್ಯಕ್ಷರಾದ ವೇ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ೩ ರೂ.] ಸಂಪಾದಕರು—ನಾಗನೂರು ಬೃಹಸ್ಪತಿಶಾಧ್ಯಕ್ಷರಾದ ಶ್ರೀ ಮಹಾದೇವಯ್ಯನವರು [ವಿ ಪಿ ಖರ್ಚು ಸೇರಿ ೩ ರೂ ೬ ಆ

ಸಂಪುಟ ೨೬] ಸೋಮವಾರ ತಾ॥ ೨ನೇ ಮಾರ್ಚಿ ೧೯೫೩ [ಸಂಚಿಕೆ ೪೨

ನತ್ರುವ್ಯವಹಾರ

[ಖಾಸ್ಗಿದಾರರು ಅಭಿವ್ಯಾಯ ಪಡುವ ಲೆ ಖಸಗಳಿಗೆ ಪತ್ರಿಕಾಕರ್ತರು ಒವಖಾದ್ದಾರರಲ್ಲ ಎಂಬ ವಿಷಯವನ್ನು ಸವರ್ ಡೂ ಲಕ್ಷ್ಮದಲ್ಲಿಡತಕ್ಕದ್ದು —ಸಂ]

ಪಂ॥ ಶ್ರೀಕಾಶೀಕಾಧಶಾಸ್ತ್ರಿಗಳವರ ಪುಣ್ಯತಿಥಿಮಹೋತ್ಸವ

ಮೈಸೂರಿನ ಚಾಮುಂಡಿಬೆಟ್ಟಕ್ಕೆ ಹತ್ತಿರದಲ್ಲಿ ಶ್ರೀಮನ್ಮಹಾರಾಜರವರ ಕೃಪಾಪೋಷಿತವಾದ ಶ್ರೀ ಶಿಲ್ಪಿ ಸಿದ್ಧಲಿಂಗಸ್ವಾಮಿಗಳವರ ಆವರಣದಲ್ಲಿ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಸಮಾಧಿಯಾಗಿದ್ದು ಆ ಸಮಾಧಿಯ ಮೇಲೆ ಅವರ ಸಹೋದರರಾದ ವೇ॥ ಮಹಾದೇವಯ್ಯನವರು ಗದ್ದುಗೆ ಹಾಗು ಅಂದವಾದ ಮಂಟಪವನ್ನು ನಿರ್ಮಿಸಿ ಇದೇ ಮಾಘ ಬಹುಳ ತಿನರಾತ್ರಿಯ ದಿವಸ ವಿದ್ಯುಕ್ತವಾಗಿ ಲಿಂಗಸ್ಥಾಪನೆಯನ್ನು ಮಾಡಿಸಿದ್ದರು ತಾರೀಖು ೨೪.೨.೫೩ ನೇ ಫಾಲ್ಗುಣ ಶುದ್ಧ ೧೦ ಸೋಮವಾರದಂದು ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ೩ನೇ ವರ್ಷದ ಪುಣ್ಯತಿಥಿಯು ಪ್ರಾಪ್ತವಾಗಲು ಪ್ರಾತಃಕಾಲ ವೇ ವ ಕಾಶೀನಯ್ಯನವರು ಪಂಡಿತರ ಗದ್ದುಗೆ ಮಂಟಪಗಳನ್ನು ರಂಗವಲ್ಲಿಗಳಿಂದಲೂ ಪುಷ್ಪಗಳಿಂದಲೂ ಅಲಂಕರಿಸಿ ತಿವಲಿಂಗಕ್ಕೆ ಪೋಡಶೋಪಚಾರ ಪೂಜೆಯನ್ನು ಮಾಡಿ ರುದ್ರಾಭಿಷೇಕದಿಂದಲೂ ಸಹಸ್ರಬಿಲ್ವಾರ್ಚನೆ ನಯಿಂದಲೂ ಸಹಸ್ರಶಿವನಾಮಸ್ತೋತ್ರದಿಂದಲೂ ತಮ್ಮ ಎಳ್ಳನ್ನು ಪೂರೈಸಿಕೊಂಡಿರುವ ತರ ನೆರೆ ಜನಸಮೂಹ ಮೊದಲಾದ ಪಂಡಿತರ ಆತ್ಮಕ್ಕೆ ಶಾಂತಿಯನ್ನು ಕೋರಿ ಮಂಗಲವನ್ನು ಹಾಡಿದರು ಅನೇಕ ಜನರು ಪಂಡಿತರ ಮೇಲಿದ್ದ ತಮ್ಮ ಭಕ್ತಿನಿಶ್ಚಾಸಕ್ಕೆಯ್ಕೋಸ್ಕರ ಶಿವಲಿಂಗ ಸ್ವರೂಪದಲ್ಲಿದ್ದ ಅವರ ಅಂತರಾತ್ಮಕ್ಕೆ ಕಾಯಿ ಕರ್ಪೂರ ಗಳನ್ನೂ ಹೂಮಾಲೆಗಳನ್ನೂ ಅರ್ಪಿಸಿ ಸಂತುಷ್ಟರಾದರು ಬಂದಂಥ ಜನರಿಗೆ ಪ್ರಸಾದವಿನಿಯೋಗವಾಯಿತು ಅತಿಥಿಅಭ್ಯಾಗತರಿಗೆ ಅನ್ನ ಸಂತರ್ಪಣೆಯೂ ದಕ್ಷಿಣೆಯೂ ಕೊಡಲ್ಪಟ್ಟಿತು ಶ್ರೀ ಪಂಚಾಚಾರ್ಯ ಮಹಾರಾಜರೇ ಜೈ, ಪಂಡಿತ ಶ್ರೀಕಾಶೀನಾಥಶಾಸ್ತ್ರಿ ಮಹಾರಾಜರೇ ಜೈ ಎಂಬ ಜಯಘೋಷಗಳೊಡನೆ ಅಂದಿನ ಪುಣ್ಯತಿಥಿ ಮಹೋತ್ಸವವು ಮುಕ್ತಾಯಗೊಂಡಿತು

ಪ್ರತ್ಯಕ್ಷದರ್ಶಿ
ದೇಶದ ಶಿಲ್ಪಿರು ಕೆ ಒಸಪ್ಪಶೆಟ್ಟಿ
ಕೆಲ್ಲೆಮೊಹಲ್ಲಾ ಮೈಸೂರು

ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರ ಪುಣ್ಯತಿಥಿಮಹೋತ್ಸವ ಹೊಳಗುಂದಿ

ಗುರುಕುಲಾಗ್ರಣಿಗಳೂ, ವೀರಶೈವ ಧರ್ಮತತ್ವ ಪ್ರಚಾರಕರೂ ಆದ ನಾಗನೂರು ಬೃ॥ ಪಂ॥ ಕಾಶೀನಾಥ ಶಾಸ್ತ್ರಿಗಳವರು ತಿವೈಕ್ಯರಾಗಿದ್ದರೂ ಲವರ ಶತ್ಕಗಳು ಪ್ರತಿಯೊಬ್ಬ ವೀರಶೈವನಲ್ಲಿ ನೈಜವಾದ ಭಕ್ತಿಯನ್ನು ಹುಟ್ಟಿಸುತ್ತಿವೆ ಇಂದ ಮಹಾವ್ಯಕ್ತಿಗಳ ಪುಣ್ಯತಿಥಿಯನು ಆಚರಿಸಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರುವುದ ಧವಾ ಭಾಸ್ಪಾರಿಳ ನಮ್ಯ ಧೇಯವಾಗಿದೆ ಇದೇ ದೃಷ್ಟಿಯನ್ವಯ ಅತ್ಯಶುದ್ಧಿಯು ದ ಪರಗಣಿಲ್ಲಿಟ್ಟು ಪೋಗುಂದಿ ಶ್ರೀ ಜಂಗಮೋಗ ಸ್ವಲಿಂಗಸ್ವನವರು ತಮ್ಮ ಗೃಹದಲ್ಲಿ ತಾ ೨೨.೨೫೩ ನೇ ದಿನದ ಸೂರ್ಯ ತರ ಭೂಮಭಕ್ತನು ವಿದ್ಯುಕ್ತವಾಗಿ ಪೂಜಿಸಿ ತನ್ನ ಸಂತರ್ಪಣೆಯನ್ನು ಮಾಡಿ ಜಗದ್ಗುರು ಪಂಚಾಚಾರ್ಯರ ಜಯಜಯಕಾರದೊಂದಿಗೆ ಸಮಾಪ್ತಿಗೊಳಿಸಿರು ಎಂದಿನಂತೆಯೂ ಪಂಡಿತರಲ್ಲಿ ನೈಜವಾದ ಭಕ್ತಿಯನ್ನಿಟ್ಟ ಶ್ರೀ ಸಿದ್ಧಲಿಂಗಸ್ವಾಮಿಗಳವರಿಗೆ ಜಗದಾಚಾರ್ಯರು ನಿತ್ಯ ಮಂಗಲವನ್ನುಂಟುಮಾಡಲೆಂದು ಒಯಸುವ,

ಒನ ಧರ್ಮಾಭಿಮಾನಿ

ಶ್ರೀಶೈಲ ಕ್ಷೇತ್ರದಲ್ಲಿ ಜರುಗಿಬ ಪಿಪಣಾತ್ರಿಯಾತ್ರೆ ಮತ್ತು ೧೩ ನೇ ಶ್ರೀಶೈಲ ವೀರಶೈವ ಮಹಾಸಭೆ

ವರ್ಷಪ್ರತಿಯಂತೆ ಶ್ರೀಶೈಲಪ್ರತ್ರೆದಲ್ಲಿ ತಾ॥ ೧೧ ೫೩ ನೇ ದಿನ ಜಗದ್ಗುರುವ ಗೀಕಪಂಡಿತಾರಾಧ್ಯ ಮಹಾಸ್ವಾಮಿಗಳವರ ಅಧ್ಯಕ್ಷಪಲ್ಲಕ್ಕಿ ನ ದೇಕ್ಷೇತ್ರವು ನೈಬೆವದಿಂದ ಜರುಗಿತು ಆದೆ ದಿನ ಜೆಗದ್ಗುರು ಪಂಡಿತಾರಾಧ್ಯ ಸಿಂಹಾಸನದ ಮೆಂದ್ರೆದೆ ಸಭಾ ಮಂಟಪದಲ್ಲಿ ಮಹಾಸಭೆಯು ಪ್ರಾರಂಬವಾಗಿ ಈಶ ಪ್ರಾರ್ಥನೆಯನಂತರ ಅತ್ಯಕಾರಿ ಪಂ॥ ಜಿ ವೀರನಾಗೇಂದ್ರಶಾಸ್ತ್ರಿಗಳ ಪ್ರಾಸ್ತಾವಿಕ ಭಾಷಣವು ಸಂನ್ಯಾಸದ ವಿಜಟರಾದ ಶ್ರೀ ಚಿನ್ನಮಲ್ಲಸ್ವಾಮಿಗಳವರ ಸಂನ್ಯಾಸದ ಪರಿಚಯಪೂರ್ವಕವಾದ ವ್ಯಾಖ್ಯಾನವೂ, ರೇಪಲ್ಲಿ ಶ್ರೀ ಜಿ ಸಿ ಬಸವರಾಜ ಅವರ ಭಕ್ತಿವಿಷಯದ ಮೇಲೆ ಸ್ಯಾಖ್ಯಾನವೂ ನಡೆದು ಕೊನೆಗೆ ಜಗದ್ಗುರು ಗಳವರ ಉಪದೇಶಭಾಷಣದನಂತರ ಸಭೆಯು ಸಮಾಪ್ತ ನಾಯಿತು

ತಾ॥ ೧೨.೨.೫೩ ರಲ್ಲಿ ಪುನಃ ಜಗದ್ಗುರುಗಳ ಅಧ್ಯಕ್ಷತೆಯಲ್ಲಿ ಮಹಾಸಭೆಯು ಮುಂದುವರಿದು ರಾಯ ದುರ್ಗದ ಶ್ರೀ ಎಸ್ ನರಹರಿಸ್ವಾಮಿಯವರ "ತಿವರಾತ್ರಿಯ ಪವಿತ್ರತೆ" ಎಂಬ ವಿಷಯದ ಮೇಲೆ ಭಾಷಣವೂ ಪಂ॥ ವೀರಣಾಗೇಂದ್ರಶಾಸ್ತ್ರಿಗಳ "ಸುಖದ ಮೂಲವಾವುದು' ಎಂಬ ವ್ಯಾಖ್ಯಾನವೂ ಶ್ರೀ ಜಗದ್ಗುರುಗಳವರ "ತಿವರಾತ್ರಿಯ ತಿನಯೋಗ' ಎಂಬ ಪ್ರವನವಾದ ಉಪದೇಶವೂ ನಡೆದವು

ತಾ॥ ೧೩.೨.೫೩ ರಲ್ಲಿ ಶ್ರೀ ಜಗದ್ಗುರುಗಳವರ ಶ್ರೀಶೈಲ ಚರಿತ್ರೆಗೆ ಸಂಬಂಧಪಟ್ಟ ಉಪದೇಶವೂ ಬಳಿಕ ಶ್ರೀಶೈಲ ಕ್ಷೇತ್ರೋದ್ಧಾರ ಮತ್ತು ಪೀಠೋದ್ಧಾರಕ್ಕೆ ಸಂಬಂಧಿಸಿದ ಉಪದೇಶ ಭಾಷಣಗಳೂ ನಡೆದು ಯಾತ್ರೆಗೆ ಬಂದ ಮಹಾಜನಗಳ ಯೋಗಕ್ಷೇಮಾದಿ ವಿಚಾರಣೆ ನಡೆದನಂತರ ಮಲ್ಲಿಕಾರ್ಜುನ ಜಯಘೋಷ ಮೊದಲಾದ ಪ್ರಾರ್ಥನೆಯೊಡನೆ ಸಭೆಯು ಸಮಾಪ್ತಿಯಾಯಿತು

ಜಗದ್ಗುರು ನಾಗೀಕಪಂಡಿತಾರಾಧ್ಯಮಹಾಸ್ವಾಮಿಗಳು ಯಾತ್ರೆಗೆ ಒ ದ ಸಮಸ್ತರಿಗೂ ತಮ್ಮ ಸ್ಥಾನದ ಪರವಾಗಿ ಅತ್ಯತ್ಕಾರವನ್ನೂ ಯ ಶ್ರೀಶೈಲಕ್ಷೇತ್ರವಲ್ಲಿಯೂ ಅವಿಚ್ಛಿನ್ನವಾಗಿ ೧೦ ದಿನಗಳು ಅನ್ನಸತ್ರವನ್ನು ನಿರ್ವಹಿಸಿದ್ದರು ಕೈಲಾಸದ್ಯಾರದಲ್ಲಿ ನೀರಿನ ಅರವಟ್ಟಿಗೆ ವ್ಯವಸ್ಥೆಯು ಕೃಪಿಕಾರವಾಗಿತ್ತು ಸಕಾರದ ಪರವಾಗಿ ಹಿನಾಕ್ಯಿಲೇಶನ್ ಮಾ ತಾವ ವ್ಯವಸ್ಥೆಯೂ ಕೃಪಿಕಾರವಾಗಿತ್ತು ಈ ವರ್ಷ ಸಾಧಾರಣವಾಗಿ ಯಾತ್ರಿಗೆ ತೆಲಗು ಸೀಮೆಯಿಂದಲೇ ಹೆಚ್ಚಾಗಿದ್ದರ ಎಲ್ಲರೂ ಮಲ್ಲಿಕಾರ್ಜುನನ ಅಪಾಗ್ರಹದಿಂದ ಸುಖವಾಗಿ ತಮ್ಮ ತಮ್ಮ ದೇಶಗಳಿಗೆ ತೆರಳಿದರು ನೀರಿನ ಕೊರತೆಯು ಕ್ಷೇತ್ರದಲ್ಲಿ ಕೊನೆಯ ದಿನ ಕಂಡುಬಂದರೂ ಪುನಃ ಯಥಾಪ್ರಕಾರವಾಗಿ ಜಲಾಶಯ ಗಳು ತುಂಬಿದುದು ಕಂಡುಬಂದಿತು ಭೀಮಾಶಂಕರಿಳ್ಳದಲ್ಲಿ ಯುಗಾದಿ ಯಾತ್ರೆಗೂ ಪೂರೈಸುವ ನೀರಿನ ಸಂಗ್ರಹವಿದೆ ಈ ಸಂದರ್ಭದಲ್ಲಿ ಮಲ್ಲಾಸಹಿಂದು ರಿಲಿಜಿಯಸ್ ಎಂಡೋಮೆಂಟ್ ಬೋರ್ಡು ಸರ್ಕಾರದ ಡೆಪ್ಯುಟಿಕಮಿಷನರ ಸಾಹೇಬರೂ ಜೊತೆಗೆ ಕರೂಲ್ ಅಗಿ ಕಮಿಶನರೂ ಆಗಮಿಸಿ ಜಗದ್ಗುರುಗಳೊಂದಿಗೆ ಕ್ಷೇತ್ರೋದ್ಧಾರ ಮೊದಲಾದ ವಿಷಯಗಳನ್ನು ಕುರಿತು ಸಮಾಲೋಚನೆ ಮಾಡಿ ಸನ್ನಿಧಿಯ ದರ್ಶನಾಶೀರ್ವಾದಗಳನ್ನು ಸ್ವೀಕರಿಸಿದರು ಸಂಸ್ಥಾನದ ಪರವಾಗಿ ಸರಿಗೆ ವರಿಗೆ ಉಚಿತವಾದ ಗೌರವವನ್ನು ನಿರ್ವಹಿಸಲಾಗಿತ್ತು

ಪ್ರತ್ಯಕ್ಷದರ್ಶಿ

ಮೈಸೂರಿನ ರಾಜಕುಮಾರರಿಗೆ ಮಹಸೀ ಯರಿಂದ ಗೌರವ ಸಮರ್ಪಣೆ

ರಾಜ ಪುತ್ರೋತ್ಸವದ ಸಂಬಂಧವಾಗಿ ೫ ನೇ ದಿನ ಅರಮನೆಯಲ್ಲಿ ವಿಶೇಷ ದರ್ಬಾರನ್ನು ನಿರ್ವಹಿಸಲಾಗಿತ್ತು ಶ್ರೀಮನ್ಮಹಾರಾಜರವರು ಬೆಳಿಗ್ಗೆ ೧೧.೩೦ ಗಂಟೆಗೆ ದರ್ಬಾರಿಗೆ ದಯಮಾಡಿಸಿ ಆಸನಾರೂಢರಾದರು

ಸಚಿವರುಗಳಾದ ಶ್ರೀ ಎ ಜಿ ರಾಮಚಂದ್ರರಾಯರು ಶ್ರೀ ಸಿದ್ಧವೀರಪ್ಪನವರು, ಶ್ರೀ ಕಡಿದಾಳ್ ಮಂಜಪ್ಪನವರು ಮತ್ತು ಸರ್ಕಾರದ ಕಾರ್ಯದರ್ಶಿಗಳು ಅನೆಲ್ಲಿ ಸ್ಟೀಕಾರವಾದರು, ಲೆಜಿಸ್ಲೆಟಿವ್ ಕೌನಿಲ್ ಛೇರ್ಮನ್ನರೂ, ಮೈಸೂರು ಜಲ್ಲೆ ಡೆಪ್ಯುಟಿಕಮಿಷನರವರು ಪಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಸ್ ಜಿನ್ನಯ್ಯನವರು ಮುಂತಾದ ಗಣ್ಯನೀಯರು ದರ್ಬಾರಿಗೆ ಆಗಮಿಸಿದ್ದರು ದರ್ಬಾರು ಸಮಾರಂಭದ ಅರ್ಧಗಂಟೆಕಾಲ ಪತಿಯಿತು ದರ್ಬಾರಿಗೆ ಆಗಮಿಸಿದ್ದವರೆಲ್ಲರೂ ರಾಜ ಕುಮಾರರನ್ನು ನೋಡಿ ತಮ್ಮ ರಾಜಭಕ್ತಿ ಗೌರವ ಸಲ್ಲಿಸಿದರು ಅವಮನೆಯ ಮುಕ್ತೈದೆಯರು ಪ್ರಭುಗಳಿಗೆ ಆರತಿ ಎತ್ತಿದರು ಅಪೇಕ್ಷೆಗಳಿಂದ ಪ್ರಭುಗಳಿಗೆ ಪ್ರಸಾದಗಳು ಬಂದಿದ್ದವು.

ಪಂಚಾಚಾರ್ಯಪ್ರಭಾ

೧೯೫೩ ನೆಯ ಮಾರ್ಚಿ ತಾ|| ೨ ನೇ ಸೋಮವಾರ

ಶ್ರೀ ಜಗದ್ಗುರು ಪಂಚಾಚಾರ್ಯರ ಜಯಂತಿ.

ವೀರಶೈವಮತಸಂಸ್ಥಾಪಕರಾದ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಂತಿಗಳನ್ನು ಆಯಾಯ ಪವಿತ್ರ ತಿಥಿಗಳಲ್ಲಿ ಮಾಡಿ ವೀರಶೈವಸಮಾಜದಲ್ಲಿ ಜನ್ಮಿಸಿದ್ದುದಕ್ಕೆ ಕೃತಜ್ಞತೆಯನ್ನು ತೋರಿಸುವುದು ಪ್ರತಿಯೊಬ್ಬ ವೀರಶೈವನ ಮುಖ್ಯ ಧ್ಯೇಯವಾಗಿರುವುದಂದು ಭಾವಿಸಿ ಅನೇಕ ಜನ ವಿವೇಕಿಗಳು ಗರು ಜಯಂತಿಮಹೋತ್ಸವವನ್ನು ಪ್ರತಿವರ್ಷ ಗುರುಭಕ್ತ್ಯರ್ಪಣೆಯನ್ನು ವ್ಯಕ್ತಗೊಳಿಸುತ್ತಿರುವೆಂಬುದಕ್ಕೆ ವೈಭವದಿಂದ ನೆರವೇರಿದ ಜಯಂತಿಮಹೋತ್ಸವಗಳೇ ನಿದರ್ಶನಗಳಾಗಿವೆ ವೀರಶೈವರು ತಾವು ಪರಮ ಪವಿತ್ರವಾದ ವೀರಶೈವಮತದಲ್ಲಿ ಜನ್ಮವನ್ನು ಧರಿಸಿದ್ದರೂ ತಾವು ಅವಲಂಬಿಸಿದ ಮತವಾವುದು? ಆ ಮತ ಸ್ಥಾಪಕರಾರು? ತಾವು ಹೇಳುವ ಗೋತ್ರವಾವುದು? ಸೂತ್ರವಾವುದು? ತಾವು ಧರಿಸಿದ ಲಿಂಗವು ಯಾರಿಂದ ಬಂದಿತು? ತಾವು ಆಚರಿಸುವ ಸಪ್ತಸ್ಥಲಲಿಂಗಿಗಳಿ ಆಪ್ತಾನುಚರಣಲಿಂಗಿಗಳಾಗಲಿ, ಪಂಚಾಚಾರಗಳಾಗಲಿ, ಯಾರಿಂದ ಉಪದೇಶಿಸಲ್ಪಟ್ಟುವು? ಇವೇ ಮೊದಲಾದ ವಿಷಯಗಳನ್ನು ಪೂರ್ಣಾಪರಿಜ್ಞಾನೋದ್ದೇಶದಿಂದ ಕೆಲ ಕಾಲಕ್ಕೆ ಗುರುವಿಚಾರಗಳನ್ನೇ ಮರೆತು ಸ್ವೇಚ್ಛಾಕಲ್ಪಿತ ಗುರು ಜೀವನಶಾರಾಧನೆಯಲ್ಲಿ ಆಸಕ್ತರಾಗಿರುವುದನ್ನು ಪರಿಭಾವಿಸಿದರೆ ಇವರ ಅಜ್ಞಾನತೆಗೆ ಬೆಲೆಯೇ ಇಲ್ಲವೆಂದು ಹೇಳಬೇಕಾಗಿದೆ ಬಹುಕಾಲದಿಂದ ಮುಸುಕಿದ್ದ ಇಂತಹ ಅಜ್ಞಾನವು ಸೂರ್ಯೋದಯದಿಂದ ಕತ್ತಲೆಯು ಪಲ್ಲಾಯನ ಮಾಡುವಂತೆ ಪ್ರಭೆಗೆದಯವಾದಂದಿನಿಂದ ಕಾಣದಾಗಿಬಿಡುವುದು ಸಹಜವೆಂದು ಹೇಳಬೇಕಾಗಿದೆ ಪರಾಮರ್ಶೆ ಮಾಡಿದಾಗ ವೀರಶೈವಮತ ವನ್ನು ಅವಲಂಬಿಸಿದ ಕೆಲ ಜನ ಶೂದ್ರರು ಆಚಾರ್ಯ ಭಾವತ್ಪಾದರ ಮಹಾವಾಕ್ಯಗಳನ್ನೂ ಆಚಾರ್ಯದೀಕ್ಷೋಭವ" ಎಂಬೀ ಪ್ರತಿಪಾದಿಸಿಯ ವಾಕ್ಯವನ್ನೂ ಕೇಳಿದು ಆದರಂತೆ ವರ್ತಿಸದ ತಪ್ಪಿದ್ದುದಾಗಿ ಮೈಸುತಿರುವರು ಇದು ಇವರ ಜನಪ್ರಕೃತಿಸ್ವಭಾವವನ್ನು ತೋರಿಸುವದಲ್ಲದೆ ಬೇರೊಂದಿಲ್ಲ ಇರಲಿ, ಆ ವೀರಶೈವಮತ ಅಭಿವೃದ್ಧಿಯನ್ನು ಶ್ರೀ ರೇಣುಕಾದಿ ಪಂಚಾಚಾರ್ಯರು ಸ್ಥಾಪಿಸಿದ್ದು ಈ ರಾಜ್ಯಶ್ರೆಷ್ಠ ಅವರು ಪ್ರಭುಗಳಾಗಿರುವರೆಷ್ಟೆ! ಲೋಕದಲ್ಲಿ ಪ್ರಭುಚಿಹ್ನವನ್ನು ಧರಿಸಿದರೆಲ್ಲರೂ ಆಚಿಹ್ನವನ್ನು ದಯಪಾಲಿಸಿದ ಪ್ರಭುಗಳಲ್ಲಿ ಅವ್ಯಾಜಭಕ್ತಿಯನ್ನು ತೋರಿಸುವಂತೆ ಲಿಂಗಧಾರಣರೂಪವಾದ ಚಿಹ್ನವು ಯಾರಿಂದ ದಯಪಾಲಿಸಿದ್ದುದೋ ಅವರಿಲ್ಲಿರುವ ಲಿಂಗನಿನ್ನ ನುಗ್ರಹಿಸಿದ ಆಚಾರ್ಯಭಗತ್ಪಾದರಲ್ಲಿ ಭಕ್ತಿಯನ್ನು ತೋರಿಸುವುದು ಪರಮಧರ್ಮವಾಗಿದೆ ಹೀಗಿದ್ದೂ ಕೆಲವರು ಪ್ರತಿಷ್ಠಾಮಾಗಿಗಾಗಿ ಸ್ವಯಮಾಚಾರ್ಯತ್ವವನ್ನು ಬಯಿಸಿ ಶಾಸ್ತ್ರೀಯವಾದ ಗುರುಜಯಂತ್ಯಾದ್ಯವಶ್ಯಕರ್ತವ್ಯಗಳನ್ನು ಬಿಟ್ಟು ಮನಬಂದಂತೆ ನಡೆಯುವವರಿಂದಾಗುವ ಪ್ರಯೋಜನವೇನೋ ತಿಳಿಯದಾಗಿದೆ ಪವಿತ್ರತಾಸ್ಫೀಯಳ ಕೊರೆಳನಲ್ಲಿ ಎಲ್ಲಿಯವರೆಗೆ ಮಂಗಳಸೂತ್ರವಿರುವುದೋ ಅಲ್ಲಿಯವರೆಗೂ ಮಾಂಗಲ್ಯವನ್ನು ಕಟ್ಟಿದ ಪತಿಯು ಅಧಿಕಾರವು ಅವಲಂಬಿಲೆ ಇದ್ದೇ ಇರುವುದು ಆದರೆ ಅವಳು ವ್ಯಭಿಚಾರಿಣಿಯಾಗಿ ಪತಿಯನ್ನುಲ್ಲಂಘಿಸಿ ಮಾಂಗಲ್ಯವನ್ನು ಕೆತ್ತು ಬಿಸಾಡಿದರೆಮಾತ್ರ ಅವಳ ಮೇಲೆ ಪತಿಗೆ ಅಧಿಕಾರವಿರುವುದಿಲ್ಲ ಆದರಂತೆ ಮಾಂಗಲ್ಯಸ್ಥರೂಪವಾದ ಇಷ್ಟಲಿಂಗವನ್ನು ಯಾವ ಗುರುಗಳು ದರಿಸುವರೋ ಅವರ ಗುರುತ್ವವು ಪ್ರತಿಯೊಬ್ಬ ಲಿಂಗಧಾರಿಗಳ ಮೇಲುಂಟು ಗುರುವಿಸಿಂದ ಧರಿಸಲ್ಪಟ್ಟ ಲಿಂಗವು ಇರುವವರೆಗೂ ಗುರುನೇಮವನ್ನು ಮಾಡಬೇಕು ಯಾರು ಮತಸ್ಥಾಪಕರಲ್ಲಿ ಪೂಜ್ಯಬುದ್ಧಿಯು ಸ್ಫಿಟ್ಟುರುವುದಿಲ್ಲವೋ ಅವರು ಆ ಮತಸ್ಥರೆಂದು ಎಂದೂ ಹೇಳಿಕೊಳ್ಳಕೂಡದು ಅಧ್ಯೇತೃ ಮತಸ್ಥಾಪಕರಾದ ಶ್ರೀ ಶಂಕರಾಚಾರ್ಯರಲ್ಲಿ ಪೂಜ್ಯಬುದ್ಧಿಯಿಲ್ಲದವನು 'ಅದ್ವೈತಿ' ಎಂದು ಹೇಳಿಕೊಳ್ಳುವುದು ಎಷ್ಟು ಅಭಾಸ ಕರವೋ ವೀರಶೈವ ಮತಸ್ಥಾಪಕರಾದ ಶ್ರೀ ರೇಣುಕಾದಿ ಪಂಚಾಚಾರ್ಯರಲ್ಲಿ ಪೂಜ್ಯಬುದ್ಧಿಯಿಲ್ಲದವನು ವೀರಶೈವ ನೆಂದು ಹೇಳಿಕೊಳ್ಳುವದು ಜಪ್ಪಯ್ಯ ಅಭಾಸಕರವು ತನ್ನ ಕುಲಗುರುವಾದ ಶಂಕರನ ಜಯಂತಿಯಲ್ಲಿ ಪ್ರವೃತ್ತಿಯಿಲ್ಲದ ಅದ್ವೈತಿಯು ಇತರ ಜಯಂತಿಗಳಲ್ಲಿ ಎಷ್ಟು ಅನುರಾಗವುಳ್ಳವನಾಗಿದರೂ ಅವನು ಅದ್ವೈತಮತ ವಿರೋಧಿಯೂಂದೆನಿಸಿ ವಂತೆ ತಮ್ಮ ಕುಲಗುರುಗಳಾದ ಆಚಾರ್ಯರ ಜಯಂತಿಯಲ್ಲಿ ಅಲಸರಾಗಿ ಇತರ ಜಯಂತಿಗಳಲ್ಲಿ ಅನುರಕ್ತರಾದರೆ ತಪ್ಪರಿಗೆಯಿಂದಾಗಿ ವೀರಶೈವರೆಂದು ಹೇಳಲು ಆಗುವುದಿಲ್ಲವು ವೀರಶೈವರಿಗೆ ಗುರುವೇ ಮೋಕ್ಷದಾಯಕ ಕಸಾಗಿರುವನು ಪಂಚಾಚಾರ್ಯರೂ ಮತಾಚಾರ್ಯರೂ ಆದ ಗುರುಪರಂಪರೆಯಲ್ಲಿ ಪ್ರತಿಯೊಬ್ಬರೂ ಸತಿತನೆಂದು ಹೇಳಿಕೊಳ್ಳಲ್ಪಡವನು ಬಾಯಿಯಲ್ಲಿ ಮಾತ್ರ ನಾವು ಗುರುಗಳನ್ನು ಬಿಟ್ಟಿಲ್ಲವೆಂದು ಹೇಳುತ್ತ ಕಾರ್ಯದಲ್ಲಿ ಮಾತ್ರ ಗುರುಗಳ ಜಯಂತಿಯು ಗೋಚ್ಚರಿಸದೆ ಹೋಗದ ನಷ್ಟಿಸಿ ನವರನ್ನು ಕುಲಹೀನರೆಂದೇ ಅರಿಯಬೇಕಾಗುವುದು ಅದ್ದರಿಂದ ಪ್ರತಿಯೊಬ್ಬ ವೀರಶೈವನು ಒಯಂತಿಯನ್ನು ಆಚರಿಸಿ ಗುರುಭಕ್ತನಾಗಬೇಕು ಭಕ್ತಬಂಧವಿದ್ದಲ್ಲಿರಕ್ಕೆ ಗುರುಭಕ್ತಿ ಧರಿಣಿಯಾದ ಸಾಸ್ತ್ರ ಗುರುಭಕ್ತಿಯಿಲ್ಲ ಶ್ರೀ ಜಗದ್ಗುರು ಪಂಚಾಚಾರ್ಯರು ಆಯಿರಾರೋ ವರ್ಷ ದಿಭಾಗ್ಯಗಳನ್ನು ಕೊಟ್ಟು ರಕ್ಷಿಸಲಿ ದು ಪ್ರಾರ್ಥಿಸುತ್ತೇವೆ

ಶಿವ ಪಮದೋಸ್ಸನ ನಮಾರಂಭ
ಬಿಸಲವಾಡಿ

ಧಾರವಾಡ ಜಿಲ್ಲಾ ರೋಣ ತಾಲ್ಲೂ ಪೆಕಿ ಹೊಸ್ಕ ಆಲೂರು ಗ್ರಾಮವನ್ನಿದ್ದ ೧೮ ಗಜಗಂಗಮ ವೆಂಮಿ ಗಳೂ ಸಮಾಜ ರತ್ನಂಸ್ಥರೂ ಆಗಿರುವ ಶ್ರೀಮಾನ್ ಸಂಗಪ್ಪನವರು ಶ್ರೀಶೈಲ ಜಗದ್ಗುರು ಪಂಚಾಚಾರ್ಯರ ಜೀರ್ಣೋದ್ಧಾರ ಜಿಲ್ಲಾ ಬಿ ಎಂ ಸಿ ಶ್ರೀ ಚನ್ನಪ್ಪನವರು ಎಂಬಿ ಎ ಬಿ ಎಲ್ ಸೌ ಶಾಂತಾಬಾಯಿ ಯವರ ಪತ್ರಿ ಬಿ ಎ ಸೌ ಶಾಂತಾಬಾಯಿ ಯವರ ಪುತ್ರ ಚಿ ಸಾ ನಂದನಾಮ ಸಂಸ್ಕಾರ ವರ್ಧಕ ೧೦ ಕಸಿನಾಥ ಬೆಲ್ಲಿಗೆ ಗುರುಸೇವಕರಾ ಕಾಯ ರಾ ಸಿರವೆಲೆ ಸನ ಸಾಳಿ ಕಾ ೧೦ ವಾರ ಬೆಳ್ಗೆ ೧೦ ೧೦ ಗಂ ಟೆಗೆ ವಿಜಾಂಗಲ್ಯಧಾರಣ (ತ್ರಿವಾರೀಕರಣ) ಕಾಯ ವು ನಂತರೀರು ಈ ಮಂಗಲಕಾಯ ವು ಷಷ್ಟಿ ಬ್ರ ಶ್ರೀ ಷಟ್ಸ್ಥಲಾಧ್ಯಮಿಗಳು ಹಿರೆ ಸುರ ಕೊಣಾರ್ಯ ಷ ಬ್ರ ಶ್ರೀ ಶಿವಬಸವಾಮಿ ಗಳು ಚಿಕ್ಕ ಬಣ್ಣೂರ ಷ ಬ್ರ ಶ್ರೀ ಷಟ್ಸ್ಥಲಾಧ್ಯಮಿ ಗಳು ರಂಭದ ದಗ್ಗ ಈ ತಿಲಕಾರ್ತಿಗಳ ನೇತೃತ್ವದಲ್ಲಿ ವೇ|| ಶ್ರೀ ರೇಣುಕಾಪ್ರಿದ್ಯಾಸನವರು ಹಿರೇಮಠ ಹೊಳೆ ಆಲೂರು ಇವರ ವೈದಿಕತ್ವದಿಂದ ಒಳ್ಳೇ ವೈಭವವಾಗಿ ಸಂಸ್ಕಾರ ಎಲ್ಲಿಟ್ಟಿತು ಜಗದ್ಗುರು ಪಂಚಾಚಾರ್ಯರು ಈ ನೂತನ ದಂಪತಿಗಳಿಗೆ ಆಯು ರಾರೋಗ್ಯಭಾಗಿದಿಗಳನ್ನೆ ಪುತ್ರ ಸಂತಾನ ಭಿವೃದ್ಧಿಯನ್ನೂ ಉಂಟುಮಾಡಿ ರಕ್ಷಿಸಲೆಂದು ಹಾರೈಸುತ್ತೇವೆ

ಹೂಗಾಗಿ ಎಸ್ ಸಿ

ವಿವಾಹಮಹೋತ್ಸವಸಮಾರಂಭ

ಕನಕಗಿರಿ

ರಾಯಚೂರು ಜಿಲ್ಲೆಗೆ ಸೇರಿದ ಕನಕಗಿರಿಯಲ್ಲಿರುವ ವೇ|| ಈಶ್ವರಯ್ಯ ತಿಮ್ಮಿನಪಾಳ ಇವರು ತಮ್ಮ ಪುತ್ರಿ ಚಿ|| ಕಾಂ|| ಸೌ|| ಹೊಪಮ್ಮನವನ್ನು ಹೊಸಗೇರಿಯಲ್ಲಿರುವ ಹಂಚಿನಾಳು ವೇ|| ಶರಭಯ್ಯನವರಿಗೆ ಕೊಟ್ಟು ಕನಕಗಿರಿ ಹಿರೇಮಠದ ಶ್ರೀ|| ಷ|| ಬ್ರ|| ಪಂಚಾಕ್ಷರ ತಿವಾಚಾರ್ಯ ವೆ.ಪಾಸಾನ್ಯಮಿಗಳವರ ಸನ್ನಿಧಿಯಲ್ಲಿ ಇದೇ ೧೪೬೫ ನೇ ನಂದನನಾಮ ಸಂವತ್ಸರ ಮಾಘ ಬಹುಳ ನವಮಿ (ತಾ|| ೮-೨-೧೯೫೩) ಭಾನುವಾರ ಉದಯ ೧೦ ಘಂಟೆಗೆ ಶುಭಮುಹೂರ್ತದಲ್ಲಿ ಇಲ್ಲಿಯ ಪ್ರಸಿದ್ಧವಾದ ಶ್ರೀ ಜಿರಾಳ ಬಸವೇಶ್ವರದೇವಸ್ಥಾನದಲ್ಲಿ ವೇ|| ಹಂಪಯ್ಯ ಪೊದಿಸೊಮಕ ವೇದಮೂರ್ತಿಗಳಾದ ಶ್ರೀ ರಾಜಯ ಉಯ್ಯನವರು ಬಿಲ್ಲಕೊಂಡಿಮಕ ಈ ಉಭಯವರ ವೈದಿಕತ್ವದಲ್ಲಿ ಶ್ರೀ ಪಂಚಕಲಶಾಸ್ಥಾಪನಪೂರ್ವಕ ಸಕಾಪ್ರಿಯ ವಾಗಿಯೂ ಸಶ್ರಮವಾಗಿಯೂ ಮಂಗಲಕರವಾದ ಮಾಂಗಲ್ಯಧಾರಣ ಅಕ್ಷತಾರೋಪಣಪೂರ್ವಕವಾಗಿ ವಿವಾಹಮಹೋತ್ಸವ ಸಮಾರಂಭವು ಒಳ್ಳೆ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು ಮಧ್ಯಮಧ್ಯದಲ್ಲಿ ಮಂಗಲವಾದ್ಯಗಳು ಭೋಗರೆಯುತ್ತಿದ್ದವು ಆಂದಿನ ಕಲ್ಯಾಣ ಮಂಟಪವು ದೇವಲೋಕದಂತೆ ಒಪ್ಪುತ್ತಿತ್ತು ತರುವಾಯ ಆಗಮಿಸಿದ ಸಮಸ್ತ ಭಕ್ತಮಾಹೇಶ್ವರರನ್ನು ಸಲಹಾಂಬೂಲ ದಕ್ಷಿಣಾದಿಗಳಿಂದ ಈಶ್ವರಯ್ಯನವರು ಸತ್ಕರಿಸಿದರು ಈ ಮಂಗಲಮಹೋತ್ಸವಸಮಾರಂಭಕ್ಕೆ ಸ್ಥಳಪರಸ್ಥಳಗಳಿಂದ ಅನೇಕ ಪ್ರಮುಖ ಜನರು ದಯಮಾಡಿಸಿದ್ದರು ಸುಮಂಗಲಿ ವಧುವರರಿಗೆ ಮಂಗಲವನ್ನು ಕೋರಿದನಂತರ ವಧುವರರಿಗೆ ಆಶೀರ್ವದಿಸಿ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ತಮ್ಮ ತಮ್ಮ ಗೃಹಕ್ಕೆ ತೆರಳಿದರು ಶ್ರೀ ಜಗದ್ಗುರು ಪಂಚಾಚಾರ್ಯರು ವಧೂವರರಿಗೆ ನಿತ್ಯಮಂಗಲವನ್ನು ಕೊಟ್ಟು ಕಾಪಾಡಲೆಂದು ಜಗದಾಚಾರ್ಯರಲ್ಲಿ ಅನನ್ಯಭಕ್ತಿಯಿಂದ ಬೇಡುವೆವರು,

ಶ್ರೀರಾಮೋಟಿಯ್ಯನವರು ಬಿಲ್ಲಕೊಂಡಿಮಕ

ಕರ್ನಾಟಕ ರಾಜ್ಯಸಿಮೋಣಕ್ಕೆ ಉಗ್ರ ಉಪವಾಸ ಸೊರಬೂರು

ಕರ್ನಾಟಕ ರಾಜ್ಯನಿರ್ಮಾಣ ಶಿಬಿರ ಜಕ್ಕಲಿಯಲ್ಲಿ ಶ್ರೀ ಅಂದಾನಪ್ಪನವರು ದೂಡ್ಡಮೇಟ್ ಎಮ್ ಎಲ್ ಎ ಇವರ ಆಪ್ತ ಶದಂತೆ ೧೬ ದಿವಸಗಳ ಟ್ರೈನಿಂಗ ಪಡೆದು, ಪ್ರತಿಜ್ಞಾಪತ್ರಕ್ಕೆ ಸಹಿಮಾಡಿ ಕಂಕಣಬದ್ಧರಾಗಿ ಬಂದಂಥ ಶ್ರೀ ಹುಚ್ಚನಗೌಡ ಪಕೀರಗೌಡ ಪಾಟೀಲ ಇವರು ಸೊರಬೂರಲ್ಲಿ ದಿ|| ೧೪ ನೇ ಫೆಬ್ರವರಿ ೧೯೫೩ ರಿಂದ ೭ ದಿವಸಗಳ ವರೆಗೆ ಕರ್ನಾಟಕ ರಾಜ್ಯನಿರ್ಮಾಣ ಶಿಬಿರವನ್ನು ಪ್ರಾರಂಭಿಸಿರುತ್ತಾರೆ ಶಿಬಿರದಲ್ಲಿ ಸಾಧಕರು ೧೦ ಜನರು ಬಾಗವಹಿಸಿರುತ್ತಾರೆ ಕರ್ನಾಟಕ ರಾಜ್ಯನಿರ್ಮಾಣ ವಾಗುವ ಒಗ್ಗೆ ಹಾಗು ಆತ್ಮಬಲ್ಲಿದ್ದು ಒಗ್ಗೆ ಶ್ರೀ ಹುಚ್ಚನಗೌಡ ಪಕೀರಗೌಡ ಪಾಟೀಲ ಇವರು ಶಿಬಿರದ ಪ್ರಾರಂಭದಿಂದ ೯ ದಿವಸಗಳ ಕಠಿಣತರ ಉಪವಾಸವನ್ನು ಕೈಕೊಂಡರು ೩೪ ನೇ ತಾ|| ದಿನಕ್ಕೆ ಮುಕ್ತಾಯಗೊಳಿಸಿದರು ಈ ಒಗ್ಗೆ ನೇ|| ಲಕ್ಕೆಕ್ಟರ ಧಾರವಾಡ ಇವರಿಗೆ ತಾರಿಸಿಂದ ತಿಳಿಸಲಾಗಿತ್ತು ಶಿಬಿರಕ್ಕೆ ಶ್ರೀ ನಾರಾಯಣಪ್ಪನವರು ನೆ ದೈ ವ್ಯಸ್ಥಾನವಲಂಬನ ಕೇಂದ್ರ ಸಂಚಾಲಕರೂ ಆ ಶ್ರೀ ಕೊಟ್ರಪ್ಪನವರು ಶಪ್ತಪ್ತಿನವರೆ ಶಿರಹಟ್ಟಿ ಶ್ರೀ ನಿಂಗಪ್ಪ ಪಾಟೀಲರು ಸೊರಬೂರ ಇವರೆಲ್ಲ ಮಹನೀಯರು ಆಗಮಿಸಿ ಕರ್ನಾಟಕ ಪ್ರಾಂತೀಕರಣತೆಯ ವಿಷಯುಕ್ತ ಜನರ ಮನಸ್ಸಿನ ಮೇಲೆ ಪರಿಣಾಮಕಾರಕ ವಾಗುವಂತೆ ಭಾಷಣ ಮಾಡಿದರು ಶ್ರೀ ಹು ಫ ಪಾಟೀಲ ಇವರ ಅನುಕರಣ ಮಾಡಿ ೪೨ನೆ ದೀಕ್ಷಾಬಿ ಮಾಸಿಗಳಾದವರು ಹಳ್ಳಿ ಹುಲ್ಲಗಳಲ್ಲಿ ಕರ್ನಾಟಕ ರಾಜ್ಯ ನಿರ್ಮಾಣ ಶಿಬಿರವನ್ನು ಸ್ಥಾಪಿಸಲಿ ವಿ ತ್ಯ ನಮ್ಮ ಕೊಗನ್ನು ಪೂರ್ತಿಗೊಳಿಸುವಂತೆ ಶ್ರೀ ಪ್ರಧಾನ ನೆಹರೂಜಿ ಸರಕಾರಕ್ಕೆ ಶ್ರೀ ಭುವನೇಶ್ವರಿಯು ಒಳ್ಳೆ ಬುದ್ಧಿಯನ್ನು ದಯಪಾಲಿಸಲೆಂದು ಪ್ರಾರ್ಥಿಸುತ್ತೇನೆ.

ಫ ಸ ಜಂಗಳಿ, ಸೊರಬೂರು

ಎಲಿಜಬೆತ್ ರಾಣಿಗೆ ಜರಿ ಅಂಚಿನ ಚಾಪೆ

ತಿರುನೆಲ್ವೇಲಿ ಜಿಲ್ಲೆಯ ಹಳ್ಳಿಯೊಂದರ ಚಾಪೆ ಹೆಣೆಯುವವರು ಬ್ರಿಟನ್ನಿನ ರಾಣಿ ಎಲಿಜಬೆತ್‌ರವರಿಗೆ ಕಿರೀಟ ಧಾರಣೆಯ ಮಹೋತ್ಸವದಲ್ಲಿ ಒಡುಮಾನವಾಗಿ ಕೊಡಲು ಜರಿ ಅಂಚಿನ ಚಾಪೆಯನ್ನು ಹೆಣೆದಿದ್ದಾರೆ ಇದಕ್ಕು ದೆಹಲಿಗೆ ಕಳುಹಿಸಲಾಗಿದೆ

ಬಳ್ಳಾರಿಯನ್ನು ಆಂಧ್ರದಲ್ಲಿ ಸೇರಿಸಬೇಡಿ

ಮುಂಬೈಶಾಸನಸಭೆಯ ಕರ್ನಾಟಕ ಸದಸ್ಯರುಗಳು ಪ್ರಧಾನ ಮಂ|| ನೆಹರೂರವರಿಗೆ ಕಂಚಿಯೊಂದಕ್ಕೆ ಕಳುಹಿಸಿ ವಾದಾಸ್ಪದವಾದ ಬಳ್ಳಾರಿಜಿಲ್ಲೆಯನ್ನು ಆಂಧ್ರ ಪ್ರಾಂತ್ಯದೊಳಗೆ ಸೇರಿಸಬಾರದೆಂದೂ ಸದ್ಯದಲ್ಲಿ ಮದ್ರಾಸ್ ಅಡಳಿತದಲ್ಲೇ ಇರಲೆಂದೂ ಒತ್ತಾಯಪಡಿಸಿದ್ದಾರೆ

ವರ್ತಮಾನ ಸಂಗ್ರಹ

ಭಾಷಾವಾರು ಪ್ರಾಂತರಚನೆಗೆ ದ್ವಿತೀಯಸ್ಥಾನವಿರಬೇಕು

ಮಾಜಿ ಗೌರ್ನರರೂ ಸಂಸ್ಥಾನಗಳ ಕಾಪೆಯ ಮಾಜಿ ಕಾರ್ಯದರ್ಶಿಗಳೂ ಆದ ಶ್ರೀ ವಿ ಪಿ ಮೆನನ್ನರು ಅಲ್ ಇ ಎಫ್ ಪ್ರತಿನಿಧಿಗಿತ್ತ ವಿಶೇಷ ಸಂದರ್ಶನದಲ್ಲಿ ಭಾಷಾವಾರು ಪ್ರಾಂತಗಳ ಒಗ್ಗೆ ಒಂದು ಹೇಳಿಕೆಯು ನ್ನಿತ್ತರು

"ಭಾರತದಲ್ಲಿ ಭಾಷಾವಾರು ಪ್ರಾಂತರಚನೆಯು ವಿಷಯ ಹೊಸದಲ್ಲ ಕಡೆಯ ಪಕ್ಷ ಈ ವಿಷಯವು ನಮ್ಮಲ್ಲಿ ಸುಮಾರು ೩೫ ವರ್ಷಗಳಿಂದ ಇದ್ದೇ ಇದೆ ಅನೇಕ ನಿರ್ಣಯಗಳೂ ಉದ್ಘೋಷಣೆಯಗಳೂ, ಕೇಂದ್ರ ಶಾಸನ ಸಭೆಗಳಲ್ಲಿ ತರ್ಕವಿತರ್ಕವೂ ಬ್ರಿಟಿಷರು ಭಾಷಾವಾರು ಪ್ರಾಂತರಚನೆಗೆ ವಿರೋಧಿಗಳಾಗಿದ್ದರು ಸಿಂಧ್ ಪ್ರಾಂತವನ್ನು ಪ್ರತ್ಯೇಕವಾಗಿ ರಚಿಸಿದ್ದಕ್ಕೆ ಕಣ್ಣೊರಿಸಿದಂತೆ ತಂದೆಯು ಒರಿಸ್ಸಾ ಪ್ರಾಂತವನ್ನು ರಚಿಸಿದರು

ಭಾಷಾವಾರು ಪ್ರಾಂತರಚನೆಗೆ ನಾನು ವಿರೋಧಿಯಲ್ಲ ಆದರೆ ಈ ವಿಷಯವು ದ್ವಿತೀಯಸ್ಥಾನವನ್ನು ಪಡೆಯಬೇಕು ಮೊದಲನೆಯ ಸ್ಥಾನವು ನಮ್ಮ ಆರ್ಥಿಕ ಕಟ್ಟಡವನ್ನು ಕಟ್ಟುವುದು ಈ ಉದ್ದೇಶದಿಂದಲೇ ಈಗ ನಮ್ಮಲ್ಲಿ ಒಂದೊಂದು ಯೋಜನೆಯಿರುವುದು ಮದ್ರಾಸ್ ಪ್ರಾಂತವನ್ನು ನೀವು ವಿಘಾನಿಸಿದ್ದೀ ಆದರೆ ನೀವು ವಿಕಲಾಂಗಲದಲ್ಲಿ ಸಂಚಾರಿಕ ಯೋಜನೆಯನ್ನು ಜಾರಿಗೆ ತರಲಾಗಿರಿ ಸರ್ವಾಸನ ಗಳನ್ನು ಆಂಧ್ರ ಮತ್ತು ಮದ್ರಾಸ್‌ಗಳಿಗೆ ಭಾಗಮಾಡಬೇಕಾಗುವುದು ಆಂಧ್ರಪ್ರಾಂತಕ್ಕೇ ಒಂದು ಪ್ರತ್ಯೇಕ ಸರ್ಕಾರವೇರ್ಪಡಬೇಕಾಗುತ್ತದೆ ದೇಶವಿಭಜನೆಯ ವಿಷಯವನ್ನು ನಾನು ತಿಳಿದುಕೊಂಡಿರುವ ಮಟ್ಟಿಗೆ ನನ ಆಧ್ರ ಪ್ರಾಂತವು ಕಡೆಯಪಕ್ಷ ೩ ೪ ವರ್ಷಗಳ ವರೆಗೂ ಕಷ್ಟವಿಂದಿಗೆ ಬರುವುದಿಲ್ಲ ಎಂದು ತಿಳಿಸಿದರು

ನಾಂಚೂ ವರದಿ ನ್ಯಾಯಸಮ್ಮತವಾಗಿರುವುದೆಂದು ಶ್ರೀ ಟಿ. ಪ್ರಕಾಶಂ

'ಸೇಲಂ ಮತ್ತು ಚಿಂಗಲ್‌ಪೇಟೆ ಜಿಲ್ಲೆಗಳಲ್ಲಿ ವಿಶೇಷವಾಗಿ ತೆಲುಗರಿರುವ ಪ್ರದೇಶಗಳನ್ನು ಆಂಧ್ರ ರಿಂದಕ್ಕೆಯ್ಯಲಡಿಸಲಾಗುವುದು ಭಾರತಸರ್ಕಾರ ಗಡಿ ನಿರ್ಧಾರ ಸಮಿತಿಯನ್ನು ಬಯಬೇಗ ನೇಮಿಸುವುದು ಮುಂದಿನ ಜುಲೈ ತಿಂಗಳಲ್ಲೇ ಆಂಧ್ರಪ್ರಾಂತ್ಯ ಜನ್ಮ ತಾಳುವುದು ವಾಂಚೂ ವರದಿ ನ್ಯಾಯಸಮ್ಮತ ವಾಗಿರುವುದು ' ಎಂದು ಪ್ರಜಾ ಸೋಷಿಯಲಿಸ್ಟ್ ನಾಯಕ ಶ್ರೀ ಟಿ ಪ್ರಕಾಶಂರವರು ವಿಜಯವಾಡದ ಬಹಿರಂಗ ಸಭೆಯಲ್ಲಿ ಮಾತನಾಡುತ್ತಾ ತಿಳಿಸಿದರು

ಹೊಸ ಪ್ರಾಂತ್ಯ ರಚನೆ ಕಹಿ ಭಾವನೆಗೆ ಎಡೆಕೊಡದಿರಲಿ

ಜನತೆಗೆ ಡಾ॥ ರಾಜೇಂದ್ರ ಪ್ರಸಾದರ ಕರೆ

ಹೊಸ ಸಂಸ್ಥಾನವೊಂದನ್ನು ರೂಪುಗೊಳಿಸುವಾಗ ಪರಸ್ಪರ ಸೌಹಾರ್ದ ಮತ್ತು ಸಹಾಯಕ ಮನೋಭಾವನೆ ರುವನ್ನು ನೆಲಬೆಸೆಯುವನ್ನೂ ವೈಕ್ಯಗೊಳಿಸುವುದು ಅಗತ್ಯ ಹೊಸಪ್ರಾಂತ್ಯದಲ್ಲಾಗಲೀ ಅಥವಾ ಹೊಸಪ್ರಾಂತ್ಯ ನೆರೆಪಕ್ಕ ಪೇಕೆ ಉಳಿಯುವ ಮೂಲ ಪ್ರಾಂತ್ಯದ ನಾಗರಿಕ್ಯಯಾಗಲೀ ಕಹಿ ಭಾವನೆಗಳಿಗೆ ಅವಕಾಶವಿಲ್ಲ ಎಂತೆ ನೋಡಿಕೊಳ್ಳಬೇಕು—ಎಂಬುದಾಗಿ ರಾಷ್ಟ್ರಪತಿ ಡಾ॥ ರಾಜೇಂದ್ರಪ್ರಸಾದರು ಮದರಾಸು ಕಾರ್ಪೋರೇಷನ್ ಭವನದಲ್ಲಿ ಏರ್ಪಡಿಸಿದ್ದ ಒಂದು ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಾ ತಿಳಿಸಿದರು

ಎಲ್ಲ ಭಾಷೆಗಳೂ ಬೆಳೆಯಲಿ

ರಾಷ್ಟ್ರಪತಿಗಳು ಅರ್ಥಗರ್ಭಿತ ಭಾಷಣವೊಂದನ್ನು ಮಾಡುತ್ತ ಅದರಲ್ಲಿ ಯಾವುದೇ ಪ್ರಾದೇಶಿಕ ಭಾಷೆಯ ಬೆಳವಣಿಗೆ ಕರುವೆ ಉದ್ದಿಶ್ಯವಿವೆಂದು ಸಾರಿದರು "ಇಡೀ ದೇಶಕ್ಕೆ ತಿಳಿಯುವ ಎಲ್ಲ ಭಾಷೆಗಳೂ ಬೆಳೆಯಬೇಕೆಂಬುದೇ ನಮ್ಮ ಉದ್ದಿಶ್ಯ ಹಿಂದಿಗೂ ಮತ್ತೊಂದು ಭಾಷೆಗೂ ಸ್ಪರ್ಧೆ ಇದ್ದರೆ ಆ ಭಾಷೆ ಇಂಗ್ಲಿಷ್ " ಎಂದರು

ವೇದಿಕೆಯ ಮೇಲೆ ಗೌರ್ನರ್ ಶ್ರೀ ಶ್ರೀ ಪ್ರಕಾಶ್ ಮತ್ತು ಮುಖ್ಯ ಮಂತ್ರಿ ಶ್ರೀ ಸಿ ರಾಜಗೋಪಾಲಾಚಾರಿಯವರು ಸಹ ಮಂಡಿಸಿದ್ದರು

ಆರಂಭದಲ್ಲಿ ರಾಜಾಜಿಯವರೆದ್ದು ಜಯಘೋಷಗಳ ಮಧ್ಯೆ ರಾಷ್ಟ್ರಪತಿಗಳಿಗೆ ಮದ್ರಾಸು ನಾಗರೀಕರ ಪರವಾಗಿ ಸುಸ್ವಾಗತ ನೀಡಿದರು

ಹೈದ್ರಾಬಾದ್ ಹೊಸ ಮಂತ್ರಿಮಂಡಲದ ಬಗ್ಗೆ ವಿಚಾರ

ಶ್ರೀ ಎಂ ಕೆ ವೆಲ್ಲೋಡಿಯವರು ಕೇಂದ್ರ ಗೃಹ ಶಾಖಾಸಚಿವ ಡಾ॥ ಕಟ್ಜುರವರನ್ನು ಭೇಟಿಮಾಡಿ ಹೈದ್ರಾಬಾದ್ ನೂತನ ಮಂತ್ರಿಮಂಡಲರಚನೆ ಬಗ್ಗೆ ಮಾತುಕತೆ ನಡೆಸಿದರೆಂದು ವರದಿಯಾಗಿದೆ ಇವರು ಪಂ॥ ನೆಹರೂರವರಲ್ಲಿ ಈ ಬಗ್ಗೆ ಮಾತುಕತೆ ನಡೆಸಿದ ರೆಂದು ಶೀಘ್ರ ವರದಿಯಾಗಿದೆ

ಪೆಪ್ಸು ರಾಜಕೀಯ ಬಿಕ್ಕಟ್ಟು ಉಗ್ರಸ್ಥಿತಿಯನ್ನು ಮುಟ್ಟಿದೆ

ಪೆಪ್ಸುವಿನಲ್ಲಿ ಮಂತ್ರಿಮಂಡಲದ ಬಿಕ್ಕಟ್ಟು ತೀರ ಉಗ್ರಪರಿಸ್ಥಿತಿಯನ್ನು ಮುಟ್ಟಿದೆಯೆಂದು ವಿಷಯಗಳನ್ನು ಒಳ್ಳ ಸ್ಪೇತ್ರಗಳಿಂದ ತಿಳಿದುಬಂದಿದೆ

ಆರುಮಂದಿ ಮಂತ್ರಿಗಳಲ್ಲಿ ಮೂವರ ಜುನಾವನೆಗಳು ಅಕ್ಸ್ವೀಕಾರವೆಂದು ಮೂಲಗಳಿಂದ ತಿಳಿದುಬಂದಿದೆ ೪ ನೇ ಯವರಾದ ಸರ್ದಾರ್ ಬಾರಾಸಿಂಗ್‌ರವರ ಮೇಲಿನ ಜುನಾವನೆ ಅಜಿ ಇನ್ನು ಇತ್ಯರ್ಥವಾಗಿಲ್ಲ ದಾರಾಸಿಂಗರನ್ನು ಬಿಟ್ಟರೆ ಇಬ್ಬರು ಮಂತ್ರಿಗಳ ಜುನಾವನೆಯನ್ನು ಮಾತ್ರ ಯಾರೂ ವಿರೋಧಿಸಿಲ್ಲವೆನಾಯಿತು ಈಗ ಒಟ್ಟು ೮ ಮಂದಿ ಸದಸ್ಯತ್ವವನ್ನು ಕಳೆದುಕೊಂಡಿರುವುದರಿಂದ ೭೦ ಮಂದಿ ಉಳ್ಳ ಸಭೆಯಲ್ಲಿ ಯುನೈಟೆಡ್ ಫ್ರಂಟ್ ಪಕ್ಷದವರಿಗೆ (ಅಡಳಿತ ನಡೆಸುತ್ತಿರುವ ಪಕ್ಷ) ೩೫ ಸ್ಥಾನಗಳೂ ಕಾಂಗ್ರೆಸ್ಸಿಗೆ ೩೩ ಸ್ಥಾನಗಳೂ, ಕವ ಸ್ವಿಪ್ಸುರಿಗೆ ೧ ಸ್ಥಾನಗಳೂ ಸ್ವತಂತ್ರರಿಗೆ ೨ ಸ್ಥಾನಗಳೂ ಇವೆ ಈಗಿನ ಮಂತ್ರಿಮಂಡಲ ಮುಂದೆ ಭದ್ರವಾಗಿದ್ದು ಕೆಲಸಮಾಡುವುದೇ ಎಂಬ ಶಂಕೆ ಮೂಡಿದೆ ಆದರೆ ಮಂತ್ರಿವಿಂಡಲವನ್ನು ರಚಿಸಲು ಸಾಕಾದಷ್ಟು ಸದಸ್ಯ ಬಲ ಕಾಂಗ್ರೆಸಿಗೆ ಇಲ್ಲ ಯಾವುದಾದರೊಂದು ಪಕ್ಷ ಭದ್ರವಾದ ಮಂತ್ರಿಮಂಡಲವನ್ನು ಸ್ಥಾಪಿಸಲು ಶಕ್ತ ವಾಗುವವರೆಗೆ ರಾಷ್ಟ್ರಾಧ್ಯಕ್ಷರ ಆಡಳಿತವನ್ನು ಜಾರಿ ತರಬೇಕೆಂದು ಹಲವರು ಸಲಹೆ ಮಾಡಿದ್ದಾರೆ

೯೦ ಬಾಂಬುಗಳನ್ನು ಹಾಕಲಾಯಿತು

ಅಮೇರಿಕನ್ ವಿಮಾನಗಳು ಉತ್ತರ ಕೊರಿಯದ ಮುಖ್ಯ ಸರಬರಾಯಿ ಕೇಂದ್ರ ಮೇಲೆ ೯೦ ಬಾಂಬು ಗಳನ್ನು ಸುರಿಸಿದವು

ಕೊರಿಯಾ ಕದನದಲ್ಲಿ ಗೆಲ್ಲುವುದು ಅಸಾಧ್ಯ

ಕೊರಿಯಾ ಕದನವನ್ನು ಗೆಲ್ಲುವುದು ಅಸಾಧ್ಯ ಪ್ರತ್ಯಕ್ಷದಲ್ಲಿ ಕೊರಿಯಾ ಬಿಕ್ಕಟ್ಟಿಗೆ ಸೂಕ್ತಪರಿಹಾರವೇ ಇಲ್ಲ ಈಗ ನಾವು ಮಾಡಬಹುದಾದ ಕಾರ್ಯವೆಂದರೆ ಈ ಪರಿಸ್ಥಿತಿಯಲ್ಲಿ ಜಲವಾದ ಸ್ಥಾನವನ್ನು ರಕ್ಷಿಸಿ ಕೊಂಡು ಬರಬಹುದೇ ಹೊರತು ಯುದ್ಧದಲ್ಲಿ ಗೆಲ್ಲುವುದು ಹಿಚ್ಚು ಕಡಿಮೆ ಅಸಂಭವ—ಎಂದು ಅಮೆರಿಕದ ವಿದೇಶಾಂಗ ನೈತಿಕರ ಸಮಿತಿಯ ಸದಸ್ಯರಾದ ಸೆನೆಟರ್ ರಾಬರ್ಟ್ ಟಾಫ್ಟ್‌ರವರು ಭಾಷಣವೊಂದರಲ್ಲಿ ತಿಳಿಸಿದ್ದಾರೆ.

ಕೆಲ್ಸವು ಮತ್ತೊಂದು ಯುದ್ಧ ಆರಂಭಿಸಲು

ಅವರು ತಮ್ಮ ಭಾಷಣವನ್ನು ಮುಂದುವರಿಸಿ "ರಷ್ಯವು ಮತ್ತೊಂದು ಮಹಾಯುದ್ಧವನ್ನು ರಂಭಿಸಲು ಯುದ್ಧವಿಲ್ಲದೆಯೇ ಹಲವು ಲಾಭಗಳನ್ನು ಮಾಡಿಕೊಳ್ಳುತ್ತಿದೆ ಅವರು ಮತ್ತೊಂದು ಯುದ್ಧಕ್ಕೆ ಕೈಹಾಕಿದಲ್ಲಿ ಕಮ್ಯೂನಿಸಂ ಪಾಶಕ್ಕೆ ಜಪಬಿಸಿದಂತಾಗಿ ವುದು' ಎಂದು ತಿಳಿಸಿದರು

ನಂಜುಂಡಯ್ಯ ಬಗ್ಗೆ

ಮಂಚೂರಿಯಾದಲ್ಲಿರುವ ಚೀನ ವಿದಾನದಳಕ್ಕೆ ರಷ್ಯಾ ಸಹಾಯವನ್ನಾಡುವುದಾದರೆ ವಿಶ್ವಸಂಸ್ಥೆಯು ಮಂಚೂರಿಯಾ ಮೇಲೆ ಧಾಳಮಾಡುವುದು ಖಂಡಿತ ನೆಂಬುದೇ ತಮ್ಮ ಅಭಿಪ್ರಾಯವೆಂದು ಟಾಫ್ಟ್ ತಿಳಿಸಿದರು

ಆಪ್ಪತ್ರೆಯಲ್ಲಿ ವಿಧಿಸಿದ್ದ ೧ ಆಣೆ ಶುಲ್ಕ ರದ್ದು

ಮೈಸೂರು ವಾಣಿವ್ಯಸಂಘದ ವಾರ್ಷಿಕೋತ್ಸವದಲ್ಲಿ ಮುಖ್ಯಮಂತ್ರಿಗಳಾದ ಶ್ರೀ ಕೆ ಹನುಮಂತಯ್ಯನವರು ಮಾತನಾಡುತ್ತ ಆಸ್ಪತ್ರೆಯಲ್ಲಿ ಇನ್ನು ಮುಂದೆ ಯಾರೂ ದಿನಕ್ಕೆ ಒಂದಾಣೆಯಂತೆ ಔಷಧಿಗೆ ದುಡ್ಡು ಕೊಡಬೇಕಾಗಿಲ್ಲ ಇತರ ಚಿಕಿತ್ಸಾ ಶುಲ್ಕಗಳನ್ನೂ ಬಹಳ ಕಡಮೆ ಮಾಡಲಾಗಿದೆ ಮೂರಾಣೆ ತೆರಿಗೆ ಬಗ್ಗೆ ಸರ್ಕಾರಕ್ಕೆ ವರದಿಮಾಡಲು ಒಂದು ಸಮಿತಿಯನ್ನು ರಚಿಸಿದ್ದೇವೆ ಅಗತ್ಯವೆನಿಂದು ತೋರಿದರೆ ಮೂರಾಣೆ ತೆರಿಗೆ ಸಂಪೂರ್ಣ ವಾಗಿ ತೆಗೆದುಹಾಕಲೂ ಸಿದ್ಧರಿದ್ದೇವೆ ಪ್ರಜಾರಾಜ್ಯದಲ್ಲಿ ಸತ್ಯಾಗ್ರಹ ಇತ್ಯಾದಿಗಳು ಉಚಿತವಲ್ಲ ಎಂದು ಹೇಳಿದರು

ವಿಂಧ್ಯಗಿರಿಮೇಲೆ ಮಸ್ತಕಾಭಿಷೇಕ

೧೩ ವರ್ಷಕ್ಕೊಮ್ಮೆ ಶ್ರವಣಬೆಳಗೊಳದಲ್ಲಿ ನಡೆಯುವ ಶ್ರೀ ಗೋಮಟೇಶ್ವರಸ್ವಾಮಿಯ ಮಹಾಮಸ್ತಕಾಭಿಷೇಕ ಮಹೋತ್ಸವದ ಪೂರ್ವಭಾವಿ ಪೂಜಾ, ಉಕ್ಷುವ ಕಾರ್ಯಗಳು ಆರಂಭವಾಗಿವೆ ಲಕ್ಷಾಂತರ ಮಂದಿ ಯಾತ್ರಿಕರು ಬರುತ್ತಿದ್ದಾರೆ ಸಾವಿರಾರು ವರ್ಷ ಹಿಂದಿನದೆಂದು ಹೇಳಲಾದ ೫೮ ಅಡಿ ಎತ್ತರವಿರುವ ಶ್ರೀ ಗೋಮಟೇಶ್ವರಸ್ವಾಮಿಗೆ ಮಾರ್ಚ್ ೫೫ ರಂದು ಮಹಾಮಸ್ತಕಾಭಿಷೇಕವು ವೈಭವದಿಂದ ನಡೆಯಲಿದೆ ಅಂದಿನ ಹೊತ್ತಿಗೆ ಕಡಿಯಪಕ್ಷ ೩ ಲಕ್ಷನಂದಿ ಇಲ್ಲಿಗೆ ಬಂಮು ಸೇರುವ ಸಂಭವವಿದೆ

ಸ್ವೀಕಾರ

ಧಾರವಾಡ ಡಿ॥ ಹೊಳಲೂರು ಗ್ರಾಮವಾಸಿಗಳಾದ ಶ್ರೀ ಕಲ್ಲಪ್ಪನವರು ಶಬ್ದಿಕೇರಿ ಇವರ ವಿವಾಹ ಸಮಯದಲ್ಲಿ ಪ್ರಭಾವೋಪನಿಷತ್ಕಾಲಿ ತೆಗೆಯಿಸಿದ 2-8-0 ರೂ ಗಳು ಕೊಣ್ಣೂರು ಹಿರೇಮಠದ ಶ್ರೀಗಳವರ ದ್ವಾರಾ ತಲ್ಪರಿಯತ್ತವೆ

ರಾಯಚೂರು ಜಿಲ್ಲಾ ಆನಕಗಿರಿಯಲ್ಲಿರುವ ವೇ॥ ಅಶ್ವತ್ಥಯ್ಯ ತಿಮ್ಮಪ್ಪನಾಳು ಇವರ ಪುತ್ರಿ ಚಿ॥ ಕುಂ॥ ಸೌ॥ ವಿವಾಹ ಸಮಾರಂಭದಲ್ಲಿ ಶ್ರೀ॥ ಜ್ಞಾ॥ ಬ್ರ॥ ಪಂಡಾಕ್ಷತಿವಾಚಾರ್ಯ ಮಹಾಸ್ವಾಮಿಗಳು ಹಿರೇಮಠ ಆನಕಗಿರಿ ವ.ಮೋದಯರು ವಧುವರರಿಂದ ತೆಗೆಸಿದ 2 ರೂಪಾಯಿಗಳು ವೇದಮೂರ್ತಿ ರಾಘೋಟಮ್ಮನವರು ಬಿಲ್ಲುಕೊಂಡಿಮಕ ಇವರ ದ್ವಾರಿ ತಲ್ಪರಿಯತ್ತವೆ

ಬೆಂಗಳೂರು ೩೬ ಆಜಾದ ನಗರದಲ್ಲಿರುವ ಶ್ರೀ ಎನ್ ಚಂದ್ರಶೇಖರಯ್ಯನವರ ಜೇಷ್ಠಪುತ್ರ ಚಿ॥ ಬಸವ ಏಗೆ ಹೋಳಿಯರು ಶ್ರೀ ವಿ ರುದ್ರಸ್ವಾಮಿಯವರ ಸುಪುತ್ರಿ ಕುಂ॥ ಸೌ॥ ಶಾರದೆಮ್ಮನವರು ಕೆಂಪಟ್ಟ ಜಾ॥ ೪-೩-೫೬ ನೇ ಭಾನುವಾರ ದಿವಸ ನಡೆದ ವಿವಾಹಸಮಯದಲ್ಲಿ ಪ್ರಭಾಪೋತೂಣಕ್ಕಾಗಿ ವರವ ಕಡೆಯಿಂದ ತೆಗೆಯಿಸಿದ 1 ರೂ ವಧುವಿನ ಕಡೆಯಿಂದ ತೆಗೆಯಿಸಿ 1 ರೂ ಅಂತು 2 ರೂ ಗಳು ಹೆಂಗಳೂರು ಟೈಪಸ್ಕೂಂಡಿರಿ ಶ್ರೀ ಇಂದ್ರಶೇಖರಪ್ಪನವರ ದ್ವಾರಾ ತಲ್ಪರಿಯತ್ತವೆ

ಈ ಮೇಲ್ಕಂಡ ಮಹಾಕಾಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನುಗೆಯಲಿಂ[illegible]

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮತಾಳಿರುವಮಾದಿದ ಪ್ರತಿಯೊಬ್ಬ ವಿಗೂ ಸಿದ್ಧಾಂತಶಿಖಾಮಣಿಗ್ರಂಥವು ಸ್ಥಾನಾದಂತಿರುವುದು ಈ ಪುಣ್ಯಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ಧಿತ್ಯಾರ್ಥವು ಅಗತ್ಯಮಹಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರ ಶೈವಮತದಲ್ಲಿ ಸಕ್ಷಃ ಜೊಯತ್ಕ ಗ್ರಂಥಗಳಲ್ಲೆಲ್ಲ ಇದೇ ಉಚು ಪ್ರಥಾಣಸಗ್ರಂಥವೆನಿಸಿಕೊಂಡು ಸೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು ೩೫೧೦ ವರ್ಷಗಳ ಪೂರ್ವದಲ್ಲಿದ್ದ ಶ್ರೀಚಿವಯೋಗಿಶಿವಾಚಾರ್ಯರಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವುದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಭೂತಗ್ರಂಥವೆಂದೂ ಹೇಳುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ವ್ಯಾಖ್ಯಾನವಲ್ಲದಿದ್ದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವನ್ನು ಬರೆಯಲು ಬಿಟ್ಟಿಲ್ಲ ಈ ಕಾರಣ ಮುನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವು ಹಿಂದೊಳಿದಮೇಲೆ ಗಂಡಿದರ ವಾಖ್ಯಾನದ ಮಹತ್ವವು ಪರಿಶೀಲಿಸಿದವರಿಗೆ ಅರಿವಾಗುವುದು ಇಂತಹ ಶ್ರಮವಹಿಸಿ ಸಿದ್ಧಾಂತಗ್ರಂಥವನ್ನು ಪ್ರಕಟಿಸಿರುವ ಶ್ರೀಮಾನ್ ಕೆ. ನಂಜುಮಯ್ಯನವರಿಗೆ ಸಮಸ್ತ ವೀರಶೈವರೂ ಕೃತಜ್ಞರಾಗಿರಬೇಕು ಈ ಗ್ರಂಥವು ಮುದ್ರಣಪ್ರಾರಂಭದಿಂದ ಸಂಪೂರ್ಣವಾಗಿ ಮುದ್ರಿಸಲ್ಪಟ್ಟಿದೆ ಈ ಗ್ರಂಥದಲ್ಲಿ ಸರ್ವಸಾಧಾರಣವಾಗಿ ಶ್ರೀಚಾರ್ಯರ ಶಿಲಾಕೃತಿಯ ಚಿತ್ರವನ್ನೂ ಹಾಕಿಸಲಾಗಿದೆ ಮತ್ತು ಅನೇಕ ಚಿತ್ರಗಳು ಜೀರ್ಣಿಸಲ್ಪಟ್ಟಿರುವ ಸಿದ್ಧಾಂತಶಿಖಾಮಣಿ ಗ್ರಂಥದ ಸೌಂದರ್ಯವನ್ನು ನೋಡಿ ಸಂತೋಷಪಡಲು ಈ ಗ್ರಂಥವನ್ನು ಕೊಂಡುಕೊಳ್ಳಬೇಕಾಗಿ ಕೋರುತ್ತೇವೆ ಈ ಗ್ರಂಥವನ್ನು ಕೊಳ್ಳುವಾಗ ಇತರ ಗ್ರಂಥಗಳನ್ನು ಕೊಳ್ಳುವವರಿಗೆ ಇತರ ಗ್ರಂಥಗಳನ್ನು ಕೊಳ್ಳುವಾಗ ಈ ಗ್ರಂಥವ

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯ ಪ್ರಸಿದ್ಧಂತು ॥ REGISTERED No. M 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಶೀಕಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋದಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು—ನಾಗನೂರು ಬೃಹನ್ಮಹಾದ್ಯಕ್ಷರಾದ ವೇ॥ ಪಂ॥ ಶ್ರೀ ಆತೀಶಾಸ್ತ್ರಶಾಸ್ತ್ರಿಗಳವರು.

ವಾರ್ಷಿಕ ಚಂದಾ ೩ ರೂ.] ಸಂಪಾದಕರು—ನಾಗನೂರು ಬೃಹನ್ಮಹಾದ್ಯಕ್ಷರಾದ ಶ್ರೀ ಮಹಾದೇವಯ್ಯನವರು [ಏ ಪಿ ಖರ್ಚು ಸೇರಿ ೩ ರೂ ೬ ಆ

ಸಂಪುಟ ೩೬] ಸೋಮವಾರ ತಾ॥ ೯ನೇ ಮಾರ್ಚಿ ೧೯೫೩ [ಸಂಚಿಕೆ ೪೩

ಪತ್ರುವ್ಯವಹಾರ

[ಚಾತ್ರೀದಾರರು ಆಫೀಸ್ಯಾ ಪಡುವ ಲೇಖನಗಳಲ್ಲಿ ಪತ್ರಿಕಾಕರ್ತರು ಜವಾಬ್ದಾರರಲ್ಲ ಎಂಬ ವಿಷಯವನ್ನು ವರ್ತರೂ ಲಕ್ಷ್ಯದಲ್ಲಿಡತಕ್ಕದ್ದು —ಸಂ]

ಶ್ರೀಮಜ್ಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವಗಳು

ಮಂಡಿಗಿನಾಳ

ದಿನಾಂಕ ೩೭-೨-೧೯೫೩ನೇ ಶುಕ್ರವಾರ ದಿವಸ ಧಾರವಾಡ ಜಿಲ್ಲಾಂತರ್ಗತ ಕುಂದಗೋಳ ಮಹಲ ಪೈಕಿ ಮಂಡಿಗಿನಾಳ ಹಿರೇಮಠದಲ್ಲಿ ಶ್ರೀಮಜ್ಜಗದ್ಗುರು ಅಭಿನವರೇಣುಕ ವಾಚನಾಲಯದ ವತಿಯಿಂದ ಶ್ರೀಮದ್ವೀರಶೈವ ಮಹಾಮಹಿಸ್ಯಾಪನಾಚಾರ್ಯರಾದ ಶ್ರೀಮಜ್ಜಗದ್ಗುರು ಪಂಚಾಚಾರ್ಯರಲ್ಲೊಬ್ಬರಾದ ಶ್ರೀಮಜ್ಜಗದ್ಗುರು ರೇಣುಕಾಚಾರ್ಯಾವತಾರರಾದ ಶ್ರೀ ಕೊಲ್ಲಿಪಾಕಿ ಸೋಮನಾಥ ತಿವಲಿಂಗದಿಂದವತರಿಸಿದ ಸುದಿನದ ಪುಣ್ಯಸ್ಮರಣಾರ್ಥವಾಗಿ ಪ್ರಾತಃ ಕಾಲದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಲಿಂಗೈಕ್ಯವಿ ಮಾರ್ತಿಗೆ ಶ್ರೀ ರುದ್ರಪೂಜೆಯು ವಿಧ್ಯುಕ್ತವಾಗಿ ನೆರವೇ॥ ನಿಜಲಿಂಗಯ್ಯನವರು ಹಿರೇಮಠ ಅತ್ತಿಗೇರಿ ಇವರಿಂದ ನೆರವೇರಿಸಲ್ಪಟ್ಟತು ತಂತರ ಶ್ರೀಜಗದಾಚಾರ್ಯರ ಸ್ತೋತ್ರ, ಭಜನೆ, ನಡಿವಳಿಗಳು ಮಹಾಮಂಗಳಗಳನ್ನು ತೆರೆದ ಭಕ್ತಮಾಹೇಶ್ವರರು ಕೊಂಡಾಡಿದರು ನಂತರ ತೀರ್ಥಪ್ರಸಾದಗಳು ನೆರವೇರಿದವು (ಶ್ರೀಗಣಾರಾಧನೆ ಭೂರಿದಕ್ಷಿಣೆಗಳು ಸಲ್ಲಿಸಲ್ಪಟ್ಟವು) ಸಾಯಂಕಾಲ ಶ್ರೀ ಜಗದಾಚಾರ್ಯರ ಲೀಲಾಭೋದಕ ಮಂಗಲಭಜನೆಯು ಬಹುಮನೋಹರವಾಗಿ ನೆರವೇರಿಸಲ್ಪಟ್ಟು, 'ಜೋಲೋ ಶ್ರೀಮಜ್ಜಗದ್ಗುರು ಪಂಚಾಚಾರ್ಯ ಮಹಾಪ್ರಾಜಕೆ ಜೈ' 'ಜೋಲೋ ಶ್ರೀಮಜ್ಜಗದ್ಗುರು ರೇಣುಕಾಚಾರ್ಯ ಮಹಾಪ್ರಾಜಕೆ ಜೈ' ಎಂಬ ಜಯಘೋಷಣೆಯೊಡನೆ ಸಭೆಯು ಮುಕ್ತಾಯಗೊಂಡಿತು

ಓರ್ವ ಗುರುಭಕ್ತ

ಗದಗ

ಪ್ರತಿವರ್ಷ ಪದ್ಧತಿಯಂತೆ ಈ ವರ್ಷವೂ ಕೂಡ ಗದಗ ವಲ್ಲಭಿಗೇರಿ ಶ್ರೀ ರಾಮೋಜಿ ವೀರಭದ್ರೇಶ್ವರರಿಗೆ ವೇದೋಕ್ತ ರುದ್ರಾಭಿಷೇಕಪೂರ್ವಾದಿಕಾರ್ಯಗಳು ತಾ॥ ೩೭-೨-೫೩ ನೇ ಬೆಳಿಗ್ಗೆ ಬ್ರಹ್ಮಮುಹೂರ್ತದಲ್ಲಿ ಜರಿಗಿ ತಂತರ ಸಾಯಂಕಾಲ ೬ ಘಂಟೆಗೆ ಶ್ರೀ ರೇಣುಕ ಲಿಂಗೋದ್ಭವಮೂರ್ತಿಯನ್ನು ಹಲಯ ಧಂಡಿಯ ಮೇಲೆ ಮಲ್ಲಿಗೆ, ಸಂಪಿಗೆ, ಸಾವಂತಿಗೆ ಇತ್ಯಾದಿ ಪುಷ್ಪ ಗಳಿಂದ ತಯಾರಿಸಿದ ಆಮಾಸುಗಳಿಂದ ಶೃಂಗರಿಸಿದ ಮಂಟಪದಲ್ಲಿ ಮುಹೂರ್ತಗೊಳಿಸಿ ೧೦೧ ಎತ್ತಿನ ಮೆರ ವಣಿಗೆಯು ಮೇಳ್ಯಾಳ ವೀರಭದ್ರೇಶ್ವರಸ್ವಾಮಿಯಿಂದ ಬ್ಯಾಂಡ್ ರೊಳ್ಳು, ಕಹಳೆ ಒಜೇಂತ್ರಿ ಅನೇಕ ವಾದ್ಯ ಗಳಿಂದಲೂ ವಿವಿಧ ಒಣ್ಣಾದ ಗ್ಯಾಸುಒತ್ತಿಗಳಿಂದಲೂ ಹೊರಟು ನಗರದ ಮುಖ್ಯ ಮುಖ್ಯ ಬೀದಿಗಳಲ್ಲಿ ಹಾಯ್ದು ಮರಳಿ ಉತ್ಸವವು ದೇವಸ್ಥಾನಕ್ಕೆ ತಲ್ಪಿತು ಈ ಉತ್ಸವದಲ್ಲಿ ಭಕ್ತಮಾಹೇಶ್ವರಾದಿಯಾಗಿ ಯಾವತ್ತು ಶ್ರೀ ಪುರುಷರು ಬಾಲ ಬುಲಿಕೆಯರು ಶ್ರೀ ಜ॥ ರೇಣು ಕರ ಸುಂದರ ಮೂರ್ತಿಯನ್ನು ಕಣ್ಣಾರೆತುಂಬ ನೋಡುತ್ತ ನಲಿಯುತ್ತ ಆನಂದಪರವಶ ತ್ತ ಶ್ರೀ ಜ॥ ಪಂಚಾಚಾರ್ಯರ ಜಯಘೋಷ ಮಾಡುತ್ತ ಹೊರಟ ಮೆರವಣಿಗೆಯನ್ನು ನೋಡಿದರೆ ಸ ಕ್ಷಾತ್ ಶ್ರೀ॥ ರೇಣುಕರೇ ಭೂಲೋಕ ದವ್ವಿ ಕೊಲ್ಲಿಪಾಕಿಕ್ಷೇತ್ರ ಸೋಮನಂಡಳಿಂಗಸೊಳುದ್ಭವಿಸಿ ಜಗತ್ತಿನಲ್ಲಿ ತಮ್ಮ ಅಪಾರ ಮಹಿಮೆಗಳನ್ನು ತೋರಿದ ದಿವ್ಯಜ್ಯೋತಿಯೇನೋ' ಎನ್ನುವಂತೆ ಭಾಸವಾಗುತ್ತಿತ್ತು ಇದೇ ಪ್ರಕಾರವಾಗಿ ಇನ್ನು ಹಳ್ಳಿ ಪಟ್ಟಣಗಳಲ್ಲಿ ಶ್ರೀ ರೇಣುಕಾದಿ ಪಂಚಾಚಾರ್ಯರ ಜಯಂತೀಮಹೋತ್ಸವ ಗಳು ಜರುಗಿಸಿ ಗುರ ಕೃಪೆಗೆ ಪಾತ್ರರಾಗಿ ಧನ್ಯರಾಗ ಬೇಕಾಗಿ ನನ್ನ ನಮ್ರ ಸೂಚನೆ

ಬಸವಗೌಡಾ ದೊಡ್ಡನಗೌಡಾ ರಾಮಪಗೌಡ್ರ
(ತೊಂಡಿಹಾಳ) ಸಾ॥ ಗದಗ

ವೀರಶೈವರ ಸುಧಾರಣ ಸಂಘ, ಹರಿಹರ

ಮೇಲ್ಕಂಡ ಸಂಘದವರಿಂದ ತಾ॥ ೨೭-೨-೫೩ ರಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತ್ಯುತ್ಸವ ವೆನ್ನು ಅತ್ಯಂತ ಸೈಭವದಿಂದ ಆಚರಿಸಲ್ಪಟ್ಟಿತು ಬೆಳಿಗ್ಗೆ ಹಳೆಯಪೇಟೆ ಬಸವೇಶ್ವರ ದೇವಸ್ಥಾನದಲ್ಲಿ ಶ್ರೀ ರೇಣುಕಾಚಾರ್ಯರಿಗೆ ರುದ್ರಾಭಿಷೇಕ ಮಾಡಿಸಿ ಅಲಂಕರಿಸಿದ ಪಲ್ಲಕ್ಕಿಯಲ್ಲಿ ರೇಣುಕಾಚಾರ್ಯರ ಮೂರ್ತಿಯನ್ನಿಟ್ಟು ಊರಿನ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಯಿತು ಭಕ್ತರು ತಮ್ಮ ಮನೆಗಳ ಮುಂದೆ ಆರತಿ ಅಕ್ಷತೆ ಹಣ್ಣುಕಾಯಿ ಮೊದಲಾದವು ಗಳಿಂದ ಸೇವೆ ಸಲ್ಲಿಸಿದರು ಉತ್ಸವವು ಊರ ಮುಂದಿನ ಸರ್ಕಲ್ಲಿಗೆ ಬಂದಾಗ್ಗೆ ಪ್ರಯಾಣಸ್ತೆರಾದ ಶ್ರೀ ರಂಭಾಪುರಿ ಜಗದ್ಗುರುಗಳ ಸವಾರಿಯು ಅಕಸ್ಮಾತ್ತಾಗಿ ಸಂಧಿಸಿ ಭಕ್ತರಿಗೆ ದರ್ಶನ ಆಶೀರ್ವಾದಮಾಡಿ ಮುಂದಕ್ಕೆ ಪ್ರಯಾಣ ಮಾಡಿದರು ಇದು ಒಂದು ಮುಖ್ಯವಾದ ಸುಯೋಗದ ಘಟನೆ ನಡೆದದ್ದು ಸೇರಿದ್ದ ಭಕ್ತಾದಿಗಳಿಗೆ ಒಳ್ಳೆ ಸಂತೋಷವಾಯಿತು

ಸಾಯಂಕಾಲ ಶ್ರೀ ವಿರಕ್ತಮಠದಲ್ಲಿ ಶ್ರೀ ಜೊಸ ಮಠದ ಹಂದ್ರಕೀಲಾರಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಶ್ರೀ ಜಗದ್ಗುರು ರೇಣುಕಾಚಾರ್ಯರ ವಿಷಯದಲ್ಲಿ ಭಕ್ತಿಪೂರ್ಣ ಭಾಷಣಗಳು ಆದವು ಅಧ್ಯಕ್ಷರ ಮುಖ್ಯಾಭಿಪ್ರಾಯಣಾದಮೇಲೆ ಪ್ರತಿವರ್ಷ ತಿವಾಹುದರ ಗೋಷ್ಠಿ ಪಡೆಯಬೇಕೆಂಬ ನಿರ್ಧಾರವಿದರು ಭಕ್ತರನೇ ಕರು ಅಕ್ಷರಿಗೆ ತಮ್ಮ ಹಂಚಾಮೊಳಲಗಮ್ಮ ಕೊಟ್ಟರು

ಜೆಜ್. ಪಿ. ಚಿಕ್ಕಪ್ಪ ಗೌ॥ ಕಾರ್ಯದರ್ಶಿ.

ಶಿವಸ್ತ್ರಸನ್ನೆ ಸ್ತವನಂ

ಲೇ—ನೇವಲ್ಯೂರ್ ಶ್ರವಥ, ಮರ್ಜಾಪುರ

(ಅಂದಿನಿಂದ ನುಂಮವರೆದುದು)

ಸ್ಯೈವ ಕಾಶೀಶಾಕ್ಷ ಶೈಲಣ ।
ಸ್ಯೇಮಶೀಖರ ಲಿ ಗ ಜಂಗಮ ।
ಧಾಮ ಕೈಲಾಸಾದ್ರಿ ಶೈಮವಪೀಠ ! ಸತ್ಯಾತ್ಮನ್ ॥
ಭೀಮ ! ಧಾತ್ಮರ ! ಪ್ರೇಮಕುಂಭ ।
ಣ್ಯಾತ್ಮ ತಾಪೋಯೋಗ್ಯ ವಂದೇ ।
ನಾವದೇಪೇಶಾನ ! ಸರ್ವೋತ್ತಾಕ ! ತಕ್ಷುರುಷ ॥೭॥

ಅಲಿಸುವ ಬಿಲಪ್ರಮಿಯಲಾರದು ।
ಕೇಳ್ವಿಂದ್ರಿಯ ಕಾಣಲೆಲ್ಲಿದು ।
ಪೇಳುವಾಯ್ ತಾನು ದರ್ಶನಸ್ತವಣ ಮಾಡದಲಾ॥
ಪೇಳಲೆಬೇಕೆನೆ ಧರ್ಮಸಂಕಟ ।
ಹೇಳದಿರೆ ವರಮದಕಟುಚಿಪ್ಪೆಯು ।
ಧಾಲಬಾಲೇಂದುಧರ ಸಲಹೈ ಪೇಳಕೇಳ್ವಧರಿಂ ॥೮॥

ನೀತಿನೆರೆಯೊಳು ನಡೆಯುರೈ ಸುಪು ।
ನೀತನೆರೆಯೊಳು ನೆರೆಬಿದ್ದೆ ನವ ।
ನೀತವಾಕ್ಯವ ನುಡಿಯುರೈ ಶಿವಪ್ಯಾನರತಯೆಂಡೆ ॥
ಪ್ಯಾತಿಭೂತವ ತೊಡೆಯುರೈ ಭೆನೆ ।
ವೀತರಾಗಾಯಣ ಹಿಡಿಯುರೈ ।
ಭೂತಪಾವನ ಪಾರ್ವತೀಶನ ಭಜಿಸುರೈ ಪ್ರಮುತ ॥೯॥

ಶಿವನಲೈಯ ಪಡೆಯಲೋಸುಗ ।
ಜವವಭೀತಿಯ ನೀಗಲೋಸುಗ ।
ಭವಬಂಧನಕರ ಗುರುವರೊರೆಂ ತಪವುಮಾಗಿರಲು ॥
ಜೀವಜೀವನ ಲಕ್ಷ್ಯದೋರುವ
ಜೀವತಿವರೋಭೇದಭಾವವ ।
ಸೈವತಕ್ರತ್ವತ ದೇರೆಯಲ್ಲವು ಗುರುವೆ ಪರತಕ್ತ್ವ ॥೧೦॥

ಮಂಗಳಮಯ ಮಹಾತಮೋಹರ ।
ಮಂಗಳಮಯ ಮಹಾತಿವಂಕರ ! ।
ಮಂಗಳಾಂಗ ತಿವಾಂಗ ಗಂಗಾಧರ ಶುಕಂಗಧರ ! ॥
ಮಂಗಳೇಶ ! ಮಹೇಶ ! ಶಂಕರ ! ।
ಮಂಗಳೋಮಾಧವ ! ವಿಧೀಶ್ವರ ! ।
ಮಂಗಳ ಹರೀಶ್ವರ ಪರಾತ್ಪರತರ ಮಹಪ್ರದಮಸ್ತ ॥೧೧॥

ನೀರಿತಿನೆ ನಾವಿಳರು ಪಾತ್ರಾ ।
ಕಾರಣಿಂ ಇಲಭಿಮೊಳು ಹಲುಬುತ ।
ನೀರುಪಾರೆಂಬುದು ಯೋಗಭ್ರಷ್ಟಚಲಾ ॥
ತೋರುತಿಪ್ಪುದು ತತ್ತ್ವವೆಲ್ಲವೆ ।
ಸಾರವಾತ್ತಿಕೆ 'ಪ್ರಮಥ' ಣಾ ಣಾ ।
ಯಾಲಯಿವೆಪು ತಲೆಯೊ ಮೃತ್ಯುಂಜಯಜೆ ಮಾಹೇಶ
॥೧೨॥

ಪಂಚಾಚಾರ್ಯಪ್ರಭಾ

ಗ್ರಂಥವು ಸೋಮವಾರ

ಭಸ್ಮಧಾರಣ.

ವಿಭೂತಿರ್ಯಸ್ಯನೋಫಾಲೇ ಕಂಠೇ ಪದ್ಮಾಕ್ಷಮಾಲಿಕಾ।
ಮುಖೇಸಂಜಾಕ್ಷರೋಮಂತ್ರಸ್ತಂ ವಂದೇದಂತ್ಯಜಂಯಥಾ।

ಯಾವನ ಹಣೆಯಲ್ಲಿ ಭಸ್ಮವಿಲ್ಲವೋ, ಕಂಠದಲ್ಲಿ ರುದ್ರಾಕ್ಷ ಮಾಲಿಕೆಯಿಲ್ಲವೋ, ಮುಖದಲ್ಲಿ ಪಂಚಾಕ್ಷರೀ ಮಂತ್ರವಿಲ್ಲವೋ ಅವನನ್ನು ಅಂತ್ಯಜನಂತೆ ದೂರೀಕರಿಸ ತಕ್ಕದೆಂದು ಶಿವಾಗಮಗಳು ನಿರ್ದೇಶಿಸಿರುವುವು ಯಾವನು ಭಸ್ಮತ್ರಿಪುಂಡ್ರವನ್ನು ಅನವರತವೂ ಧರಿಸುತ್ತಿರುವನೋ ಅವನು ವಿದ್ಯಾಂಸನಾಗಿರಲಿ, ಬ್ರಹ್ಮಚಾರಿಯಾಗಿರಲಿ, ಗೃಹಸ್ಥನಾಗಿರಲಿ, ವಾನಪ್ರಸ್ಥನಾಗಿರಲಿ, ಸನ್ಯಾಸಿಯಾಗಿರಲಿ ಪ್ರತಿಬಿಂಬ್ಬನೂ ಸಮಸ್ತಪಾಪ ಗಳಿಂದಲೂ ಉಪಪಾಪಗಳಿಂದಲೂ ಬಿಡಲ್ಪಡುವನೆಲ್ಲದೆ ಸರ್ವದೇವತೆಗಳ ಧ್ಯಾನವನ್ನು ಮಾಡಿದವನಾಗಿಯೂ, ಸರ್ವತೀರ್ಥಗಳಲ್ಲಿ ಸ್ನಾನಮಾಡಿದವನಾಗಿಯೂ ಆಗುತ್ತಾನೆಂದು ಕಾಲಾಗ್ನಿರುದ್ರೋಪನಿಷತ್ತಿನಲ್ಲಿ ಬಸ್ಮಧಾರಣದ ಫಲವು ಹೇಳಲ್ಪಟ್ಟಿರುತ್ತದೆ ಹೀಗೆ ವೇದೋಕ್ತವಾದ ವಿಭೂತಿಧಾರಣವೆಂಬ ವಿಧಿಯು ನಿತ್ಯವಿಧಿಯಾಗಿರುವುದರಿಂದ ವೀರಶೈವಮತಾವಲಂಬಿಗಳೆಲ್ಲರೂ ಶಿರಸ್ಸು ಹಣೆ ಹೃತ್ಪಾತ್ರೆದ್ವಯ, ಕಂಠ ಭುಜದ್ವಯ, ಹೃದಯ ನಾಭಿ ಪೃಷ್ಠ, ಬಾಹುದ್ವಯ, ಹೆಕ್ಕಸ್ತು, ಮುಂಗೈಗಳು ಹೀಗೆ ಹದಿನೈದು ಸ್ಥಾನಗಳಲ್ಲಿ ವಿಧಿಯಲ್ಲ ಹೇಳಿದ ಪ್ರಕಾರ ಆಯಾಯ ಮಂತ್ರಗಳಿಂದ ವಿಭೂತಿಯನ್ನು ಧರಿಸ ತಕ್ಕದ್ದು ಇಷ್ಟೆರಲು, ಕೆರೆಬೆರಳುಗಳನ್ನು ಬಿಟ್ಟು ಮಿಕ್ಕ ಮೂರು ಬೆರಳುಗಳಿಂದ ಆದು ಕಿಂಚಿಲದನ್ನು ಉದ್ದವಾಗಿ ಭಸ್ಮವನ್ನು ಧರಿಸಬೇಕೆ ದೆ ರೇಣುಕಪಗ ವೆತ್ಪಾದರು ಭಸ್ಮಧಾರಣವಿಧಿಸ್ನ ಸಿದ್ಧಾಂತಶಿಖಾ ಮಣಿಯಲ್ಲಿ ಆಗಸ್ತ ಮಹರ್ಷಿಗಳಿಗೆ ಎತದವಾಗಿ ಬೋಧಿಸಿದ್ದಾರೆ ಸ್ಕಂದಪುರಾಣದಲ್ಲಿ ವೀರಶೈವಜಂಗಮನು ಭಸ್ಮಧಾರಣದಲ್ಲಿ ಆಸಕ್ತನಾಗಿದ್ದರೂ ಅನೇಕರು ಯಾವ ಯಾವ ಬೆರಳುಗಳಿಂದ ವಿಭೂತಿಯನ್ನು ಧರಿಸ ಬೇಕೋ ಯಾವ ಸ್ಥಳದಲ್ಲಿ ಧರಿಸುವಾಗ ಯಾವ ಮಂತ್ರ ಗಳನ್ನು ಚಿರಿಸಬೇಕೋ ಎಂಬುದೂ ಗೊತ್ತಿಲ್ಲದ ಮೂಢಭಕ್ತೆಯಿಂದ ಸ್ವೇಚ್ಛೆಯಾಗಿ ಭಸ್ಮವನ್ನು ಧರಿಸಿ ಕೊಳ್ಳುತ್ತಿರುವರು ಹೀಗೆ ಶಾಸ್ತ್ರನಿಯಮವನ್ನು ಮೀರಿ ಭಸ್ಮಮಂಂಣನವನ್ನು ಮಾಡುವುದರಿಂದ ಲಾಭವಿಲ್ಲದ ವ್ಯಾಪಾರದಂತೆ ಪ್ರಯೋಜನವಿಲ್ಲದಂತಾಗುವುದು ಮತ್ತು ವೀರಶೈವನ್ಯತ್ಯಯದಲ್ಲಿ ನಾಗಿರಲು. ಅಶಿಕ್ಷಿತರಿರಿ ವುದರಿಂದ ತಾವು ಭಸ್ಮವನ್ನು ಹೇಗೆ ಧರಿಸಬೇಕೆಂಬುದನ್ನು ತಿಳಿಯದೆ ಆಂಗುಲಿಗಳ ನಿಯಮವಿಲ್ಲದೆ ಎರಡು ಬೆರಳು ಗಳಿಂದಲೂ ಒಂದು ಬೆರಳಿನಿಂದಲೂ ವಿಭೂತಿಯನ್ನು ಧರಿಸುತ್ತಿರುವರು ಸ್ನಾನಾದಿಗಳಿಂದ ಪರಿಶುದ್ಧರಾದೆ ಆಸನದ ಮೇಲೆ ಕುಳಿತುಕೊಳ್ಳದೆ ನಿಂತ ಲ್ಲಿಯೇ ಕುಳತಲ್ಲಿಯೇ ಮಂತ್ರತಂತ್ರವ್ಯವಾಗಿ ಕ್ರಮದಪ್ಪಿ ವಿಭೂತಿಯನ್ನು ಧರಿಸುವುದೂ ಉಂಟು ಶಾಸ್ತ್ರನಿಯಮ ಗಳಿಗನುಸಾರವಾಗಿ ಭಸ್ಮವಂ ಪೂಜಿಸಿ ಅದಕ್ಕೆ ಪ್ರಣಾ ಸಂಒಂಭವಂ ಮಾಡಿ ಪ್ರಥಮತಃ ಭಸ್ಮಸ್ನಾನವನ್ನು ಮಾಡಿ ಬಳಿಕ ಭಸ್ಮೋದ್ಧೂಳನವನ್ನು ಮಾಡಿ ತದು ನಂತರ ೧೫ ಸ್ನಾನಗಳಲ್ಲಿ ತ್ರಿಪುಂಡ್ರವನ್ನು ಧರಿಸತಕ್ಕದ್ದು ಇವುಗಳಲ್ಲಿ ಭಸ್ಮಸ್ನಾನಕ್ಕೆಂತಲೂ ಭಸ್ಮೋದ್ಧೂಳನವು ವಿಶೇಷ ಫಲಪ್ರದವಾಗಿದೆ ಅದಕ್ಕಿಂತಲೂ ಭಸ್ಮತ್ರಿಪುಂಡ್ರ ಧಾರಣವು ವಿಶೇಷ ಫಲಪ್ರದವೆಂದು ಸಿದ್ಧಾಂತದಲ್ಲಿ ಹೇಳ ಲ್ಪಟ್ಟಿರುವುದರಿಂದ ವಿಭೂತಿಯ ತ್ರಿಪುಂಡ್ರವನ್ನು ಪ್ರಾತಃ ಕಾಲ ಮಧ್ಯಾಹ್ನ ಸಂಧ್ಯಾ ಕಃ ಮೂರು ಕಾಲಗಳಲ್ಲಿಯೂ ಕ್ರಮದಿಂ ಧರಿಸುತ್ತಿರುವುದು ವೀರಶೈವರಿಗೆ ಮುಖ್ಯ ಧರ್ಮವಾಗಿರುವುದು. ಹೀಗಿದ್ದರೂ ಕೆಲವೆಡೆಯಲ್ಲಿ ಅರ್ಧ ಸುಧಾರಕರಾದ ಸ್ತ್ರೀಪುರುಷರು ವಿಭೂತಿಯನ್ನು ಹಣೆ ಯಲ್ಲಿ ಧರಿಸಲು ಅಸಹ್ಯಪಡುತ್ತಲಿರುವುದನ್ನು ನೋಡಿ ದರೆ ಕಲಿಧರ್ಮದ ಪ್ರಾಬಲ್ಯವನ್ನು ಎತ್ತುವಡಿಸಿದಂತೆ ತೀರದಾಗಿದೆ. ಮೋಕ್ಷದಾಯಕವೂ ಪಾಪಸಂಹಾರಕವೂ ಆಲಂಕಾರ ಜನಕವೂ ಆರೋಗ್ಯಸಾಧಕವೂ ಆದ ತಂತಹ ವಿಭೂತಿಯ ವಿಷಯದಲ್ಲಿ ಯಾರಿಗೆ ಆಲಸ್ಯಬುದ್ಧಿ ಯುಂಟಾಗಿರುವುದೋ ಅದು ಅವರ ಪಾಪಕರ್ಮದ ಫಲ ವೆಂದೇ ಹೇಳಬೇಕಾಗಿದೆ ನಮ್ಮ ಭರತಖಂಂಡದಲ್ಲಿ ಅನೇಕ ಪೂರ್ವಾಚಾರ್ಯರು ವೇದಾಗಮ ಪ್ರಮಾಣಗಳ ಆಧಾ ರದ ಮೇಲೆ ಅನೇಕ ಮತಗಳನ್ನು ಸ್ಥಾಪಿಸಿರುತ್ತಾರೆ. ಪ್ರತಿಯೊಬ್ಬ ಪೂರ್ವಾಚಾರ್ಯರೂ ತಾವು ಸ್ಥಾಪಿಸಿದ ಮತಗಳನ್ನು ಆಸಲಂಬಿಸಿದ ಮಾನವರಲ್ಲಿ ಒಂದೊಂದು ಹೆಗ್ಗುರುತನ್ನು ಕಲ್ಪಿಸಿರುವರು. ಆಯಾಯ ಹೆಗ್ಗುರುತು ಗಳನ್ನು ನೋಡಿದವನಾತ್ಮದಿಂದಲೇ ಇವರು ಶಿವಾರಾಧಕರೆಂದು ಇವರು ವಿಷ್ಣುವಿನಾರಾಧಕರೆಂದೂ ಯಾರಿಂದಲೂ ಹೇಳಲ್ಪಡದಿದ್ದರೂ ತಾನಾಗಿಯೇ ಒಡೆದು ಕಾಣುತ್ತದೆ ಊರ್ಧ್ವತ್ರಿಪುಂಡ್ರವು ಶ್ರೀವೈಷ್ಣವ ಮತಸ್ಥಾಪಕರಾದ ರಾಮಾನುಜಾಚಾರ್ಯರ ಯಶೋಧೇ ಜವನ್ನು ಸೂಚಿ ಸುತ್ತದೆ ಶಂಖಾದಿ ಮುದ್ರೆಗಳು ವೈಷ್ಣವಮತಸ್ಥಾಪಕ ರಾದ ಮಧ್ವಾಚಾರ್ಯರ ಕೀರ್ತಿಧ್ವಜವನ್ನು ಸೂಚಿ ಸುತ್ತವೆ ಭಸ್ಮತ್ರಿಪುಂಡ್ರವು ಶೈವಮತಸ್ಥಾಪಕರಾದ ಶ್ರೀ ರೇಣುಕಾದಿ ಪಂಚಾಚಾರ್ಯರ ಕೀರ್ತಿಪತಾಕೆಯನ್ನು ಸೂಚಿಸುತ್ತದೆ ಸೂರ್ಯ ವರ್ಚಾಯರು ಜಗನ್ನಿಯಾಮಕ ನಾದ ಪರಮೇಶ್ವರನಲ್ಲಿ ಮಾನವರೆಲ್ಲರೂ ಸೇರುವು ದೊಂದೇ ಮಖ್ಯ ದೇಯವಾಗಿರುವುದರಿಂದ ಎಲ್ಲರೂ ದೈಯವಸ್ಪ್ಪ ಕೈವಿದ್ದರೂ ಮುಕ್ತಿಮಾರ್ಗಗಳು ಏನೆಂಬವರ್ಗಗಾಗಿರುವುದರಿಂದಲೂ ಆಯಾಯ ಪ್ರಾಣಿ ಗಳ ಸಂಸ್ಕಾರಗುಣಾನುಗುಣವಾಗಿ ಅಭ್ಯಾಸ ಸಾಮರ್ಥ್ಯದಿಂದ ಒಂದೊಂದ ಮಾರ್ಗದಲ್ಲಿ ಒಬ್ಬಬ್ಬರಿಗೆ ವಿಶೇಷ ಅಭಿ ರುಚಿಯಿರುವದರಿಂದಲೂ ಒಬ್ಬಬ್ಬ ಪೂರ್ವಾಚಾರ್ಯರು ಒಂದೊಂದು ಅವಾಸನಾಮಾರ್ಗವನ್ನು ಸ್ಥಾಪಿಸಿ ತಮ್ಮ ತಮ್ಮ ಮತಗಳಿಗೆ ಒಂಂದು ಹೆಗ್ಗುರುತನ್ನು ಮಾಡಿ ರುವರು ಆ ಹೆಗ್ಗುರು ತ್ವವು ನಿರ್ವಿವಾದನೆಯೇ ಇವರು ಇಂತಹ ಆಚಾರ್ಯ ಸಾಂಪ್ರದಾಯಕರೆಂದ. ಕಂಡು ಹಿಡಿಯಬಹುದಾಗಿದೆ ಆ ಪೂರ್ವಾಚಾರ್ಯರು ಆಜ್ಞೆಯನ್ನು ಲ್ಲ ಸಿಸದ ತವ್ಯ ತನ್ನ ಮತದ ಇ ಜ್ಯ ಚಿಹ್ನೆ ಪನ್ನು ಹಣೆ ಯಲ್ಲಿ ಧರಿಸಕ್ಕದ್ದೆ ಅತ್ಯಕಪಂ ನಿಯಾಯಿಗಳ ಧರ್ಮವಾಗಿರುವುದರಿಂದ ವೀರಶೈವಮತವು ಪ್ರಾಚೀನ ಕಾಲದಿಂದ ಪ್ರಚಲಿತವಾಗಿರುವುದಕ್ಕೆ ಈ ಭಸ್ಮತ್ರಿಪುಂಡ್ರವೇ ಮುಖ್ಯ ಪ್ರಮಾಣವಾಗಿದೆ ಆಚಾರ್ಯರು ಭಸ್ಮತ್ರಿಪುಂಡ್ರವನ್ನು ಧರಿಸುವ ಫಲದಲ್ಲಿ ಸೇರಿದವರೆಂದು ಹೇಳಿದ್ದಾರೆ ಆದ್ದರಿಂದ ಪ್ರತಿಯೊಬ್ಬ ವೀರಶೈವಮತದ ಬಾಲಕ ಯಿಗಾಲಿ ಬಾಲಕನಾಗಲಿ ಪುರುಷನಾಗಲಿ ಸ್ತ್ರೀಯಾಗಲಿ ಎಲ್ಲರೂ ಪಾಲದೊಳ್ ಭಸ್ಮತ್ರಿಪುಂಡ್ರವನ್ನು ಕ್ರಮದಪ್ಪದೆ ಅನವರತವೂ ಧರಿಸಿ ಶ್ರೀ ಭಗವತ್ಪಾದರ ಆಶೀರ್ವಾದಕ್ಕೆ ಪಾತ್ರರಾಗಬೇಕೆಂದು ಕೋರುತ್ತೇನೆ

ಚಿಕ್ಕಮಗಳೂರು ಶ್ರೀಗಳವರ ಧರ್ಮೋಪದೇಶ
ಚಿಂಚಲಿ

ಧಾರವಾಡ ಜಿಲ್ಲಾ ಗದಗ ತಾಲೂಕ ಸೈಕಿ ಚಿಂಚಲಿ ಗ್ರಾಮಕ್ಕೆ ಗದಗ ಶ್ರೀ ಜಗದ್ಗುರು ರೇಣುಕಾಚಾರ್ಯ ಮಂದಿರ ಸಂಸ್ಥಾಪಕರಾದ ಧರ್ಮಭೋಧಕರೂ ಮಂದಿರ ಆಜಾರ್ಯತತ್ವವ್ರತಚಾರಕರಾದ ಶ್ರೀ ಷ ಬ್ರ ಜಗ ದ್ಗುರು ಶ್ರೀ ರೇಣಾಚಾರ್ಯ ಶಿವಾಚಾರ್ಯ ಮಹಾಸ್ವಾಮಿಗಳವರು ತಾ೧೮-೨-೨೫ನೇ ದಿವಸ ದಯಮಾಡಿಸಿದರು ಮಹಾ ಸ್ವಾಮಿಗಳವರ ಅದ್ಧಸ್ತತೆಯಲ್ಲಿ ಸಭೆಯು ನಡೆಯಿತು ಸ್ಥಳೀಯ ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾ ಸಂಘದವರು ಪರಮಾವಧಿ ಆನಂದವಾಗುವಂತೆ ಭಜನೆ ಯನ್ನು ಮಾಡಿದ ಬಳಿಕ ಮಹಾಸ್ವಾಮಿಗಳವರು ಸಂಗ್ರಹದೊಡನೆ ಭೋಧಮಾತಿದ ವಿಷಯವೇನೆಂದರೆ, ಸಕಲ ಪ್ರಾಣಿಗಳಲ್ಲಿ ಮನುಷ್ಯ ಜನ್ಮವೇ ಶ್ರೇಷ್ಠವೆನಿ ಸಿರುವದು ರೂಪಲಾವಣ್ಯದಿಂದ ಶ್ರೇಷ್ಠವಲ್ಲ ಪವಿತ್ರ ವಾದ ಶಾಸ್ತ್ರಾಧಿಗಜ್ಞಾನೋದಯದಿಂದ ಶ್ರೇಷ್ಠ ಎಂಬ ಪದವಿಗೆ ಕಾರಣವಾಗಿರುವದು ಜ್ಞಾನವಿಲ್ಲದವ ರ್ಮ ಪಶ್ಚಾದಿಗಳಂತೆ ಭೂವಿಸಲಿಕ್ಕೆ ಸಂದೇಹವಿಲ್ಲ. ಭಕ್ತಿ, ವೈರಾಗ್ಯಗಳಿಗೆ ಈ ಜ್ಞಾನವೇ ಮಾರ್ಗದರ್ಶಿಯಾ ಗಿರುವದು ಪ್ರತಿಯೊಬ್ಬ ಸ್ತ್ರೀಪುರುಷರು ಸದಾಚರಣೆ ಧರ್ಮಾನಿಷ್ಠರಿಯಿಂದ ಪಡೆದರೆ ಪಂಚಮ ಸ್ಥಿತಿಯಾಗುವ ಪ್ರಯತ್ನವನ್ನು ಮಾಡಬೇಕು ಎಂದು ಹೇಳಿದರು ಸಭೆಯು ಈಡಿ ಮಾಡಿದ ಉಪಯುಕ್ತ ಈಡಿ ಹೇಗೆ ಒಂದು ವೃಕ್ಷಕ್ಕೆ ನಾವು ನೀರು ಹಾಕಿದರೆ ಅದು ಉತ್ಪನ್ನವಾದ ಹಣ್ಣನ್ನೇ ಕೊಡುವದು ಇದೇ ವೃಕ್ಷಕ್ಕೆ ನೀರು ಹಾಕದೆ ಬೆಂಕೆ ಯನ್ನು ಹಾಕಿದರೆ ಆ ಗಿಡವೇ ಸುಟ್ಟು ನಾಶವಾಗುವಂತೆ ಮಾನವರು ಅಧರ್ಮದಿಂದ ನಡೆದರೆ ಇವರೂ ನಾಶ ವಾಗುತ್ತಾರೆಂದು ಬಲವಾಗಿ ತಿಳಿಯಿರಿ ; ಕಲಿಪ್ರಭಾವ ದಿಂದ ಸನಾತನ ಧರ್ಮದ ಸ್ವರೂಪ ನಷ್ಟವಾಗೊಂದಿದೆ ಪುನಃ ಆ ಧರ್ಮಧ್ವಜವನ್ನು ಹಿಡಿದೆತ್ತಿ ನಮ್ಮಗಳಿಗೆಲ್ಲ ಸುಖಸ್ಥಾನ ಹೊಂದಿಸುವದಕ್ಕೆ ಧರ್ಮಾವ್ತಾರ ಶ್ರೀಮದ್ಜಗದ್ಗುರು ಭಗವದ್ಸಿಂಹಾಸನಾರೂಢ ಧರ್ಮಸಂಸ್ಥಾಪನಾಚಾರ್ಯ ಸಂಘ ವಾಮಿ ಯೋಗೀಶ್ವರ ' ಎಂಬಧಾಗಿ ತನ್ನ ಅಮೃತ ವಾಣಿಯಿಂದ ಭೋಧಮಾಡಿದಂತೆ ಕಾರ್ಯ ನೆರವೇರಿಸುವಂತೆ ಪ್ರತಿಯೊಂದು ಯುಗಗಳಲ್ಲಿ ಜೋಧಿಸಿ ಶಿಷ್ಯರನ್ನು ಸನ್ಮಾರ್ಗಕ್ಕೆ ಹಚ್ಚುವರು ಅನ್ನು ನಮ್ಮಿ ಮತವು ಸುಧಾರಿಸಲು ಕಾರಣೀಭೂತರಾದ ಶ್ರೀಗುರುಗಳು ಸ್ವಂತವಾಗಿ ತೊಳಿದ ಮಡಿಬಟ್ಟೆಗಳನ್ನೇ ಸ್ನಾನಮಾಡಿ ಧರಿಸಿಕೊಂಡು ಎರಡು ಬೆರಳುಗಳಿಂದ ವಿಭೂತಿ ಧರಿಸುವ ಶಾಸ್ತ್ರವಿರುದ್ಧ ಸಾಂಪ್ರದಾಯವನ್ನು ಬಿಟ್ಟು ತ್ರಿಪುಂಡ್ರ ವನ್ನೇ ಧರಿಸುತ್ತ ರುದ್ರಾಕ್ಷಮಾಲಾಭೂಷಿತರಾಗಿ ಲಿಂಗಾರ್ಚನೆಯಂ ಮಾಡತಕ್ಕದ್ದು ಸ್ತ್ರೀಯರು ರಜಸ್ಸಲೆಯ ರಾದಾಗ್ಯ ಲಿಂಗಾರ್ಚನ ಮಾತ್ರವಂ ಮಾಡುತ್ತ ಪಾಕಾದಿ ಕ್ರಿಯೆಗಳಂ ದೂರಮಾಡುವದೇ ವೀರಶೈವ ಶಾಸ್ತ್ರಸಮ್ಮ ತಿಯು ಇತ್ಯಾದಿಗಳನ್ನು ಶರೀರದಿಂದ ಆಗಿಸಿದೆ ಪ್ರಾಣದಂತೆ ಯಾವಾಗಲೂ ಧರಿಸತಕ್ಕದ್ದು ಲಿಂಗ ಧಾರಿಯ ಅಂಗವೇ ಮಂಗಲಕರವಾದ ಶಿವನ ದೇಹವು ಲಿಂಗಧಾರಿಯಲ್ಲದವನಿಗೆ ಅಂಗನೇ ಅಮಂಗಲಕರವಾದ ಶವಪೀಹವೆಂದು ಭಾವಿಸಿರಿ. ನೈದಿಕ ಸದ್ಭಕ್ತಿ ಪ್ರಕಾರ ವೀರಶೈವ ಸ್ತ್ರೀಪುರುಷರು ಅಣವಮಮಾಯಕಾಮಿಕ ಮಲತ್ರಯಗಳನ್ನು ಹೊಡೆಮೋಡಿಸಬೇಕಾದರೆ ಶ್ರೀ ಗುರುಪಟ್ಟಚಂದ್ರಾಂಗಳಲ್ಲಿ ಶಾಸ್ತ್ರೋಕ್ತವಾಗಿ ಶಿವ ದೀಕ್ಷೆಯಂ ಪಡೆದು ಲಿಂಗಾರ್ಚನೆ ಜಪಕ್ತಿಯಾದಿಗಳನ್ನು ಮಾಡಿಕೊಂಡು ಕೃತಾರ್ಥರಾಗಬೇಕೆಂದು ತಮ್ಮ ಇಂಗಾದ ಕಂದಿದಂ ಜನಸಮೂಹವನ್ನು ಮುದ್ದಿ ಗೊಳಿಸಿ ಸಾಹಿತ್ಯ ಸಂಗೀತ ಕಲೆಗಳಿಂದ ಸರ್ವತೋ ಮುಖವಾಗಿ ಸಮಸ್ತ ಧರ್ಮದವರಿಗೆ ತಿಳಿಯುವಂತೆ ವ್ಯಾಖ್ಯಾನಮಾಡಿದರು ಮಹಶಯರೇ ಚಿಕ್ಕಮಣ್ಣೂರು ಮಹಾಸ್ವಾಮಿಗಳವರು ಸಮಸ್ತ ಧರ್ಮದವರು ಒಪ್ಪು ವಂತೆ ಭೋಧಮಾಡುವದಲ್ಲದೆ ವಿದ್ಯಾಭಿವೃದ್ಧಿ ಮಾಡು ವದಕ್ಕೋಸ್ಕರ ಹೋರಾಡುವದು ನಮ್ಮೆಲ್ಲರಿಗೆ ಗಿಲಕರ ಆದ್ಯಾಪ್ಯ ಸ್ಮರಣೆಯಾಗಿದೆ ಇಂತಹ ಪೂಜ್ಯ ಶಿವಯೋಗಿ ಗಳವರ ಆಗಮನದಿಂದ ನಿಜವಾದ ತತ್ವ್ವಜ್ಞಾನ ತಿಳಿದು ಜನತೆಯು ಸನ್ಮಾರ್ಗದ ಹಾದಿಯುವ ದಂದು ಕಳಕಳಿಯಿಂದ ತಿಳಿಸುವ,

ಶ್ರೀ ಮಾತಂಡಗೌಡ ಕಂಚನಗೌಡ ದೇಸಾಯಿ.

ರೇಣುಕ ಮಂದಿರ ರಾಣೆಬೆನ್ನೂರು

ಧಾರವಾಡ ಡಿಸ್ಟ್ರಿಕ್ಟು ರಾಣೇಬೆನ್ನೂರು ತಾಲೂಕ ರಾಣೇಬೆನ್ನೂರ ರೇಣುಕಮಂದಿರದಲ್ಲಿ ಕೆಳಗೆ ಕಂಡ ಪ್ರಕಾರ ರೇಣುಕ ಜಯಂತಿಯ ಕಾರ್ಯಕ್ರಮಗಳು ಆಚರಿ ಸಲ್ಪಟ್ಟವು ದಿನಾಂಕ ೩೫-೨-೧೯೫ ನೆಯ ಬುಧವಾರ ಮುಂಜಾನೆ ೭॥ ಘಂಟೆಗೆ ಧ್ವಜಾರೂಹನೆ, ನಂತರ ಊರೊಳಗಿನ ಉತ್ಸವ ಬಸವೇಶ್ವರ ದೇವರುಗಳಿಗೆ ಪಂಚಾ ಮೃತ ಅಭಿಷೇಕ ಹಾಗೂ ಅಷ್ಟೋತ್ತರ ಬಿಲ್ವಾರ್ಚನೆ ಮುಂಜಾನೆ ೮ ಗಂಟೆಯಿಂದ ಸಾಯಂಕಾಲ ೫ ಘಂಟೆಯ ವರೆಗೆ ಭಜನಾ, ಸಾಯಂಕಾಲ ಶ್ರೀ ಅನ್ನಪೂರ್ಣಾ ದೇವಿಯ ಉಡಿತುಂಬಿಸುವ ಕಾರ್ಯ ನೆರವೇರಿದುವು

ದಿನಾಂಕ ೩೬-೨-೧೯೫ ನೆಯ ಗುರುವಾರ ಬೆಳಿಗ್ಗೆ ೪ ಘಂಟೆಯಿಂದ ಇಸ್ತ್ರಾರಿ ಮಹೇಶ್ವರ ವಟುಗಳಿಗೆ ಶ್ರೀ ಷ ಬ್ರ ಳರ್ಜಂಗಿ ಪಟ್ಟದಸ್ವಾಮಿಗಳಂತ ಹಾಗೂ ಶ್ರೀಷಬ್ರಳಿ ಬನ್ನಿ ಹಟ್ಟಿ ಪಟ್ಟದ ಸ್ವಾಮಿಗಳಂತ ದೀಕ್ಷಾ ಕಾರ್ಯವೂ ಮತ್ತು ೯॥ ಘಂಟೆಗೆ ವೀ॥ ಶಂಕರಯ್ಯ ನವರು ಹಿರೇಮಠ ಷಾ ಅಮಂತಿ, ವೀ॥ ಬಸವಯ್ಯ ನವರು ಷಾಲಿಮಠ ಷಾ ಲಿಂಗದಹಳ್ಳಿ ಹಾಗೂ ಶ್ರೀ ಶರಣಪ್ಪ ಉಳುಪಿ ಷಾ ಹಾಗೇದೆಪ್ಪರ ಇವರ ವಿವಾಹಕಾರ್ಯ ವೀ॥ ವೀರಯ್ಯನವರು ಹಿರೇಮಠ

ಮತ್ತು ವೇ|| ಹೇಮಯ್ಯನವರು ಹಿರೇಮಠ ಸ್ವಾ|| ಹರಿಹರ ಇವರ ಪೌರೋಹಿತ್ಯದಲ್ಲಿ ಜಾಂಗವಾದವು

ಮೇಲಿನ ವಟುಗಳ ದೀಕ್ಷಾಕಾರ್ಯದ ಯಾವತ್ತೂ ಖರ್ಚನ್ನು ಶ್ರೀ ಏ ಪ್ರ. ಸ್ವ ಮೌಕ್ಷಸಂಗಬಸವ ಸ್ವಾಮಿಗಳು ತೋಂಟದಾರ್ಯಮಠ ಗದಗ ಇವರು ವಹಿಸಿಕೊಂಡಿದ್ದರು

ಹತ್ತು ಘಂಟೆಗೆ ಶ್ರೀ ಏ. ಪ್ರ ಸ್ವ ಮೌ-ಸಂಗಬ ಬಸವಸ್ವಾಮಿಗಳು ತೋಂಟದಾರ್ಯಮಠ ಗದಗ, ಹಾಗೂ ಮೇಳ್ಕೆ ಕಂಡ ಇಬ್ಬರು ಪಟ್ಟದಸ್ವಾಮಿಗಳವರ ಸಮ್ಮುಖದಲ್ಲಿ ಶ್ರೀಮತಿ ವಂಟಮುತ್ತಿ ಮಲ್ಲಮ್ಮನವರು ಅಡೂರ ಇವರು ನೆರೆದ ಸ್ತ್ರೀವೃಂದಕ್ಕೆ ಪತಿವ್ರತೆಯರ ಮಹತಿಯನ್ನು ಒಳ್ಳೆಯ ಪರಿಣಾಮಕಾರಿಯಾಗುವಂತೆ ಬೋಧಿಸಿದರು

ಮಧ್ಯಾಹ್ನದಲ್ಲಿ ಗಣಾರಾಧನೆ, ಸಾಯಂಕಾಲ ೫ ಘಂಟೆಗೆ ಶ್ರೀ ಜಗದ್ಗುರು ರೇಣುಕಾಚಾರ್ಯರ ರಥೋತ್ಸವ. ೭॥ ಘಂಟೆಗೆ ಶ್ರೀಯುತ ಮಡ್ಡೂರ ಹಾಲ್ಲಯ್ಯರ ಅಧ್ಯಕ್ಷತೆಯಲ್ಲಿ ಶ್ರೀ ಜಗದ್ಗುರು ರೇವಣಾರ್ಧ್ಯೇಶ್ವರ ಶಾಲಾ ಜಾಲ-ಬಾಲಿಕೆಯರಿಂದ ವಿವಿಧವಿನೋದಾವಳಿಗಳೂ ಅಲೂರು ಅಕ್ಕನಬಳಗದ ಬಾಲಿಕೆಯರಿಂದ "ಕೋಳೂರ ಕೊಡಗೂಸು" ಎಂಬ ವಿಶಾಲ ನಾಟಕವೂ ಜಂಗಾ ನ್ಯೆಲಾರ ಬಸವಲಿಂಗಿ ಶರಣರ ಗುರುಸ್ತೋತ್ರ ತಂತ್ರ ಲಿಂಗದಳಕ್ಕೆ ಹರಿಜರ ಕೋಲಾಟಗಳೂ ನಡೆದು ಅಧ್ಯಕ್ಷರ ಸಮಾರೋಪಭಾಷಣದೊಡನೆ ಮುಕ್ತಾಯ ಗೊಂಡಿತು

ದಿನಾಂಕ ೨೭ ೫ ೩೩ ನೇ ಶುಕ್ರವಾರ ಮುಂಜಾನೆ ೬॥ ಘಂಟೆಯಿಂದ ಊರ ಮುಖ್ಯ ಬೀದಿಗಳಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಪಲ್ಲಕ್ಕಿ ಉತ್ಸವವೂ ನಡೆದು ಜಯಂತಿ ಕಾರ್ಯಕ್ರಮಗಳು ಕೊನೆಗಂಡವು

ಈ ಜಯಂತಿ ಕಾರ್ಯಕ್ರಮದಲ್ಲಿ ರಾಣೇಬೆನ್ನೂರ ಪುರ ಪ್ರಮುಖರೂ ಶಿಕಾರಿಪುರ, ಹಿರೇಕೆರೂರ ಚಿಕ್ಕೇರೂರ, ಬ್ಯಾಡಗಿ, ಹಾವೇರಿ, ಒಂಕಾಪುರ, ಹುಬ್ಬಳ್ಳಿ, ಧಾರವಾಡ, ಹರಿಹರ, ಶಾವನಗೇರಿ ಮೊದಲಾದ ಗ್ರಾಮಗಳ ಭಕ್ತರು ಭಾಗವಹಿಸಿದ್ದರು

ಓರ್ವ ಪ್ರತ್ಯಕ್ಷದರ್ಶಿ

ವಿವಾಹಮಹೋತ್ಸವ ಸಮಾರಂಭ,

ನರಗುಂದ

ಧಾರವಾಡ ಜಿಲ್ಲಾ ನವಲಗುಂದ ತಾಲೂಕು ವೈಕಿ ನರಗುಂದ ಪಟ್ಟಣದವರಾದ ಶ್ರೀಮಾನ್ ಜನ್ನೆ ಬಸಪ್ಪ ನವರು ಚಿ|| ಇವರು ತಮ್ಮ ಪುತ್ರ ಚಿ|| ಒಸವರಾಜ ಬಿ ಎ ಎಲ್ ಎಲ್ ಬಿ ಇವರಿಗೆ ರಟ್ಟಿಹಳ್ಳಿ ಗ್ರಾಮದವರಿಯವ ಶ್ರೀಮಾನ್ ಸಂಗಪ್ಪನವರು ಸಣಕಲ್ ಇವರ ಪುತ್ರಿ ಚಿ|| ಕುಂ|| ಸೌ|| ಕಾಂ|| ಪ್ರೇಮಾವತಿ ಇವರನ್ನು ತಂದು ಇದೇ ಶ್ರೀ ಶಕೆ ೧೮೭೭ ನೇ ನಂದನ ಸಂವತ್ಸರ ಮಾಘ ಬಿ|| ೫ ಬುಧವಾರ (ತಾ|| ೪ ೨-೩೬) ದಿವಸ ಪಟ್ಟಿ ಬ್ರ|| ಶ್ರೀ ಪಟ್ಟದಸ್ವಾಮಿಗಳು ಹಿರೇಮಠ ಕೊಣ್ಣೂರು ಇವರ ನೇತೃತ್ವದಲ್ಲಿ ಮತ್ತು ವೇ|| ಶ್ರೀ ತಿವಲಿಂಗಯ್ಯ ಹಡಗಲಿ ಮಠ ಮತ್ತು ಚಿನ್ನಯ್ಯಶಾಸ್ತಿ ಶಲವಡಿ ನರಗುಂದ ಈ ಉಭಯತರ ವೈದಿಕತ್ವದಲ್ಲಿ ವಿವಾಹಮಹೋತ್ಸವವನ್ನು ಒಳ್ಳೇ ವೈಭವದಿಂದ ನೆರವೇರಿಸಿದರು. ಈ ವಿವಾಹ ಕಾರ್ಯಕ್ಕೆ ಮುಂಬಯಿ, ಹುಬ್ಬಳ್ಳಿ, ಧಾರವಾಡ, ಗದಗ, ಬಾಗಲಕೋಟೆ, ಗುಳೇದ ಗುಡ್ಡ, ಬೈಲಹೊಂಗಲ, ಶಾವನಗೆರೆ, ಹರಿಹರ ಇತ್ಯಾದಿ ಪಟ್ಟಣಗಳಿಂದ ಅನೇಕ ಜನರು ಬಂದಿದ್ದರಲ್ಲದೆ ಅಲು ಬಾಲು ಗ್ರಾಮ ಹಳ್ಳಿಗಳಿಂದ ವಿಶೇಷ ಜನರು ಕೂಡಿದ್ದರು ಅಕ್ಷತಾರೋಪಣಾನಂತರ ಮಾಹೇಶ್ವರರಿಗೂ, ಸ್ಥಳಸ್ಥರಿಗಳಿಂದ ಖಂ ಯಾವತ್ತೂ ಜನರಿಗೂ ಮೃಷ್ಟಾನ್ನ ಭೋಜನವು ನಡೆಯಿತು ಶ್ರೀ ಪರಮಾತ್ಮನು ಈ ನೂತನ ದಂಪತಿಗೆ ಆಯುರಾರೋಗ್ಯಾದಿ ಸಕಲ ಸಂಪತ್ಸಮೃದ್ಧಿಯನ್ನೂ, ಪುತ್ರಪೌತ್ರಾದಿವೃದ್ಧಿಯನ್ನೂ ಅನುಗ್ರಹಿಸಿ ರಕ್ಷಿಸಲೆಂದು ಹಾರೈಸುತ್ತೇನೆ

ಶ್ರೀ ರುದ್ರಪ್ಪ ಗಣಾಚಾರಿ

ವರ್ತಮಾನಸಂಗ್ರಹ

ಬಳ್ಳಾರಿ ಜಿಲ್ಲೆಯನ್ನು ಮೈಸೂರಿಗೆ ಸೇರಿಸಬೇಕು

ಉದಯವಾಗರಿಯವ ಆಂಧ್ರಪ್ರಾಂತ್ಯದಲ್ಲಿ ಬಳ್ಳಾರಿ ಜಿಲ್ಲೆಯನ್ನು ಸೇರಿಸಕೂಡದೆಂದು ಬಳ್ಳಾರಿ ಜಿಲ್ಲೆಯ "ಆರ್ಯಾವಳಿ ಕಾರ್ಯಾಚರಣೆ ಸಮಿತಿ" ಯ ೫ ಮಂದಿ ಸದಸ್ಯರು, ಪ್ರಧಾನ ಸಚಿವರಾದ ಶ್ರೀ ಜವಹರಲಾಲ್ ನೆಹ್ರು, ಸಂಸ್ಥಾನಗಳ ಸಚಿವರಾದ ಡಾ|| ಕೆ. ಎನ್ ಕಟ್ಜು ಮತ್ತು ಕಾಂಗ್ರೆಸ್ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರುಗಳಿಗೆ ಸಲ್ಲಿಸಿರುವ ವಿಜ್ಞಾಪನಾ ಪತ್ರದಲ್ಲಿ ಮನವಿ ಮಾಡಿದ್ದಾರೆ

ಸರಹದ್ದು ಸಮಿತಿಯ ನೇಮಕ ಆಗತ್ಯ

ಆಂಧ್ರಪ್ರಾಂತ್ಯ ರಚನೆಗೆ ಮುನ್ನ ಕನ್ನಡ ಪ್ರಾಂತ್ಯಗಳ ಗಡಿಯನ್ನು ನಿರ್ಧರಿಸಲು ಗಡಿ ನಿರ್ಧಾರ ಸಮಿತಿಯನ್ನು ನೇಮಿಸಬೇಕೆಂದೂ ಪತ್ರದಲ್ಲಿ ಮನವಿ ಮಾಡಲಾಗಿದೆ

ಬಳ್ಳಾರಿ ಜಿಲ್ಲೆಯನ್ನು ಮೈಸೂರು ಸಂಸ್ಥಾನಕ್ಕೆ ಸೇರಿಸಬೇಕು

ಬಳ್ಳಾರಿ ಜಿಲ್ಲೆಯನ್ನು ಪಕ್ಕದಲ್ಲಿರುವ ಮೈಸೂರು ಸಂಸ್ಥಾನಕ್ಕೆ ಸೇರಿಸಬೇಕು ಅದು ಸಾರ್ವತ್ರಿಕವಾಗಿದ್ದರೆ ಆ ಜಿಲ್ಲೆಯನ್ನು ಕೇಂದ್ರಾಡಳಿತ ಮದ್ರಾಸ್ ಪ್ರಾಂತದಲ್ಲಿ ಇರಿಸಬೇಕು ಆ ಜಿಲ್ಲೆಯನ್ನು ತಾತ್ಕಾಲಿಕವಾಗಿ ಆದರೂ ಆಂಧ್ರಸ್ಥಾಂಪ್ರಕ್ಕೆ ಸೇರಿಸಬಾರದು ಎಂದೂ ಮನವಿಯಲ್ಲಿ ವಿವರಿಸಲಾಗಿದೆ

ಶಕ್ತಿವಿಸಾರಿ ಮೆಚ್ಚಿಮಾಡುವವರ ಮೇಲೆ ಕೆಣ್ಣಿಡಿ!

ಉತ್ತರ ಪ್ರದೇಶ ಸರ್ಕಾರದ ಆಜ್ಞೆ

ಸರ್ಕಾರಿ ನೌಕರವರ್ಗದವರಲ್ಲಿ ಯಾರು ತಮ್ಮ ಸಂಸ್ಥಾನದ ಶಕ್ತಿವಿಸಾರಿ ಹೆಚ್ಚಿಗೆ ನೆಚ್ಚಿನಾಡುವರೋ ಅಂತಹವರ ಜೀವನ ನುಟ್ಟದ ಬಗ್ಗೆ ಅಧಿಕಾರಿಗಳು ಕಣ್ಣಿಟ್ಟಿರಬೇಕು ಎಂದು ಉತ್ತರಪ್ರದೇಶಸರ್ಕಾರವು ಸೀನಿಯರ್ ಅಧಿಕಾರಿಗಳಿಗೆ ನಿರ್ದೇಶವಿತ್ತಿವ ಲಂಚ ಸುಟ್ಟು ವತ್ತುಗಳನ್ನು ನಿರ್ಮೂಲಮಾಡಲು ಸರ್ಕಾರ ಈ ಕ್ರಮ ಕೈಗೊಂಡಿದೆ

ಅಮೆರಿಕ ವಿರುದ್ಧ ಪ್ರದರ್ಶನ

ಅಮೆರಿಕನ್ನರೆ "ಸ್ವದೇಶಕ್ಕೆಹೋಗಿ' ಎಂಬುದಾಗಿ ೩೦೦ ಕಮ್ಯೂನಿಸ್ಟ್ ಪ್ರದರ್ಶಕರು ಹುಲ್ಲಿ ದಡದಲ್ಲಿದ್ದ ಅಮೆರಿಕನ್ ಯಜ್ಞ ಹಡಗುಗಳ ಬಳ ಘೋಷಣೆಗಳನ್ನು ಮಾಡಿದರು ಭಾರತದ ಸಮುದ್ರತೀರದಲ್ಲಿ ಆ ಹಡಗುಗಳಿಗೆ ಅಶ್ರಯ ಕೊಡಬಾರದೆಂದು ಆವರು ಕೂಗಿದರು ಅಮೆರಿಕಾ ಅಧ್ಯಕ್ಷರಾದ ಏಸೆನ್‌ಹೋವರ್‌ರವರ ಭಾವ ಚಿತ್ರವೊಂದನ್ನು ಸುಡಲಾಯಿತು

ರಷ್ಯಾದ ಪ್ರಧಾನಿ ಮೊರ್ಷಲ್ ಖ್ರಾಲಿನ್‌ರವರ ನಿಧನ

ರಷ್ಯದ ಪ್ರಧಾನಿಯೂ ಸರ್ವಾಧಿಕಾರಿಯೂ ಆಗಿದ್ದ ಮಾರ್ಷಲ್ ಜೋಸೆಫ್ ವಿ. ಸ್ಟಾಲಿನ್‌ರವರು ಈಚೆಯ ೧ ನೇ ತಾ|| ಭಾಮವಾರದಿಂದ ಪಾರ್ಶ್ವವಾಯು ಹೊಡೆತ ದಿಂದ ನರಳುತ್ತಿದ್ದು ಗುರುವಾರ ರಾತ್ರಿ ೧-೩೫ ಕ್ಕೆ ನಿಧನ ರಾದರು. ಮಾರ್ಷಲ್ ಸ್ಟಾಲಿನ್‌ರವರಿಗೆ ೭೩ ವರ್ಷ ವಯಸ್ಸಾಗಿತ್ತು.

ಇವರ ನಿಧನದ ಬಗ್ಗೆ ಪ್ರಪಂಚದ ಮೂಲೆ ಮೂಲೆ ಗಳಿಂದ ಮಾಸ್ಕೋದಿಗೆ ಸಂತಾಪಸೂಚಕ ಸಂದೇಶಗಳು ಹೋಗುತ್ತಿವೆ

ಭಾರತ ಸರ್ಕಾರ ಮತ್ತು ಪ್ರಜೆಗಳ ಪರವಾಗಿ ಹಲಿ ಶೆಹ್ಯರವರು ಸಂತಾಪ ಸಂದೇಶವನ್ನು ರಷ್ಯಾ ವಿದೇ ಜಾಂಗ ಸಚಿವರಿಗೆ ಕಳುಹಿಸಿದ್ದಾರೆ.

ಪೆನ್‌ಸಿಲಿನ್ ಔಷಧಿ ಉಪಯೋಗದ ಬಗ್ಗೆ ತೀವ್ರ ಎಚ್ಚರಿಕೆ

ಅನೇಕ ಮೊಡ್ಡ ಮೊಡ್ಡ ಕಾಲಿಲೆಗಳಿಗೆ ಔಷಧಿ ಯಾಗಿ ಉಪಯೋಗಿಸಲಾಗುತ್ತಿರುವ ಪೆನ್‌ಸಿಲಿನ್ ಔಷಧಿಯನ್ನು ವಿವೇಚನೆಯಿಲ್ಲದೆ ಉಪಯೋಗಿಸುವುದ ರಿಂದ ಜಾಸಿಲೆಯು ಉಲ್ಬಣಗೊಳ್ಳುವುದಲ್ಲದೆ ಜೀವಕ್ಕೆ ಅಪಾಯವುಂಟಾಗಬಹುದೆಂದು ಅಮೆರಿಕನ್ ವೈದ್ಯ ಪ್ರವೀಣರಾದ ಡಾ|| ಹರ್ಷ್ ಸೈಗರ್‌ರವರು ಎಚ್ಚರಿಕೆ ಯಿತ್ತಿದ್ದಾರೆ ಅವರು ಪೆನ್‌ಸಿಲಿನ್ ಉಪಯೋಗದ ಬಗ್ಗೆ ಮಾತನಾಡುತ್ತಾ "ವಿವೇಚನೆಯಾ ಯಿಂತಹ ಕಾಲಿಲೆಗಳಿಗೆ ಪೆನ್‌ಸಿಲಿನ್ ಉಪಯೋಗಿಸು ವುದರಿಂದ ರೋಗಿಯು ಸಾಯುವ ಸಂಭವವೂ ಇದೆ ಯೆಂದು ತಿಳಿಸಿದ್ದಾರೆ

ಶ್ರೀ ಗೋಮಟೇಶ್ವರಸ್ವಾಮಿಗೆ ವೈಭವದ ಮಹಾನುಸ್ಯಕಾಭಿಷೇಕ

ಶ್ರವಣಬೆಳಗೊಳದಲ್ಲಿ ಸಂಭ್ರಮ

"ಭಗವಾನ್ ಬಾಹುಬಲಿ ಸ್ವಾಮೀಕೆ ಜೈ" ಎಂಬ ಲಕ್ಷಾಂತರ ಮಂದಿ ಮುಕ್ತಕಂಠದ ಗಗನಮೆಟ್ಟುವ ಘೋಷಣೆಗಳ ಜೊತೆ ಪಂಡಿತೋತ್ತಮರ ವೇದಮಂತ್ರ ಘೋಷಣೆಗಳ ಮಧ್ಯೆ ಕಳೆದ ೫ ನೇ ತಾರೀಕಿನ ದಿನ ಸಮರ್ಪೋದ್ಯಮದಾದಿ ೧೧ ಗಂಟೆಗೆ ಸರಿಯಾಗಿ ಗೋಮಟ ವೀಶ್ವರ ಸ್ವಾಮಿಯ ಮಹಾಮಸ್ತಕಾಭಿಷೇಕವು ಆರಂಭ ವಾಯಿತು ೧೦೦೮ ಕೊಡಗಳಲ್ಲಿ ಮೊದಲಿನ ೧೦೦ ಕಳಶ ಗಳನ್ನು ಕೊಂಡವರು ಕುಂಭಗಳನ್ನು ತಮ್ಮ ತಮ್ಮ ತಲೆಯಮೇಲೆ ಹೊತ್ತುಕೊಂಡು ಅಭಿಷೇಕಕ್ಕಾಗಿ ಶಿಲಾ ಮೂರ್ತಿಯ ಹಿಂಧಾಗದಲ್ಲಿ ಕಟ್ಟಿಲಾಗಿರುವ ಅಟ್ಟಣೆಯ ಮೇಲೆ ಹತ್ತಿ ಬಂದು ಸಾಲಾಗಿ ನಿಂತು ತಮ್ಮ ತಮ್ಮ ಕೊಡಗಳಿಂದ ಕ್ಷೀರಾಭಿಷೇಕವನ್ನು ಆರಂಭಿಸಿದರು. ಒಂದಾದ ಮೇಲೆ ಒಂದು ಕೊಡದಂತೆ ಕ್ಷೀರವು ಜಲಪಾತ ದಂತೆ ಶಿಲಾಮೂರ್ತಿಯ ಮಸ್ತಕದಿಂದ ಬೀಳುತ್ತಿತ್ತು.

ಕ್ಷೀರಾಭಿಷೇಕ, ಚಿಂದನಾಭಿಷೇಕ, ಕಬ್ಬಿನರಸದ ಅಭಿ ಷೇಕ, ಹಣ್ಣು ಹೂಗಳ ಅಭಿಷೇಕ ತೆಂಗಿನಕಾಯಿ ಹಾಲಿನ ಅಭಿಷೇಕ ಒಂದಾದ ಮೇಲೊಂದು ನಡೆದವು ಆ ಅಭಿಷೇಕ ಕ್ರಮಗಳಿಗೆ ತಕ್ಕಂತೆ ದೇವಾಲಯದಲ್ಲಿ ನೆರೆದಿದ್ದ ಪಂಡಿತೋತ್ತಮರು ಮಂತ್ರೋಚ್ಚಾರಣೆಯಲ್ಲಿ ತೊಡಗಿದ್ದರು

ಅಭಿಷೇಕದ ಮೊದಲನೆಯ ಹಂತ ಸಂಪ್ರದಾಯಕ್ಕ ನುಗುಣವಾಗಿ ಮೈಸೂರು ಅರಮನೆತನದವರ ಸೇಣೆ ಯಾಗಿದ್ದು ರಾಜಮನೆತನದ ಶ್ರೇಯೋಭಿವೃದ್ಧಿಯ ಮಂತ್ರಘೋಷಣೆಗಳೊಡನೆ ನಡೆಯಿತು

ರಾಜಕುವರರಿಗೆ 'ಶ್ರೀ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್' ಎಂಬ ನಾಮಾಂಕಿತ

ಕಳೆದ ಸೋಮವಾರ ದಿನ ಪ್ರಾತಃಕಾಲ ಅರಮನೆ ಯಲ್ಲಿ ಕಾಷ್ಠೋತ್ಕ್ಷಣವಾಗಿ ರಾಜಕುಮಾರರ ನಾಮಕರಣ ಮಹೋತ್ಸವವು ನೆರವೇರಿತು ರಾಜಕುಮಾರರಿಗೆ ಶ್ರೀ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಎಂಬ ಹೆಸ ರನ್ನು ಇಡಲಾಯಿತು

ಶ್ರೀಮನ್ಮಹಾರಾಜರವರು ೯ ೩೦ ಗಂಟೆಗೆ ಸರಿ ಯಾಗಿ ಕಲ್ಯಾಣಮಂಟಪಕ್ಕೆ ದಯಮಾಡಿಸಿದರು. ಮೊದಲು ರಾಜಗುರುಗಳ ಪಾದಪೂಜೆ ನಡೆಸಿದರು. ೧೦-೧೫ ಗಂಟೆ ಸರಿಯಾಗಿ ರಾಜಪುರೋಹಿತರು ರಾಜ ಕುಮಾರರ ಹೆಸರು ಶ್ರೀಕಂಠದತ್ತ 'ನರಸಿಂಹರಾಜೇಂದ್ರ ಒಡೆಯರ್' ಎಂದು ಘೋಷಿಸಿದರು

ಈ ತಮ್ಮತಮ್ಮಲೆಯ ರಾಜಪುರೋಹಿತರ ಬಾಯಿಂದ ಬರುವನೇಳಿಗೆ ಸರಿಯಾಗಿ ರಾಜರ ಹಾರೈಕೆ ತಾಳಲಾರದೆ ಮಹೋತ್ಸವದ ಸಂತೋಷಾತಿರೇಗವಾಗಿ ಅರಮನೆ ಬತೇರಿ ಯಿಂದ ೨೧ ಕುಶಾಲ್ ತೋಪುಗಳನ್ನು ಹಾರಿಸಲಾಯಿತು.

ರಾಜಬಂಧುಗಳು ಶ್ರೀಮನ್ಮಹಾರಾಜರವರಿಗೆ ನಜರ್ ಒಪ್ಪಿಸಿದರು ಆಪಂತರ ಅಜ್ಞಾನುಸಾರ ಜಾಂಜಾಟ ಕೊಡಲಾಯಿತು. ಸುಮಾರು ೧೦-೩೫ ಗಂಟೆಗೆ ಸಮಾ ರಂಭವು ಮುಕ್ತಾಯವಾಯಿತು

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬ ಶಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ಧಿತ್ಯಾರ್ಥವಾಗಿ ಆಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿತಲ್ಪಟ್ಟಿರುವುದು ವೀರಶೈವಮತದಲ್ಲಿ ಸದ್ಗ್ರಂಥಗಳೆಲ್ಲವೂ ಇದೇ ಇಹ ಪುರಾತನಗ್ರಂಥವನ್ನಿಟ್ಟುಕೊಂಡು ನೆಲೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು **೩೫೦ವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿತಲ್ಪಟ್ಟಿರುವದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಪ್ರಮಥರಿಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಅದರ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರಿಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಹಸ್ರ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಹಿಂದೊಡಿಸಬೇಕೆಂದು ಪಂಡಿತರು ವ್ಯಾಖ್ಯಾನದ ಮಹತ್ತ್ವವು ಸಾರ್ವಕಾಲಿಕ ಪ್ರಯೋಜನವುಳ್ಳದ್ದಾಗಿದೆ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಲೇಖನಿಯೊಂದಿಗೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ ಈ ಗ್ರಂಥವು ಒಟ್ಟು ೩೬೨ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಿದ್ಧಾಂತಸಾರ ಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾಕ್ಷಕಾವ್ಯ ಮತ್ತು ಸೋಮಸಿದ್ಧೇಶ್ವರಕಾವ್ಯಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಶೋಭೆಯೂ ಹೆಚ್ಚಿರುವುದು ಸರ್ವಾಸಾರ್ವಕಾಗಿ ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರಿಲ್ಲರೂ ಅವಶ್ಯಕಾಗಿ ಇದಬೇಕು.

ಬೆಲೆ ೩ ರೂಪಾಯಿ.

ಮನೋಹರವಾದ ಫೋಟೋಗಳು.

ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು)ಸೈಜು ೧೪×೧೦ ಬೆಲೆ ೦—೬—೦

ಶ್ರೀಜಗದ್ಗುರು ಪಂಚಾಚಾರ್ಯರು ಸಂಜಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ೦—೩—೦

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ದಲ್ಲಿ ೧೪ಕ್ಕೆ ೦—೩—೦

,, ,, ,, ಚಿಕ್ಕ ಸೈಜು ಬೆಲೆ .. ೦—೧—೬

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ . ೦—೧—೬

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೧—೬

ಶ್ರೀರೇಣುಕಾಚಾರ್ಯರು ಶ್ರೀವಂಕಂಠಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಆನುಗ್ರಹಿಸುವ ಫೋಟೋ ೦—೧—೬

ಶ್ರೀರೇಣುಕಾಚಾರ್ಯರು ವಿಧಿಪೂರ್ವಕ ಸ್ವಾಧಾರನೆಯಂತೆ ೪ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ ೦—೧—೬

ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ (ನಾನಾವಿಧಬಣ್ಣದ್ದು) ೦—೪—೦

ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕೀರಿಟಧಾರಣಮಾಡುವ ಫೋಟೋ ೦—೧—೬

ಸದ್ಭಕ್ತ ಪೀರಾಪೀರಜಗಣಮಾಡಿರುವ ಶ್ರೀಕಾಶೀಜಗದ್ಗುರು ವಿಶ್ವೇಶ್ವರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ ೦—೪—೦

ಶ್ರೀವಾಮದೇವ್ಯಾಶ್ರಮ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಶಿವಲಿಂಗಾವಧಾನಾಚಾರ್ಯರ ಫೋಟೋ ೦—೧—೬

ಶ್ರೀಮದ್ರಂಭಾಪುರೀ ಪೀಠಾಧೀಶ್ವರ ೧೦೮ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ೦—೧—೬

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಉಜ್ಜಯಿನೀಪೀಠಾಧಿಪತಿಗಳಾದ

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾ ಪ್ರಸೀದಂತು ॥ REGISTERED No. M 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋಪಕರ್ । ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು—ಸಾಗನೂರು ಬೃಹನ್ಮಹಾಧ್ಯಕ್ಷರಾದ ನೇಕಾ ಸಂ॥ ಶ್ರೀ ಆಕಾಶಾಗಸ್ತಿಶಾಸ್ತ್ರಿಗಳವರು.

ವಾರ್ಷಿಕ ಚಂದಾ ೩ ರೂ] ಸಂಪಾದಕರು—ನಾಗನೂರು ಬೃಹನ್ಮಹಾಧ್ಯಕ್ಷರಾದ ಶ್ರೀ ಮಹಾದೇನಯ್ಯನವರು [ವಿ ಪಿ ಖರ್ಚು ಸೇರಿ ೩ ರೂ ೬ ಆ.

ಸಂಪುಟ ೫೬ | ಸೋಮವಾರ ಶಾ॥ ೧೬ ನೇ ಮಾರ್ಚ್ ೧೯೫೫ [ಸಂಚಿಕೆ ೪೪

ಪಂಚಲೋಹದ ಲಿಂಗೋದ್ಭವ ಮೂರ್ತಿಗಳು

ರುದ್ರಾಭಿಷೇಕಾದಿಗಳನ್ನು ಮಾಡುವ ದಕ್ಕೆ ಅನುಕೂಲವಾಗುವಂತೆ ಪಂಚಲೋಹದಲ್ಲಿ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಗಳನ್ನು ತಯಾರಿಸಬೇಕೆಂದು ಬಹುಜನ ಗುರುಭಕ್ತರು ಅಪೇಕ್ಷಿಸುತ್ತಿದ್ದರು. ಅವರ ಅಪೇಕ್ಷಾನುಸಾರವಾಗಿ ಈಗ ಮೂರ್ತಿಗಳು ತಯಾರಾಗಿವೆ ಎತ್ತರ ನಾಲ್ಕು ಇಂಚು ಇವೆ. ಬೇಕಾದವರು ಬರೆದು ತರಿಸಿಕೊಳ್ಳಬಹುದು.

ಒಂದು ಮೂರ್ತಿಯ ಬೆಲೆ ೧೬ ರೂ

ಮ್ಯಾನೇಜರ್—
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು

ಪತ್ರವ್ಯವಹಾರ

[ಪತ್ರಿಕಾದಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡಬೇಕಾಗಿ ಕೋರ್ಪು. —ಸಂ]

ದೇವಸ್ಥಾನದ ತಂಬುಸ್ಥಾಪನೆ
ನೋಮಖಾಪಳ್ಳಿ

ಕರೂರು ತಾಲೂಕಿ ನೋಮಖಾಪಳ್ಳಿಯಲ್ಲಿ ಶ್ರೀ ಬಸವೇಶ್ವರ ದೇವಸ್ಥಾನವನ್ನು ನೂತನವಾಗಿ ಕಟ್ಟಿಸಲು ತಾ॥ ೧೬-೨-೫೫ ರಂದು ಶ್ರೀ ಮಲ್ಲಿನಾಥಸ್ವಾ ವಿರಕ್ತ ಮಠದ ಶ್ರೀ ಬಸವರಾಜವಿಶ್ವೇಂದ್ರಸ್ವಾಮಿಗಳ ಅಮೃತ ಹಸ್ತದಿಂದ ತಂಬುಸ್ಥಾಪನೆಯನ್ನು ಮಾಡಿಸಲಾಯಿತು.

ಪಿ. ಮರುಳಪ್ಪ

ಶ್ರೀರೇಣುಕಾಚಾರ್ಯರ ಜಯಂತ್ಯುತ್ಸವ

ಜಿಕ್ಕನ ಗುರುಲಿಂ ಡಿ॥ ಅಲಮಟ್ಟಿ ಶ್ರೀ ಬಸವೇಶ್ವರ ನವಸ್ಥಾನದಲ್ಲಿ ಶ್ರೀರೇಣುಕಾಚಾರರ ಜಯಂತ್ಯುತ್ಸವ ಇವೇ ಮಾಘ ಬಿ ೧೮ ಶುಕ್ರವಾರ ದಿವಸ ಪ್ರತಿವರ್ಷದ ಪದ್ಧತಿಯಂತೆ ಶ್ರೀ ವಜ್ರೇಶ್ವರಿ ಮಠದ ಒಪ್ಪಾಂಪ್ಯರ ನೇತೃತ್ವದಲ್ಲಿ ಬಳ್ಳೇ ವೈಭವದಿಂದ ಆಚರಿಸಲಾಯಿತು ಅಂದು ರೇಣು ಕಾಚಾರ್ಯರ ಲಿಂಗೋದ್ಭವಮೂರ್ತಿಗೆ ರುದ್ರಾಭಿಷೇಕ-ಪೂಜಾ ಮಲ್ಲಾರ್ಚನೆ ನಡೆದ ನಂತರ ಗ್ರಾಮದ ಎಲ್ಲ ಜನರಿಂದ ಮಂಗಳವನ್ನು ಕೋರಿ ಜಯಘೋಷಮಾಡಿದ ಜಯಂತಿಯು ಪೂರ್ತಿಗೊಳಿಸಲ್ಪಟ್ಟಿತು

ಗುರುಭಕ್ತ-ಬಿ ಮರುಳಪ್ಪ

ಪುಣ್ಯದಿನ ಸಮಾರಂಭ, ಮಂಗಳೂರ

ಯಲಬುರ್ಗಿ ತಾ॥ ಮಂಗಳೂರ ಆರೇಕೆ ಮಠದಲ್ಲಿ ತಾ॥ ೨೩-೨-೫೫ ಸೋಮವಾರ ದಿವಸ ನಾಗನೂರ ಬೃ॥ ಮಹಾಧ್ಯಕ್ಷರೂ, ಬಾಲಬ್ರಹ್ಮಚಾರಿಗಳೂ, ಗುರುಕುಲೋದ್ಧಾರಕರೂ, ವೀರಶೈವ ಧರ್ಮಸುಧಾಕಾರರೂ ಗುರುವರ್ಯರ ಪಂಚಭೌತಿಕ ಶರೀರವನ್ನು ಬಿಟ್ಟಿರಿದನ್ನೂ ಆದ ಕೈಲಾ॥ ಶ್ರೀಶಾಕಾಶಸಾಸ್ತ್ರಿಗಳ ಪುಣ್ಯದಿನವನ್ನು ಶ್ರೀ ಪಟ್ಟದಸ್ವಾಮಿಗಳ ನೇತೃತ್ವದಲ್ಲಿ ಅತ್ಯಂತ ವೈಭವದಿಂದ ನೆರವೇರಿಸಲಾಯಿತು ಬೆಳಿಗ್ಗೆ ಪಂಡಿತರ ಭಾವಚಿತ್ರಕ್ಕೆ ಪೂಜೆ ಗಣಸಂಕಪೂಜೆ ಆದನಂತರ ಅವರ ಗುಣಗಾನಗಳು ಜರುಗಿ ಹರಿಭಜ್ಜನೆಯೊಂದಿಗೆ ಪ್ರಸಾದ ವಿನಿಯೋಗವಾಯಿತು.

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವ ಕಲಬುರ್ಗಿ

ಪ್ರತಿವರ್ಷ ಪದ್ಧತಿಯಂತೆ ಫಾಲ್ಗುಣ ಶು॥ ೧೪ ಶುಕ್ರವಾರ ರಾತ್ರಿ ೮-೫ಗೆಟೆಗೆ ಇಷ್ಟಲಿಂಗ ಹಿರೇಮಠದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವವನ್ನು ಶ್ರೀಮಾನ್ ಪರಮಪೂಜ್ಯ ಶ್ರೀ ದೊಡ್ಡಪ್ಪಾ ಅಪ್ಪಾ ಉರ್ಫ್ ಶ್ರೀ ಶರಣಬಸವೇಶ್ವರ ಸಂಸ್ಥಾನ ಇವರ ಅಧ್ಯಕ್ಷತೆಯಲ್ಲಿ ಒಳ್ಳೇ ವೈಭವದಿಂದ ನೆರವೇರಿಸಲಾಯಿತು. ಮೊದಲು ಆಚಾರ್ಯ ಭಗವತ್ಪಾದರ ಭಾವಚಿತ್ರಕ್ಕೆ ವಿದ್ಯುಕ್ತಪ್ರಕಾರ ಪೂಜೆಯಾದ ನಂತರ ಶ್ರೀಮಾನ್ ಶಿವಯೋಗಪ್ಪಾ ಸ್ವಾಮಿ ಇವರು ಶ್ರೀ ಜಗದ್ಗುರು ರೇಣುಕಾಚಾರ್ಯ ಲಿಂಗಾವತಾರದ ಬಗ್ಗೆ ನೂತನವಾಗಿ ಭಾಷಣ ಮಾಡಿದರು. ಆಮೇಲೆ ಶ್ರೀ ಪಡಾಕ್ಷರದೇವರು ಪಲ್ಲಾಪುರ ಮಠ ಇವರು ಆಚಾರ್ಯರ ವಿಷಯವನ್ನು ಶಾಸ್ತ್ರೀಯದೃಷ್ಟಿಯಿಂದಲೂ ವಿಚಿತ್ರಾಸಿಕ ದೃಷ್ಟಿಯಿಂದಲೂ ಪಠ್ಯಮಾಡಿದರು. ತರುವಾಯ ಶ್ರೀಮಾನ್ ಬಸವೇಶ್ವಪ್ಪಾ ಪಾವಲಿ ಮತ್ತು ಶ್ರೀಮಾನ್ ವೀರಭದ್ರಪ್ಪಾ ಭಾವಲಿಟ್ಟಿ ಈ ಉಭಯರು ಆಚಾರ್ಯರ ಮತ್ತು ವಿರಕ್ತರಾದ ನಡೆಯುತಿಯ ಮಹತ್ವವನ್ನು ಇತರ ರೊಬ್ಬಿಬ್ಬರಾಗಿ ಹೇಳಿದರು. ತೊಡೆಗೆ ಸದರಿ ಮಠದ ಅಧ್ಯಕ್ಷರಾದ ಶ್ರೀ ಸ॥ ಬ್ರ॥ ಜನದಮ್ಮರಿ ಹಿರೇಮಠ ಶ್ರೀ ಶಾಂತವೀರಶಿವಾಚಾರ್ಯಸ್ವಾಮಿಗಳವರು ಸಮಾಪವಾದ ಈ ವೀರಶೈವ ಮಹಾಸಭೆಯ ಅಭಿವೃದ್ಧಿಯ ಬಗ್ಗೆ ಸವಿಸ್ತಾರವಾಗಿ ಭಾಷಣ ಮಾಡಿದರು ಕೊನೆಯಲ್ಲಿ ಶಿವನ ಸಪ್ತಸ್ಥಾನಗಳ ಪೂಜೆಯನ್ನು ಅವತರಿಸಿದ ಶ್ರೀ ಜ॥ ಪಂಚಾಚಾರ್ಯರು ಸ್ಥಾಪಿಸಿದರೆಂದು ಅನೇಕ ಪ್ರಮಾಣಗಳಿಂದ ಉಪನ್ಯಾಸ ಮಾಡಿದರು ಒಳಿಕ ಮಂಗಳಾರತಿಯಾಗಿ ಆಚಾರ್ಯರ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು ಇದಕ್ಕೆಲ್ಲಾ ಇಷ್ಟೆಲ್ಲ ತರುಣ ಸಂಘದ ಕಡೆಯಿಂದ ಶ್ರೀಮಾನ್ ವಿರಭದ್ರಪ್ಪಾ ಮಸೂತಿ ಇನ್ನಿತರರು ಕೂಡಿ ಬಹು ಪ್ರಯಾಸಪಟ್ಟು ಒಳ್ಳೇ ಪ್ರಸಿದ್ಧಿಯಿಂದಲೂ ಶಾಂತಿಯಿಂದಲೂ ಜರುಗಿಸಿದರು ಇವರೆಲ್ಲಾ ಆ ಜಗನ್ಮಾಯಾ ಮಹನಾದ ಪರಶಿವನು ಕಾಪಾಡಲೆಂದು ಪ್ರಾರ್ಥಿಸುವ,

ಓರ್ವ ಗುರುಭಕ್ತ

ಅಖಿಲ ಭಾರತ ವೀರಶೈವ ಮಹಾಸಭೆ

ಮೇಲ್ಕಂಡ ಮಹಾಸಭೆಯ ೧೬ ನೇ ಸಮ್ಮೇಳನವು ಮಂಗಳೂರಲ್ಲಿ ಜರುಗಲು ಸರ್ವಪಿಠಾಧೀಶರೂ ನಿಶ್ಚಯಿಸಿರುವುದು ಸರಿಯಷ್ಟೆ ನಾವು ಕೈಕೊಂಡಿರುವ ಈ ಮಹತ್ಕಾರ್ಯಕ್ಕೆ ಅನೇಕ ಮಹಾಪೀಠಾಧಿಪರುಗಳಿಂದ ಪ್ರಸಂಶನಾಪತ್ರಗಳು ಬಂದಿವೆ ಇಷ್ಟೂ ಧಾವಿಸಿ ಬರುತ್ತಾ ಇವೆ ಸಮ್ಮೇಳನವು ಈ ಸ್ಥಾಂತ್ಯದಲ್ಲಿ ಜರುಗುವುದು ಜನಜನಿತವಾಗಿರುವಾಗ ಕೆಲವರು ಕಲ್ಯಾಣದಲ್ಲಿ ಪಡೆಯಬಹುದೆಂಬ ಸಂದೇಹದಿಂದ ಪತ್ರವ್ಯವಹಾರ ನಡಸುತ್ತಾ ಇದ್ದಾರೆ ಅಲ್ಲಿ ಸ್ಥಳೀಯ ವೀರಶೈವ ಸಭೆಯಾಗಲಿ ಸ್ವಾಂತೀಯ ವೀರಶೈವ ಮಹಾಸಭೆಯಾಗಲಿ ನಡೆಯಲಿಲ್ಲ ಅಂದಮಾತ್ರಕ್ಕೆ ಆದು ಅಖಿಲ ಭಾರತ ವೀರಶೈವ ಮಹಾಸಭೆಯ ಅಧಿವೇಶನವಲ್ಲ. ಇದಕ್ಕಾಗಿ ಕಳೆದ ನಾಲ್ಕು ತಿಂಗಳಿಂದ ಸುಮಾರು ಆರು ಸಹಸ್ರ ರೂಪಾಯಿ ವೆಚ್ಚಮಾಡಿ ಸ್ವಾಗತಿಸಿ ವ್ಯವಸ್ಥೆಗಳನ್ನೆಲ್ಲಾ ಪೂರೈಸಿ ಇದರ ಅಂಗವಾಗಿ ಕೈಕೊಂಡಿರುವ ಯೋಜನೆಗಳನ್ನೆಲ್ಲಾ ವ್ಯವಸ್ಥಿತವಾಗಿ ನಿರ್ವಹಿಸಿಯಾಗಿ ಇವೆ. ಈ ನನ್ನ ಕಾರ್ಯಕಲಾಪಗಳ ಅಧ್ಯಂತವೆಲ್ಲಾ ವಿನಯವಾಗಿ ಸಮಾಲಾಂಧವರಿಗೆ ಗೊತ್ತಿರುವಾಗ ಈ ಅಧಿವೇಶನವು ಕಲ್ಯಾಣದಲ್ಲಿ ಜರುಗಲು ಶಕ್ಯವಿಲ್ಲ. ಮೇಲಾಗಿ ಈಗ ಆದರೆ ಪ್ರಮೇಯವೇ ಅಲ್ಲಿ ಉದ್ಭವಿಸುವುದಿಲ್ಲ ಕಲ್ಯಾಣದ ಬಸವೇಶ್ವರ ನಂತರ ಅತಿ ಶಕ್ತಶಾಲಿಣಾ ಮಹಕಾರ್ಯಗಳೆಲ್ಲವೂ ಕಾರ್ಯರೂಪದಲ್ಲಿ ಎರಡನೇ ಕಲ್ಯಾಣನಗರವಾಗಲಿರುವ ಮಂಗಳೂರಲ್ಲಿ ಮನಸಾರ ಕಂಡು ಸಮಾಜದ ಕಲ್ಯಾಣಕ್ಕೆ ಪೂರಕ ಯುಗವನ್ನು ಸೃಷ್ಟಿಸಲಿರುವ ಇದೇ ಸ್ಥಳದಲ್ಲಿ ಮಹಾ ಸಭೆಯ ಅಧಿವೇಶನವು ಜರುಗಿಸಲ್ಪಡುತ್ತಿದೆಯೇ ವಿನಾ ಬೇರೆ ಯಾವ ಸ್ಥಳದಲ್ಲೂ ಈಗ ಅವಶ್ಯವೇ ಇರುವುದಿಲ್ಲ.

S Ayyrnna Setty
ಟ್ರಸ್ಟಿಯರ್
ಅ॥ ಭಾ॥ ವೀ॥ ಸಭಾ ಅಧಿವೇಶನ ಸಮಿತಿ.

ಪಂಚಾಚಾರ್ಯಪ್ರಭಾ

೧೯೫೩ನೆಯ ಮಾರ್ಚ್ ಶಾ॥ ೧೬ ನೇ ಸೋಮವಾರ

ವಿಜಯಸಂವತ್ಸರದ ಶುಭಾಶಯಗಳು

ಸೃಷ್ಟಿಕರ್ತನಾದ ಶ್ರೀ ಜಗದೀಶ್ವರನ ಅನುಗ್ರಹದಿಂದ ಇಂದು ವಿಜಯಸಂವತ್ಸರವು ಆರಂಭವಾಯಿತು ವೇದಾಗಮಾದಿಗಳಿಗಾದ ಭಾರತೀಯರು ಸಂವತ್ಸರದ ಈ ಮೊದಲನೇ ದಿನವನ್ನು ಯುಗಾದಿಯೆಂದು ಕರೆಯುವ ಸಂಪ್ರದಾಯವು ಜಗನ್ನಾದಿಯಿಂದ ನಡೆದುಬಂದುದಾಗಿದೆ ಈ ಯುಗಾದಿ ಹಬ್ಬವನ್ನು ಎಲ್ಲ ಹಬ್ಬಗಳಿಗಿಂತ ದೊಡ್ಡದಾಗಿ ಆಚರಿಸುವರು ಸರ್ವಶಕ್ತನಾದ ಪರಮೇಶ್ವರನಲ್ಲಿ ನಾಮರೂಪಕ್ರಿಯೆಗಳಲ್ಲದ ಸೂಕ್ಷ್ಮರೂಪದಲ್ಲಿರುವ ಚರಾಚರಾತ್ಮಕವಾದೀ ಜಗತ್ತು ಆ ಶಕ್ತಿಯ ವಿಕಾಸಾವಸ್ಥೆಯಿಂದ ಸೃಷ್ಟಿಕಾರಂಭವನ್ನು ಹೊಂದಿ ಯಾವ ದಿವಸ ಕಾಣಿಸಿತೊ ಅದೇ ದಿನವನೇ ಜೈತ್ರ ಶುದ್ಧ ಪ್ರತಿಪದ ದಿವಸವು ಇವತ್ತೂ ಜಗತ್ಸೃಷ್ಟಿಯ ಸ್ಮಾರಂಭದ ದಿನವೆಂದು ಕರೆಯುತ್ತಾರೆ ಆ ಕಾರಣದಿಂದಲೇ ಇದಕ್ಕೆ ಯುಗಾದಿ ಎಂಬ ಹೆಸರು ಪ್ರಸಿದ್ಧವಾಯಿತು ಈ ಹಬ್ಬವನ್ನು ಬಹಪ್ರಕಾರಗಳಿಂದ, ಶ್ರೀಮಂತನಾಗಲಿ ಎಲ್ಲ ಸ್ಥಿತಿಗತಿಯು ತಮ್ಮ ಶಕ್ತ್ಯನುಸಾರಗಳನ್ನು ಯೋಚಿಸಿ ಸಂತೋಷದಿಂದ ಸಾಗಿಸಿದ್ದಾರೆ ಬಡವನಾಗಲಿ, ಶ್ರೀಮಂತನಾಗಲಿ ಎಲ್ಲ ಸ್ಥಿತಿಗತಿಯು ತಮ್ಮ ಶಕ್ತ್ಯನುಸಾರಗಳನ್ನು ಯೋಚಿಸಿ ಸಂತೋಷದಿಂದ ಸಾಗಿಸಿದ್ದಾರೆ ಮನೆಮನೆಗಳಿಗೆ ಸಾರಣೆ ರಂಗವಲ್ಲಿಯಾದಿಗಳಿಂದ ಅಲಂಕರಿಸಿ ತ್ರಿಲಾಭ ಂಜನೆವನ್ನು ನೆರವೇರಿಸಿ ಸಂತೋಷದಿಂದ ಮನೆಮನೆಗಳಿಗೆ ಸಾರಣೆ ರಂಗವಲ್ಲಿಯಾದಿಗಳಿಂದ ಅಲಂಕರಿಸಿ ತ್ರಿಲಾಭ ಂಜನೆವನ್ನು ನೆರವೇರಿಸಿ ಮುಂದಿನ ವರ್ಷವೆಲ್ಲಾ ಸಂಪೂರ್ಣ ಆರೋಗ್ಯಪ್ರಾಪ್ತಿಗಾಗಿ ಸಿಂಬಿಪತ್ರೆ ಭಕ್ಷಣಾದಿಗಳಿಂದ ತನ್ಮೂಲಕ ಇಷ್ಟಮಿತ್ರ ಬಂಧುಬಾಂಧವರೊಡಗೂಡಿ ನೈಷ್ಟಾನ್ನ ಭೋಜನವನ್ನು ಮಾಡಿ ನೂತನಾಂಬರಗಳನ್ನು ಧರಿಸಿಕೊಂಡು ಗುರು ಮಂದಿರ ದೇವಮಂದಿರಗಳಿಗೆ ಹೋಗಿ ಜ್ಯೋತಿಷ್ಯರಿಂದ ಪಂಚಾಂಗಶ್ರವಣ ಮಾಡಿ ಹೊಸ ವರ್ಷದ ಕಷ್ಟಸುಖಗಳನ್ನೂ ಪ್ರಪಂಚದ ಸ್ಥಿತಿಗತಿಗಳನ್ನೂ ತಿಳಿದ ಕೊಂಡು ಆ ದಿನವೆಲ್ಲಾ ಸಂತೋಷದಿಂದ ಕಳೆಯುವ ಪದ್ಧತಿಯು ಎಂದಿನಿಂದಲೂ ನಡೆಯುತ್ತ ಬಂದಿರುವದು ಈ ಶುಭ ದಿನವು ವರ್ಷಕ್ಕೊಮ್ಮೆ ಮಾತ್ರ ದೊರೆಯುವುದು ನಾವು ಎಷ್ಟು ಸಂತೋಷದಿಂದ ಹೆಚ್ಚುವನ್ನು ಆಚರಿಸುತ್ತೇನೆಯೋ ಅಷ್ಟು ಸಂತೋಷವು ಆ ವರ್ಷವೆಲ್ಲಾ ನಮಗುಂಟಾಗುತ್ತದೆ

ಜೊನವರ್ಷದ ಫಲಾಫಲಗಳು

ಈ ವರ್ಷದ ಶ್ರಾವಣ ಶು॥ ೧೫ರ ವರೆಗೆ ಗುರುವು ವೃಷಭರಾಶಿಯಲ್ಲಿರುವನು

ವೃಷಭನೇಲಾಲು ಗುರುವು।
ಪಸುಭಿಯೊಳು ಸುಳಿಯುತ್ತು
ಶಿಶು ಸಮುವು ಶ್ರೀಗೆ ಜಯಂಕ್ಕೂ ಜನರಿಲ್ಲ
ಮಿಸುಸುಯಿಂತಕ್ಕು ಸರ್ವಜ್ಞ ॥

ಎಂಬಂತೆ ಸುಭಿಕ್ಷವಾಗಿ ಜೈನ ಹೆಜ್ಜಾಗಿ ಮಳೆ ಬೆಳೆ ಸಮೃದ್ಧಿಯಾಗಿ ಜನಗಳಿಗೆ ತುಂಬಾ ಸಂತೋಷವಾಗುತ್ತದೆ ಮುಂದೆ ಮಾರ್ಗಶೀರ್ಷ ಶು॥ ೫ ವರೆಗೆ ಗುರುವು ಮಿಥುನರಾಶಿಯಲ್ಲಿರುವನು

ಮಿಥುನಕ್ಕೆ ಗುರುಬರಲು।
ಮಿಥುನಲೋಕವೊಳಕ್ಕು।
ಪೃಥುವಿಯೊಳಗೆಲ್ಲ ಬಲವಕ್ಕು ನರಪಶುವು
ಹಿತಮಾಗಲಕ್ಕು ಸರ್ವಜ್ಞ ॥

ಎಂಬಂತೆ ಜಗತ್ತಿನಲ್ಲಿ ಯುದ್ಧಭಯವೂ ಆಹಾರ ಜನ, ಧನ ನಷ್ಟವೂ ಆಹಾರಕೊರತೆಯೂ ಕಂಡುಬರುತ್ತದೆ ಈ ವರ್ಷ ಹದಿನಾಲ್ಕು ತಿಥಿಗಳು ಕ್ಷಯದಾಗಿ ಎಂಟು ತಿಥಿಗಳು ವೃದ್ಧಿಯಾಗಿ ಮೇಷ ಸಂಕ್ರಾಂತಿ ಹಗಲಾಗಿರುವದರಿಂದಲೂ, ನೈಕಾಬಮಾಸವು ಅಧಿಕವಾಗಿರುವುದರಿಂದಲೂ ಮೇಷ, ವೃಷಭ, ಮಿಥುನರಾಶಿಗಳನ್ನು ಸಂಚಾರಮಾಡುವ ಗುರುಮಹಾರಾಜನ ಯೋಗವಿರುವುದರಿಂದಲೂ ಎರಡು ಹಂದ್ರಗ್ರಹಣವಿರುವುದರಿಂದಲೂ ಲೋಕಕ್ಕೆ ಸಾಧಾರಣ ಸುಖವೂಂಟು ಸಾಧಾರಣ ಮಳೆ ಬೆಳೆಗಳುಂಟು ರಟ್ಟುಮತಾನುಸಾರವಾಗಿ ಇಡೀ ಪ್ರಪಂಚದ ರಾಜಮುಖ್ರಿಗಳು ಮಾಯವಾಗುತ್ತವೆ ಚಂದ್ರನು ರಾಜ ಮಂತ್ರಿಗಳ ಸ್ಥಾನದಲ್ಲಿರುವುದರಿಂದ ಶಾಂತಿಯ ಯೋಗವು ಕಂಡುಬರುತ್ತದೆ ರವಿಯು ಸೇನಾನಾಯಕನಾದ್ದರಿಂದ ಸೈನ್ಯಕ್ಕೆ ಆರಿಷ್ಟವು ಸಂಭವಿಸುವುದು ತುಲಾರಾಶಿಯಲ್ಲಿ ಶನಿಇರುವುದರಿಂದ ಧಾನ್ಯಗಳು ತೀಜಿಯಾಗುತ್ತವೆ ಜನಗಳಿಗೆ ಕ್ಲೇಶವೂ, ಅಲ್ಪ ವೈಶ್ಯಿಯೂ, ಅಗ್ನಿಭಯವೂ, ದುರ್ಜಿನ ಅಡಚಣಿಯೂ ಕಂಡುಬರುತ್ತದೆ

ಒಟ್ಟವಲ್ಲಿ ಕಳೆದ ದಿನಗಳು ಸುಖವೆಂದೂ ಒರುವ ದಿನಗಳು ಕಷ್ಟವೆಂದೂ ತೀರ್ಮಿ ಎಲ್ಲರೂ ಸತ್ಯವಂತರಾಗಿ ಧರ್ಮದಿಂದ ನಡೆದು ಶಿವನ ಪ್ರೀತಿಗೆ ಪಾತ್ರರಾಗಲು ಒಯಸುಬೇಕು ಈ ಅಧಿನಿಕಾಲದಲ್ಲಿ ಜಗತ್ತು ಎಷ್ಟೋ ರೀತಿಯಲ್ಲಿ ಮುಂದುವರಿದ್ದರೂ ಅದರಿಂದ ಯಾರಿಗೂ ಸುಖವಿಲ್ಲ ದಡ್ಡರಾಗಿದ್ದ ನಮ್ಮ ಹಿರಿಯರ ಕಾಲದ ರಾಜ್ಯವೇ ಎಷ್ಟೋಪಾಲು ಮೇಲೆಂದು ಹೇಳ ಬಹುದು ನಮ್ಮನ್ನ ಒಂದಿಯ ಎಷ್ಟು ವಿಕಸಿತವಾಗಿತ್ತೆ ಹೊರಗೆ ಪ್ರಪಂಚವೂ ಅದರ ಬಿಂದಯೇ ಇದ ಜ್ಞಾನ ರಂದ ದಲ್ಲಿಯೇ ಜಗತ್ತಿ ಪ್ರಜೆಗಳು ಧರ್ಮವ ತೆಗಾಗಬೇಕು ಅದಲ್ಲಿ ಸರ್ಕಾರವು ಸಹಾಯವಾಡಬೇಕು ಅಂದರೇನೇ ರಾಜ ದಲ್ಲಿ ಸುಖ ಶಾಂತಿಗಳು ನೆಲಸುವವು ದರ್ಮದ ಬೀಡ ನಿದ್ದ ನನ್ನ ದೇಶದಲ್ಲಿ ವಿದೇಶೀಯರ ಉಸಿ ಕಣಡಿಸಿದು ದರ್ಮವು ನಾಶವಾಗಿಹತ್ತಿ ಇಷ್ಟೆಲ್ಲಾ ಕಷ್ಟ ನಷ್ಟಗಳನ್ನು ಅನುಭವಿಸಬೇಕಾಗಿದೆ ಇದೆಲ್ಲಾ ಕಲಿಯಲಿಕ್ಕೆ

ಈ ವಿಜಯಸಂವತ್ಸರದಲ್ಲಿ ದೇಶವು ಮಳೆ ಬೆಳೆ ಗಳಿಂದ ಸಮೃದ್ಧಿಯಾಗಿ ಧೈರ್ಯಗಳು ಹೆಚ್ಚಾಗಿ ಜನರು ಆರೋಗ್ಯವಂತರಾಗಿ ಬಾಳಲೆಂದೂ ನನ್ನ ಚಿಂಪಾದಾರ ರಿಗೂ, ವಾಚಕರಿಗೂ ಜಯ ವುಂಬಾಗಿ ಸದಾ ಧರ್ಮದಿ ದ ನಡೆಯು ವಂತೆ ಶ್ರೀ ಜಗದ್ಗುರು ಪಂಚಾಚಾರ್ಯರು ಸದ್ಬುದ್ಧಿಯನ್ನು ಅನುಗ್ರಹಿಸಲೆಂದೂ ಈ ಶುಭದಿನದಲ್ಲಿ ಪರಮಾತ್ಮನನ್ನು ಪ್ರಾರ್ಥಿಸಿ ಶುಭಾಶಯಗಳನ್ನು ಕೋರುತ್ತೇವೆ

ಚಿಕ್ಕಮಣ್ಣೂರು ಶ್ರೀಗಳವರ ಧರ್ಮೋಪದೇಶ ಮಾಗಡಿ

ಮನುಷ್ಯ ಜನ್ಮ ಪಡೆದ ಪ್ರಯೊಬ್ಬ ಭಾರತೀಯ ಸ್ತ್ರೀಪುರುಷರು ಅನಾಚಾರಿಗಳಾಗದೆ ಸದಾಚರಣೆ ಯಲ್ಲಿಯೇ ಮಗ್ನರಾಗಿ ದೇವತ್ವ ಋಷಿತ್ವವನ್ನು ಪಡೆದು ಅಕಾಪ್ಪಿತವಾದ ಭೋಗೋಪಕರಣಗಳನ್ನು ಹೊಡೆ ದೋಡಿಸಿ ನಿಜವಾದ ನೋಪ್ಪಸುಖ ಪಡೆಯುವದೇ ಜೀವನದ ಗುರಿಯಾಗಿದೆ ಗುರುಭಕ್ತಿ, ಶಿವಭಕ್ತಿ ಯಲ್ಲಿ ಯಾರು ದೂರವಾಗುತ್ತಾರೋ ಅವರಿಗೆ ಶಿವನ ದರ್ಶನವೇ ಆಲಾರದು ಇದರಿಂದ ಪ್ರಯೋಜನವೇನು ನನ್ನ ಪಾದಗಳ ಮೇಲೆ ನಾಮಾಗಿಯೇ ಕಲ್ಲು ಕೆಡವಿ ಕೊಂಡು ವೃಥಿಸಡುವ ಹಾಗೆ ನಾವು ಮಾಡುತ್ತಿರುವ ಅಧರ್ಮವೇ ನನ್ನನ್ನು ಕೊಲೆಮಾಡಲಿಕ್ಕೆ ಹತ್ತುವದು ಕೊಡ್ಡಿಯೊಳಗೆ ಕಾವು ಸೇರಿದರೆ ವೈಸ್ಥವು ನಾಶವಾಗು ವಂತೆ ಅಧರ್ಮಮಾರ್ಗ ಯಾತನೆಯೆಂದು ಮಾನವರು ವೃದ್ಧಿಯಲ್ಲಿರಬಾರದೆ ಪ್ರಸಾದಕ್ಕೂ ಕೊರತೆ ಬರುವ ಪುಸಕ್ತಿ ಉಂಟುಗುತ್ತದೆ ಇನ್ನಾದರೂ ಭಕ್ತಿಪ್ರೇಮಾದಿಗಳನ್ನು ಪೆಲೆಗೊಳಿಸಿ ಪೂಜಾನಿಷ್ಠರಾಗಬೇಕು ಮಾನವರಲ್ಲಿ ದಯಾದಾಕ್ಷಿಣ್ಯಾದಿಂದ ವರ್ತಿಸಿ ಸಮಾಜದಲ್ಲಿ ಶ್ರೀ ಮಕ್ಕಳ್ಳರಂತೆ ಹೆಸರುವಾಸಿಗಳಾಗಬೇಕು. ಜನಗಳಲ್ಲಿ ಹೆಮ್ಮೆಯನ್ನು ಮಾಡುಬಾರದು ಇದೇ ಹೆಮ್ಮೆಯಿಂದಲೇ ನಮ್ಮ ಸಮಾಜ ಅಧೋಗತಿಗೆ ಕಾರಣವಾಗಿ ಅನೈಕ್ಯತೆಯಿಂದ ಗುರುಹಿರಿಯರಲ್ಲಿ ಮನ ಸ್ಸಾಸ, ರಾಜಾಜರಲ್ಲಿ ಪ್ರೇಮಭಾವ ಕಡಿಮೆ ಪ್ರಯುಖ ಜನಗಳು ಒಬ್ಬರಿಗೊಬ್ಬರು ಸೇರದಂತೆ ಆದಲ್ಲಿ ರಾಜ ನೀತಿಗಳು ಧರ್ಮನೀತಿಗಳು ಕೆಟ್ಟುಹೋದವು ಹಿಂದಕ್ಕೆ ದೇವಲೋಕದಲ್ಲಿ ಮತಿಷ್ಠ ವಿಶ್ವಾಮಿತ್ರರಲ್ಲಿ ಜಾಹಿಜ್ಞೆ ನೀಡಿಜ್ಞೆ ಎಂಬ ಅಭಿಮಾನವೇ ಕೆಡಿಸಿತು ಕ್ಷತ್ರಿಯನು ಹೋಗಿ ಬ್ರಹ್ಮಋಷಿ ಆಗ ಬೇಕೆಂಬ ಮಹತ್ವಾಕಾಂಕ್ಷೆ ಉಟಾಯಿತು ಶಿವಭಕ್ತಿ ತಿರೋಧಾನಗೆಗಳ ಮೇಲೆ ಪಾರಿಜಾತ ಕೋಪ ಹೆಜ್ಜಾ ಯಿತು. ದಕ್ಷಪ್ರಜ್ಞಾಪತಿಂದ ಶಿವನ ಪಾತ್ರಭಂಗವಾದಲ್ಲಿ ಪರಶಿವನ ಜಟಾಜುಟದಿಂದ ಮಹಾವೀರಭದ್ರನು ಜನಿಸಿ ಸಿರವನ್ನೇ ತೆಗೆದು ಅವನ ಗರ್ವಾಣತವನ್ನು ಬಳಿಕ ಟೆಗಳಿಗೆ ಮುಖವನ್ನಿಟ್ಟು ಜೀವಕಳೆಯನ್ನುಂಟುಮಾಡಿ ವೀರಭದ್ರನ ಸೇವೆಯಲ್ಲಿಯೇ ನಿರತನಾಗಬೇಕಾಯಿತು. ನಾರಸಿಂಹನೆಮೇಲೆ ಶರಭನ ಕ್ರೋಧವಾಯಿತು ಸೃಷ್ಟಿ ಕರ್ತನಾದ ಬ್ರಹ್ಮನನ್ನು ಯಾರೂ ಪೂಜಿಸಬಾರದೆಂಬ ಶಾಪದಿಂದ ಪೂಜಾರಹಿತನಾಗಿ ಚತುರ್ಮುಖ ಬ್ರಹ್ಮನೆಂಬ ನಾಮವೇ ಕಾರಣವಾಯಿತು ಇದರಿಂದ ಈ ವ್ಯತ್ಯಯೋದಯದಲ್ಲಿಯೂ ಕೂಡ ಶತಯಜ್ಞೆಗಳನ್ನು ಮಾಡುವ ಪುಣ್ಯಕೃತರುಮೇಲೆ ದೇವೇಂದ್ರನ ಪಟ್ಟು ಅನೇಕ ವಿಘ್ನೆಗಳನ್ನು ಮಾಡಿವದು ಹೆಜ್ಜಾಯಿತು. ವೈಷ್ಣವ ಛೇದಿಸರಲ್ಲಿ ದ್ವೇಷಾಸೂಯಗಳ ಮೂಲಕ ಬ್ರಾಹ್ಮಣ ಬ್ರಾಹ್ಮಣೇತರರಲ್ಲಿ ವಿರಿದ್ಧಗಳೇ ಕೆಟ್ಟ ಪರಿಣಾಮಕ್ಕೆ ಕಾರಣವಾದವು ಹಿಂದೂ ಮುಸಲ್ಮಾನ ರಲ್ಲಿಯೂ ತಂಟೆ, ಹಿಂದೂ ಕ್ರೈಸ್ತರಲ್ಲಿ ಮತಭೇದ, ಹಿಂದುಗಳಗೂ ಜೈನರಿಗೂ ಒದ್ದಡ್ಡೇಸ, ಗುರು-ವಿರಕ್ತರಲ್ಲಿ ದ್ವೇಸ, ಕಾಂಗ್ರೆಸ್ ಜನಗಳಲ್ಲಿ ಅನ್ಯೈಕ್ಯತೆ, ದೇವರಲ್ಲಿ ದ್ವೇಷವಾಡುವದು ವಿಷ್ಣುಸಂಧಿಗಳು ಶಿವಲಂಥಕ್ಕೆ ಸೇರ ವುದಿಲ್ಲ ಹೀಗೆ ಒಬ್ಬರಮೇಲೊಬ್ಬರು ಕ್ರೋಧ ಹಾಗೂ ಮತ್ಸರ ಬುದ್ಧಿ ತೋರಿಸುವರು ಕೂಲಿಕೆಷ ವಾಗಿ ವಿಚಾರಮಾಡಿ ನೋಡಿದರೆ ಸಮಾಜದ ಜನಗಳ ಉದ್ಧಾರ ಹೇಗೆ ಆಗಬೇಕೆಂದು ಇಲ್ಲಿ ನೆರವೇರಿದ ಸಭಿಕರೇ ತಿಳಿಯಬೇಕು ಅದಕ್ಕಾಗಿಯೇ ದೀರ್ಘ ಮರ್ಯಾದೆ ಉಳ್ಳ ಸಜ್ಜನರು ಕಾಗೂ ಸತ್ಪುರುಷರು ಬಳಲಿ ಬೆಂಡಾಗಿ ಜಗತ್ಪಿತೃಲ್ಲಿ ಇರುವದಕ್ಕಿಂತ ಮರಣ ಹೊಂದುವದೇ ಉತ್ತಮವೆಂದು ಹಾರ್ದಿಸುವರು ಅಮ್ಮ ಜಗಜ್ಜನಕನಾದ ಪರಮೇಶ್ವರನು ಒಬ್ಬನೇ ಆಗಿದ್ದಾ ನೆಂದು ಸಮಸ್ತ ಧರ್ಮದವರು ನಂಬುತ್ತಾರೆ ಜಗತ್ತಿನ ಜನಲೆಲ್ಲಾ ಒಬ್ಬನೇ ಪರಮಾತ್ಮನ ಮಕ್ಕಳೆಂಬ ಮಾತಿಗೆ ಸರ್ವಜನರ ಅಂತರಂಗಗಳು ಸ್ಪಷ್ಟಿಕರಿಸುತ್ತವೆ ಧ್ಯೆಯ ಸ್ಥಿರ ಅಂತರಂಗಗಳಲ್ಲಿ ಅಹಂಕಾರವೆಂಬ ಸೈತಾನನು ಸೇರಿದ ಕೂಡಲೇ ಎಲ್ಲರ ಮನಸ್ಸಿಗೆ ವಿಕರಿತವಾಗಲಿಕ್ಕೆ ಕಾರಣವಾಗುವದು ಇನ್ನು ಮೇಲೆ ಇಂತಹ ಮತಭೇದ ಬಿಟ್ಟು ಒಬ್ಬರಿಗೊಬ್ಬರು ಸಹನತಕ್ಕೆ ಉಳ್ಳವರಾಗಿ ಕೇವಲ ಸಹೋದರರಂತೆ ಜೀವಿಸ್ಥಿಸ್ಥರಂತೆ ನಡೆದು ಕೊಂಡರೆ ಆಗ್ಗೆ ನಾವು ಧನ್ಯರಾಗುವೆವೆ ಸುಖ ಶಾಂತಿ ಸೈರನೆ ಎಲ್ಲರಲ್ಲಿಯೂ ಉಂಕಾರಿಸಿ ದೇವೋನ್ನತಿಗೆ ಕಾರಣವಾಗಬೇಕೆಂಬುದೇ ನಮ್ಮ ಆಪೇಕ್ಷೆ ಎಂದು ಸಮಸ್ತ ಧರ್ಮದವರು ತಲೆದೂಗುವಂತೆ ತಮ್ಮ ಅಮೃತವಾಣಿ ಯಿಂದ ವ್ಯಾಖ್ಯಾನಮಾಡಿದರು ಮಹಶಯರೇ ಚಿಕ್ಕ ಮಣ್ಣೂರು ವೆ ತಾಸ್ಯಾಗಿಗಳವರು ಈಗ ೨೦-೨೫ ವರ್ಷಗಳನಿರವಿಗೆ ನಮ್ಮ ಕರ್ನಾಟಕ ಅಂದ್ರದೇಶ ದಲ್ಲಿಯೂ ಸಂಚರಿಸಿ ಎಷ್ಟೋ ಸಭೆಗಳನ್ನು ಮಾಡಿ ಅನೇಕ ಧರ್ಮದವರನ್ನು ಸುಧಾರಿಸಿರುವರು ಸ್ವತ್ಯ ವಾದದ್ದು ಈ ಮಹತ್ಕಾರಿ ಸಕಲ ಮತೀಯರು ಇವರ ಅಮರವಾಣಿ ರಸಕ್ಕೆ ಕೇಳದವರು ಜ್ಞಾನತಿನೆಯೋಗಿ ಗಳೆಂದು ಕೊಂಡಾಡುವರು ಇಂತಹ ಪೂಜ್ಯಪಾದರ ಸಂಚಾರದಿಂದ ಜನಗಳಲ್ಲಿ ಭಕ್ತಿರಸ ಹುಟ್ಟುವದೆಂದು ತಿಳಿಸುವ,

ಮಲ್ಲನೆಗೌಡಾ ಬಸವನಗೌಡಾ ಮಾಗಡಿ.

ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವ, ಮಾಂಗಳೂರ

ಶಾ॥ ೨೭-೨ ೫೩ ಶುಕ್ರವಾರ ಶ್ರೀ ಜ॥ ರೇಣುಕಾಚಾರ್ಯರ ಭಾವಚಿತ್ರಕ್ಕೆ ಪೋಡಶೋಪಚಾರಗಳಿಂದ ಪೂಜೆ ಆದನಂತರ ಲಾಧನೆ ನಡೆಯಿತು. ಸಾಯಂಕಾಲ ಶ್ರೀ ಪಟ್ಟದಸ್ವಾಮಿಗಳ ದಿವ್ಯಾಜ್ಞೆಯಲ್ಲಿ ನೆರೆದ ಸಭಿಕರಿಗೆ ಶ್ರೀ ಜ॥ ರೇಣುಕಾಚಾರ್ಯರ ಅನುಂಚಲಿಲೆಗಳನ್ನು ಉಪದೇಶಿಸಿದ ನಂತರ ಸಭಾಕಾರ್ಯಕ್ರಮವು ಪೂರ್ತಿಗೊಂಡಿತು ಸರ್ವರಿಗೂ ಶ್ರೀ ಜ॥ ರೇಣುಕಾಚಾರ್ಯರು ನೈಷ್ಯಮಂಗಲವನ್ನೀಯಲೆಂದು ಪ್ರಾರ್ಥಿಸುವ,

ಶ್ರೀಸಂಗಪಗೌಡ-ಪೋಲೀಸ, ಪಾಟೀಲ,
ಮಂಗಳೂರ

ಎಡೆಯೂರು ಶ್ರೀಸಿದ್ಧಲಿಂಗೇಶ್ವರಸ್ವಾಮಿಯ ರಥೋತ್ಸವ

ಕರ್ನಾಟಕ ರಕ್ಷಣಿಸ್ತ್ರಾಸಾಧಿಶ್ವರ ಶ್ರೀ ಜಯ ಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ., ಜಿ. ಸಿ. ಐ. ಯವರಿಂದ ಪರಿಪೋಷಿತ ಮಾದ ತುಮಕೂರು ಜಿಲ್ಲಾ ಕುಣಿಗಲ್ ತಾಲ್ಲೂಕು ಎಡೆಯೂರು ಕ್ಷೇತ್ರದಲ್ಲಿ ನೆಲೆಗೊಂಡಿರುವ ಶ್ರೀ ಸಿದ್ಧಲಿಂಗೇಶ್ವರಸ್ವಾಮಿಯ ಜಾತ್ರೆಯಲ್ಲಿ ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ೧೮೫೭ ನೆಯ ಶ್ರೀ ವಿಜಯನಾಮ ಸಂವತ್ಸರದ ಚೈತ್ರ ಶುದ್ಧ ೧೫ ಪಾಡ್ಯಮಿಯಿಂದ ಶುದ್ಧ ೧೫ ಪೌರ್ಣಮಿವರೆಗೆ ನಡೆಯುವ ಉತ್ಸವಗಳು —

ತಾ|| ೧೬-೩-೧೯೫೬ ನೇ ಸೋಮವಾರ ಯುಗಾದಿ ಹಬ್ಬ ಈ ದಿನ ಬೆಳಿಗ್ಗೆ ಮಹಾಗಣಪತಿಪೂಜಾ, ಸ್ವಸ್ತಿವಾಚನ, ಧ್ವಜಾರೋಹಣ, ಮಧ್ಯಾಹ್ನ ಪಾಲಕಿ ಉತ್ಸವ (ಸರ್ಕಾರಿ) ರಾತ್ರಿ ವೃಷಭವಾಹನ, ೨೧-೩-೧೯೫ ನೇ ಶನಿವಾರ ಮಧ್ಯಾಹ್ನ ಪಾಲಕಿ ಉತ್ಸವ (ಸರ್ಕಾರಿ) ಅನಂತರ ಇದೇ ಊರಿನಲ್ಲಿರುವ ಶ್ರೀ ಜಗದ್ಗುರು ರಂಭಾಪುರೀ ಸಂಸ್ಥಾನದ ಮಠಕ್ಕೆ ಶ್ರೀ ಸ್ವಾಮಿಯವರನ್ನು ನಿಜವಾಡಿಸಿ ಪಾನಕ ಫಲಾಹಾರ ವಿನಿಯೋಗ ೨೨ ನೇ ಭಾನುವಾರ ಮಧ್ಯಾಹ್ನ ೧೨ ಗಂಟೆಗೆ ಮಹಾ ರಥಾರೋಹಣ (ಸರ್ಕಾರಿ) ೨೪ ನೇ ಮಂಗಳವಾರ ರಾತ್ರಿ ಶೇಷವಾಹನ ಅನಂತರ ೯ ಗಂಟೆಗೆ ಬೆಳ್ಳಿಪಲ್ಲಕ್ಕಿ ಉತ್ಸವ ಶ್ರೀಮನ್ಮಹಾರಾಜರವರ ರಾಯಲ್‌ಫ್ಯಾಮಿಲಿ ೨೫ ನೇ ಭಾನುವಾರ ಬೆಳಿಗ್ಗೆ ಶ್ರೀ ಸ್ವಾಮಿಯವರಿಗೆ ಪಂಚಾಮೃತಾಭಿಷೇಕ, ಅಷ್ಟೋತ್ತರ ಬಿಲ್ವಾರ್ಚನೆ ೩೦ ನೇ ಸೋಮವಾರ ಶ್ರೀ ಸ್ವಾಮಿಯವರಿಗೆ ಶ್ರೀಲಲಿತಾಧ್ಯಯನ ಪೂರ್ವಕ ಮಹಾಭಿಷೇಕ ಮತ್ತು ಧ್ವಜಾರೋಹಣ (ಸರ್ಕಾರಿ) ಈ ರೀತಿ ಉತ್ಸವಗಳು ನಡೆಯುವುದಲ್ಲದೆ ಭಕ್ತಾದಿಗಳು ಆಷೇಕ್ಷಿಸಿದಲ್ಲಿ ಅವರವರಿಗೆ ಇಷ್ಟವಾದ ಸೇವಾ ಉತ್ಸವಗಳು ಪ್ರತಿಸಲ್ಲುತ್ತವೆ. ಈ ಮಹೋತ್ಸವಾದಿಗಳಿಗೆ ಸಮಸ್ತ ಭಕ್ತಾದಿಗಳೂ ಆಗಮಿಸಿ, ಶ್ರೀಗುರು ದೇವತಾ ಸೇವೆಯಿಂದ ಧನ್ಯರಾಗಬೇಕಾಗಿ ಕೋರಿಕೆ

ಕೆ. ಎಸ್. ರುದ್ರಪ್ಪ, ಧರ್ಮದರ್ಶಿ

ವರ್ತಮಾನ ಸಂಗ್ರಹ

ಕರ್ನಾಟಕ ಸ್ಥಾಂತ್ಯರಚನೆ

ಭಾರತ ಸರಕಾರದ ಭರವಸೆ ಅಗತ್ಯ

ಆಂಧ್ರಪ್ರಾಂತ್ಯ ಸ್ಥಾಪನೆ ಆದ ಕೂಡಲೇ ಕರ್ನಾಟಕ ಪ್ರಾಂತ್ಯ ರಚನೆ ಆಗುವುದೆಂಬುದಾಗಿ ಭಾರತ ಸರಕಾರ ಭರವಸೆ ಈಯಬೇಕು ಎಂಬುದಾಗಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಸ್ ನಿಜಲಿಂಗಪ್ಪ ನವರು ತಿಳಿಸಿದ್ದಾರೆ

ಪ್ರತ್ಯೇಕ ಕರ್ನಾಟಕ ಪ್ರಾಂತ್ಯ ಸ್ಥಾಪನೆಗಾಗಿ ಅನೇಕ ಮಿತ್ರರು ಉಪವಾಸ ವ್ರತವನ್ನು ಆಚರಿಸುತ್ತಿರುವುದೂ ತಮಗೆ ದುಃಖವುಂಟುಮಾಡಿದೆಯೆಂದೂ ಶ್ರೀ ಎಸ್ ಎ ಪೈರವರು ಅಮರಣಾಂತ ಉಪವಾಸ ಆರಂಭಿಸಿದ್ದಾರೆಂದೂ ಅವರು ಸೂಚಿಸಿದರು

ಆಂಧ್ರಪ್ರಾಂತ್ಯ ಸ್ಥಾಪನೆ ಆದ ಕೂಡಲೇ ಕರ್ನಾಟಕ ಪ್ರಾಂತ್ಯ ಸ್ಥಾಪನೆಗೆ ಕೈಕಾಕಲು ಹೈದರಾಬಾದ್ ಕಾಂಗ್ರೆಸ್ ಅಧಿವೇಶನದಲ್ಲಾದ ನಿರ್ಣಯ ಅಡ್ಡಿಬರುವುದಿಲ್ಲವೆಂದು ಅವರು ತಿಳಿಸಿದರು ಈ ಬಗ್ಗೆ ಯಾರೂ ಉಪವಾಸ ಇತ್ಯಾದಿ ಕಾರ್ಯಕ್ರಮಗಳನ್ನು ಕೈಗೊಳ್ಳಬಾರದೆಂದೂ, ಇಂಡಿಯಾ ಸರಕಾರದ ತೀರ್ಮಾನವನ್ನು ಎದುರುನೋಡಬೇಕೆಂದೂ ಅವರು ಪ್ರಾರ್ಥಿಸಿದರೆ. ಭಾರತ ಸರಕಾರದವರು ಸಹ ಕರ್ನಾಟಕ ಪ್ರಾಂತ್ಯ ರಚನೆಯನ್ನು ಸಾವಕಾಶ ಮಾಡುವದಿಲ್ಲವೆಂದು ಭರವಸೆ ಕೊಡಬೇಕೆಂದು ಅವರು ಪ್ರಾರ್ಥಿಸಿದರು

ದೆಹಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಕಂಡು ಬಂದ ವಿಶಾಭಿಪ್ರಾಯ

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸೇರಿ ಶಾಶ್ವಾರಿಗಾಗಿ ಆಂಧ್ರಪ್ರಾಂತ್ಯದ ರಾಜಧಾನಿಯನ್ನು ಮದರಾಸಿನಲ್ಲಿ ಸ್ಥಾಪಿಸುವ ಬಗ್ಗೆ ತಮಿಳರ ಮತ್ತು ಆಂಧ್ರರ ಅಭಿಪ್ರಾಯವನ್ನು ಕೇಳಿದರು

ಆಂಧ್ರಪ್ರಾಂತ್ಯ ಸ್ಥಾಪನೆ ಸಂಬಂಧದಲ್ಲಿ ಉಳ್ಳವಿ ಸುವ ಯಾವ ಪ್ರತ್ಯೇಯ ಬಗ್ಗೆಯೂ ತೀರ್ಮಾನಕ್ಕೆ ಬರಲಿಲ್ಲ ಆದರೂ ಆಂಧ್ರಪ್ರಾಂತ್ಯ ಸ್ಥಾಪನೆ ಕಾರ್ಯವನ್ನು ತ್ವರೆಗೊಳಿಸುವುದು ಅಗತ್ಯವೆಂಬ ಬಗ್ಗೆ ಬಹು ಮತಾಭಿಪ್ರಾಯ ಕಂಡುಬಂತು.

ಮದ್ರಾಸಿನ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರ್ಯರು ಮತ್ತು ಆಂಧ್ರ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಸಂಜೀವರೆಡ್ಡಿಯವರೂ ಸಮಿತಿಯ ಮುಂದೆ ತಮಿಳರ ಮತ್ತು ಆಂಧ್ರರ ಅಭಿಪ್ರಾಯಗಳನ್ನು ವಿವರಿಸಿದರು

ತಾತ್ಕಾಲಿಕವಾಗಿ ಸಹ ಮದರಾಸಿನಲ್ಲಿ ಆಂಧ್ರದ ರಾಜಧಾನಿ ಸ್ಥಾಪಿಸಲ್ಪಡಲಾಗದೆಂದು ಶ್ರೀ ಸಿ ರಾಜಗೋಪಾಲಾಚಾರ್ಯರು ಖಚಿತವಾಗಿ ತಿಳಿಸಿದರೆಂದೂ, ಆಂಧ್ರದ ರಾಜಧಾನಿ ಮದ್ರಾಸಿನಲ್ಲೇ ಇರಬೇಕೆಂದು ಶ್ರೀ ಸಂಜೀವರೆಡ್ಡಿಯವರು ಅಪೇಕ್ಷೆ ತೀವ್ರವಾಗಿ ವಾದಿಸಿದರೆಂದೂ ತಿಳಿದುಬಂದಿದೆ

ಬೆಳಿಗ್ಗೆ ಮತ್ತು ಮಧ್ಯಾಹ್ನ ಎರಡುಹೊತ್ತೂ ಸಮಿತಿ ಸೇರಿದ್ದು ವೆಪ್ಪಸಪಲ್ಲಿ ಮತ್ತು ಕಾಂಗ್ರೆಸ್ ಸಂಸ್ಥೆಗೆ ಸಂಬಂಧಿಸಿದ ಹಲವು ವಿಚಾರಗಳನ್ನೂ ಸಹ ಪರಿಶೀಲಿಸಿತು

ಕಾಂಗ್ರೆಸ್ಸಿನೊಡನೆ ಇತರ ಪಕ್ಷಗಳ ಸಜಕಾರ

ಇತ್ತೀಚೆಗೆ ತಾವು ಪ್ರಜಾ ಸೋಷಿಯಲಿಸ್ಟ್ ಪಕ್ಷದ ನಾಯಕರಾದ ಶ್ರೀ ಜೈಪ್ರಕಾಶ ನಾರಾಯಣ್, ಆಚಾರ್ಯ ನರೇಂದ್ರದೇವ್ ಇವರೊಡನೆ ನಡೆಸಿದ ಚರ್ಚೆಯ ವಿವರಗಳನ್ನು ಕಾಂಗ್ರೆಸ್ ಅಧ್ಯಕ್ಷರು ಸಮಿತಿಗೆ ತಿಳಿಸಿದರು

ಕೋಮುವಾರು ಮತ್ತು ಇತರ ಹಿಂಸಾತ್ಮಕ ಚಳುವಳಿಗಳನ್ನು ಮಟ್ಟಹಾಕುವ ಬಗ್ಗೆ ಈ ಎರಡು ಪಕ್ಷಗಳು ಸಹಕರಿಸುವ ವಿಚಾರವಾಗಿ ಮಾತುಕತೆಗಳು ನಡೆದಿದ್ದವು. ಇದಲ್ಲದೆ ಆರ್ಥಿಕ ಕಾರ್ಯಕ್ರಮದ ಸಂಬಂಧದಲ್ಲಿ ಸಹ ಸಹಕಾರ ಸಾಧ್ಯವೇ ಎಂಬುದನ್ನು ವಿಮರ್ಶಿಸಲಾಗಿತ್ತು ಎಲ್ಲ ವಿಚಾರಗಳಲ್ಲೂ ಈ ಎರಡು ಪಕ್ಷಗಳವರಲ್ಲಿ ಒಟ್ಟು ಎಕಾಭಿಪ್ರಾಯ ಕಂಡು ಬಂದಿತೆಂದೂ ಅವರೊಡನೆ ಸಹಕರಿಸುವ ಸಂಭವ ಹೆಚ್ಚೆಂದೂ ಕಾರ್ಯದರ್ಶಿ ಶ್ರೀ ಬಲವಂತರಾಯ್ ಮೆಹತಾ ತಿಳಿಸಿದರು

ಮುಂದಿನ ಹೆಜ್ಜೆ ಪ್ರಜಾ-ಸೋಷಿಯಲಿಸ್ಟರನ್ನು ಅವ ಲಂಬಿಸಿರುವುದೆಂದು ಸಹ ಅವರು ತಿಳಿಸಿದರು

ಮೈಸೂರು ಮಂತ್ರಿಗಳಲ್ಲಿ ಮತ್ತು ಶಾಸನಸಭಾ ಸದಸ್ಯರಲ್ಲಿ ವಿನ್ನಪ

ಬಳ್ಳಾರಿ ಜಿಲ್ಲಾ ಕರ್ನಾಟಕ ಕ್ರಿಯಾ ಸಮಿತಿಯಿಂದ

ಮೈಸೂರು ಮಂತ್ರಿಗಳು ಹಾಗೂ ಶಾಸನಸಭಾ ಸದಸ್ಯರಲ್ಲಿ ಬಳ್ಳಾರಿ ಜಿಲ್ಲಾ ಕರ್ನಾಟಕ ಕ್ರಿಯಾ ಸಮಿತಿಯು ಈ ಕೆಳಗಿನಂತೆ ಬಿನ್ನವಿಸಿಕೊಂಡಿದೆ

ಆಂಧ್ರ ರಾಜ್ಯ ನಿರ್ಮಾಣವಾದದೇಕೆಂಬ ಕೇಂದ್ರ ಸರ್ಕಾರದ ನಿರ್ಧಾರದಿಂದ, ಬಳ್ಳಾರಿಯ ಭವಿಷ್ಯವೇನು ಎಂಬ ಪ್ರಶ್ನೆ ಕರ್ನಾಟಕದ ಮುಂದೆ ಬೃಹದಾಕಾರವಾಗಿ ನಿಂತಿದೆ! ಪ್ರತಿದಿನವೂ ಕನ್ನಡಿಗನ ಹೃದಯದಲ್ಲಿ ಕುದಿ ದೇಳುತ್ತಿರುವ ಪ್ರಶ್ನೆ ಇದೇ ಒಂದು. ಬಳ್ಳಾರಿಯ ಮುಂದಿನ ಗತಿಯೇನು?

ಆಂಧ್ರರು ಇತ್ತೀಚೆಗೆ ಜಿಲ್ಲೆಯನ್ನು ಆಂಧ್ರ ರಾಜ್ಯಕ್ಕೆ ಸೇರಿಸ ಬೇಕೆಂದು ದುರಾಗ್ರಹ ಮಾಡುತ್ತಿದ್ದಾರೆ! ತಮಿಳರು ಬಳ್ಳಾರಿಯನ್ನು ಮದ್ರಾಸ ರಾಜ್ಯದಲ್ಲಿ ಉಳಿಸಿಕೊಳ್ಳಲು ನಿರಂತರವಿಸುತ್ತಿದ್ದಾರೆ ಇಂಥ ದುರ್ಧರ ಪ್ರಸಂಗದಲ್ಲಿ ಈ ನ್ಯಾಯವನ್ನು ಏಗೆ ಹರಿಸಲೆಂದೇ ಳಲಿದ ನ್ಯಾಯಾ ಮೂರ್ತಿ ವಾಂಚೂ ಅವರು, ಬಳ್ಳಾರಿ ಜಿಲ್ಲೆಯನ್ನು ಆಂಧ್ರ ದಲ್ಲಿಯೇ ಸೇರಿಸಬೇಕೆಂದು ಸಿಫಾರಸು ಮಾಡಿರುವುದಾಗಿ ತಿಳಿದು ಬರುತ್ತಿದೆ!

ಈ ಸಂಕಟದ ಸಮಯದಲ್ಲಿ ಅಚ್ಚ ಕನ್ನಡ ಜಿಲ್ಲೆಯಾದ ಬಳ್ಳಾರಿ ಗತಿ ವಿಣಾಗಬೇಕು? ಕರ್ನಾಟಕದ ಇತಿಹಾಸ, ಸಾಹಿತ್ಯ, ಸಂಸ್ಕೃತಿಯಲ್ಲಿ ಅತ್ಯಾವಶ್ಯವಾದ ಪಾತ್ರವನ್ನು ವಹಿಸಿ ಕರ್ನಾಟಕಕ್ಕೆ ಅತಿಪ್ರಾಯವಾದ ಬಳ್ಳಾರಿ ಜಿಲ್ಲೆ ಕರ್ನಾಟಕಕ್ಕೆ ಏರವಾಗಬೇಕೆ? ತಾಯಿ ಮಕ್ಕಳಂತೆ, ಅಣ್ಣ ತಮ್ಮಂದಿರಂತೆ ಸಾಂಸ್ಕೃತಿಕವಾಗಿ ದಾಖಲೆ ಕರ್ನಾಟಕದ ವಿಶಾಭ್ಯ ಅಂಗವಾದ ಬಳ್ಳಾರಿ ಕರ್ನಾಟಕಕ್ಕೆ ದೊರಗಬೇಕೇ? ಇದೆಂತಹ ಭೀಕರ ಪ್ರಸಂಗ ಎಂಬು ದನ್ನು ನೀವೇ ಊಹಿಸಿಕೊಳ್ಳಬಹುದು.

ಬಳ್ಳಾರಿಯನ್ನು ಮೈಸೂರಿಗೆ ಸೇರಿಸಿಕೊಳ್ಳಿ ಎಂದು ಬಳ್ಳಾರಿಯ ಜನತೆ ಒಕ್ಕೊರಲಿನಿಂದ ಕೂಗಿ ಹೇಳುತ್ತಿದೆ. ಪೈನ್ಯಕಿಂದ ಕೇಳುತ್ತಿದೆ ಮೊನ್ನೆ ಮೊನ್ನೆಯವರೆಗೆ ಮೈಸೂರ ಹಾಯಿಯ ಒಡಲಲ್ಲಿದ್ದ ಬಳ್ಳಾರಿ ಯಾವುದೋ ಒಂದು ವಿಚಿತ್ರಾಸಿಕ ದುರ್ಘಟನೆಯಿಂದ ಮೈಸೂರಿನಿಂದ ಹೊರಗಾಯಿತು ಈಗ ಒಂದಾಗುವ ಸಮಯಬಂದಿದೆ ಅದಕ್ಕೆ ನೀವು ನೆರವಾಗಲಾರಿರಾ? ಆಂಧ್ರ ರಾಜ್ಯಾನಳೆ ತೆಯ ಶೌರ್ಯಕ್ಕೆ ತುತ್ತಾಗಿ ಹೇಳಹೆಸರಿಲ್ಲದೆ ಮುಳುಗಿ ಹೋಗುತ್ತಿರುವ ನಿಮ್ಮ ಬಾಂಧವರನ್ನು ಕೈಹಿಡಿದು ನೋಲಕ್ಕೆತ್ತಿಕೊಳ್ಳಲಾರಿರಾ? ಬಳ್ಳಾರಿಯನ್ನು ಮೈಸೂರಿ ನಲ್ಲಿ ಸೇರಿಸಿಕೊಳ್ಳಲು ಅನುಕೂಲವಾಗುವಂತೆ ಮೈಸೂರು ಶಾಸನಸಭೆಯಲ್ಲಿ ಒಂದು ಗೊತ್ತುವಳಿಯನ್ನು ತರಬೇಕೆಂದೂ ಅದಕ್ಕೆ ನಿಮ್ಮ ಬೆಂಬಲಕೊಡಬೇಕೆಂದೂ ನಿಮ್ಮನ್ನು ಬೇಡುತ್ತೇವೆ

ಬಳ್ಳಾರಿಯನ್ನು ಸೇರಿಸಿಕೊಳ್ಳುವುದರಿಂದ ಮೈಸೂರಿಗೆ ನಿವ್ವಪಾದೀತೆಂಬುದು ನಿರಾಧಾರಭೀತಿ ಬಳ್ಳಾರಿಯ ಖನಿಜ ಸಂಪತ್ತೂ (ಕಬ್ಬಿಣ, ಆಸ್ಬೆಸ್ಟಸ್, ಮ್ಯಾಂಗನೀಸ್, ಚಿನ್ನ, ಬೆಳ್ಳಿ, ತಾಮ್ರ) ವಿದ್ಯುತ್‌ಶಕ್ತಿಯೂ (ಜೋಗ ಭದ್ರಾ ವಿದ್ಯುತ್ ಕೇಂದ್ರದಿಂದ ೪೦,೦೦೦ ಕಿ ಡಬ್ಲು. ವಿದ್ಯುಚ್ಛಕ್ತಿ ಉತ್ಪಾದನೆ ಆಗುತ್ತದೆ) ಆಪಾರ ಉತ್ಪಾ ದನೆ (ಜೋಳ, ಭತ್ತ, ನವಣೆ,) ಗಳಿಂದ ಮೈಸೂರಿನ ಆಹಾರ ಕೊರತೆ ನೀಗುವುದಲ್ಲದೆ ಮೈಸೂರು ಸಂಪ ದ್ಭುಶ್ವಾಗುವುದು. ಕಾರಣ ನೀವು ಈ ಸಂದರ್ಭದಲ್ಲಿ ನಮ್ಮನ್ನು ಕೈಬಿಡಬೇಡಿರೆಂದು ನಾವು ಬೇಡುತ್ತೇವೆ.

ಸ್ವೀಕಾರ

ಬೀರೂರು ಶಕರವಾಸಿಗಳಾದ ಶ್ರೀ ಪ್ಯಾಟೆ ಬಿ ಸಿ. ವೀರಯ್ಯನವರೆ ಸುಪುತ್ರಿ ಕುಂ|| ಸೌ|| ಸುಶೀಲಮ್ಮನವ್ಳನು ಹೊಸದುರ್ಗ ತಾಲೂಕ ಅಲಘಟ್ಟದ ಮಳಿದ ಶ್ರೀ ಜಿ. ದಕ್ಷಿಣಾಮೂರ್ತಿಯವರ ಸುಪುತ್ರ ವೀ||

ಬಿ ಎಸ್.ಸಿ, ಎಂಬವರಿಗೆ ಕೊಟ್ಟು ಇದೇ ಫಲ್ಗುಣ ಶುಃ ೧೨ (ತಾ|| ೨೫-೩-೫೬) ಬುಧವಾರ ದಿನದ ಬೀರೂರಿಲ್ಲಿ ನಡೆದ ವಿವಾಹಸಮಯದಲ್ಲಿ ಧರ್ಮ ಪೋಷಕರಿಗಾಗಿ ಸಮರ್ಪಿಸಿದ 3 ರೂ ಗಳು ಶ್ರೀ ಎಂ ವಿ. ಮುದ್ದೀರಯ್ಯನವರ ದ್ವಾರಾ ತಲ್ಪಿರುತ್ತವೆ

ಬಳ್ಳಾರಿ ಡಿ|| ಹೊಳಗುಂದಿ ಗ್ರಾಮದ ಶ್ರೀ ಕಾಶೆ ಭೋಗಿ ಸಿದ್ಧಲಿಂಗಪ್ಪನವರು ತಮ್ಮ ಗೃಹದಲ್ಲಿ ಜರು ಶ್ರೀ ಕಾಶೀವಾಧಶಾಸ್ತ್ರಿಗಳವರ ಪುಣ್ಯತಿಥಿಯನ್ನು ಆಚರಿಸಿದ ಸಂತೋಷಾರ್ಥವಾಗಿ ಪ್ರಭಾಪೋಷಣೆಗೆ 2 ರೂ ಗಳನ್ನು ಸಮರ್ಪಿಸಿ ಳಿಸಿದ್ದಾರೆ

ಧಾರವಾಡ ಡಿ|| ನವುಂದ ಶಕರವಾಸಿಗಳಾದ ಶ್ರೀ ಚೆನ್ನಬಸಪ್ಪನವರು ಚೆನ್ನಿ ಇವರು ತಮ್ಮ ಪುತ್ರನ ವಿವಾಹ ಸಮಯದಲ್ಲಿ ಧರ್ಮಪೋಷಣೆಗಾಗಿ ಸಮರ್ಪಿ ಸಿದ 2 ರೂ ಗಳು ಕೊಣ್ಣೂರು ಹಿರೇಮಠದ ಶ್ರೀಗಳವರ ದ್ವಾರಾ ತಲ್ಪಿರುತ್ತವೆ

ಧಾರವಾಡ ಡಿ|| ರಾಣೇಬೆನ್ನೂರು ಶಕರದಲ್ಲಿ ನಡೆದ ಶ್ರೀ ರೇಣುಕಾಚಾರ್ಯರ ಜಯಂತಿ ಮಹೋತ್ಸವ ಸಮಯದಲ್ಲಿ ಧರ್ಮಪೋಷಣೆಗಾಗಿ ತೆಗೆಯಿಸಿದ 1 ರೂ. ಶ್ರೀ ಸೋ ಗದ್ದಿಗೆಮಠ ಇವರ ದ್ವಾರಾ ತಲ್ಪಿರುತ್ತವೆ

ಚಿಕ್ಕಮಗಳೂರು ಜಿಲ್ಲೆಗೆ ಸೇರಿದ ಸೋಮನಾಥಪುರದ ದಲ್ಲಿ ಶ್ರೀ ಬಸವೇಶ್ವರ ದೇವಸ್ಥಾನದ ಶಂಕುಸ್ಥಾಪನೆ ಸಮಯದಲ್ಲಿ ಧರ್ಮಪೋಷಣೆಗಾಗಿ ಸಮರ್ಪಿಸಿದ 1 ರೂ. ಶ್ರೀ ಬಿ ಮರುಳಪ್ಪ ಸ್ಕೂಲ ವಾಸ್ಕರ ಇವರ ದ್ವಾರಾ ತಲ್ಪಿರುತ್ತದೆ.

ಗಡಗ ಶಕರದಲ್ಲಿ ನೆರವೇರಿದ ಶ್ರೀ ರೇಣುಕಾ ಚಾರ್ಯರ ಜಯಂತಿ ಮಹೋತ್ಸವದಲ್ಲಿ ಧರ್ಮ ಪೋಷಣೆಗಾಗಿ ಅರ್ಪಿಸಿದ 1 ರೂ ಶ್ರೀ ಬಸವಣ ಗೌಡರ ಹೊಂಡಿಹಾಳ ಇವರ ದ್ವಾರಾ ತಲ್ಪಿರುತ್ತದೆ.

ಈ ವೇಳ್ಯಾಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿಶ್ಯಮಂಗಲವನ್ನೈಯರೆಂಬು ಹಾರೈಸುತ್ತೇವೆ.

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಎನ್ನದಿರಬಹುದಾದ ಪ್ರತಿಯೊಬ್ಬ ಶಿಷ್ಯನೂ ಸಿದ್ಧಾಂತಶಿಖಾಮಣಿಯನ್ನು ಓದಿರಲೇಬೇಕು ಎಂಬಷ್ಟರಮಟ್ಟಿಗೆ ಈ ಗ್ರಂಥವು ಪ್ರಾಮಾಣಿಕವಾಗಿ ಪ್ರಚಾರಕ್ಕೆ ಬಂದಿದೆ. ಈ ಗ್ರಂಥವನ್ನು ಬರೆದಿರುವ ಶ್ರೀ ಮರುಳಾರಾಧ್ಯರು ಸಾಮಾನ್ಯರಲ್ಲ. ಅವರು ಶ್ರೀಶೈಲದ ಜಗದ್ಗುರುಗಳಾಗಿದ್ದ ಪಂಡಿತಾರಾಧ್ಯರ ಶಿಷ್ಯರು. ಅವರು ಶ್ರೀಶೈಲದಲ್ಲಿ ಪಂಡಿತಾರಾಧ್ಯರ ಸಮಾಧಿಯ ಪಕ್ಕದಲ್ಲಿಯೇ ಕುಳಿತು ಈ ಗ್ರಂಥವನ್ನು ಬರೆದರೆಂದು ಹೇಳುತ್ತಾರೆ. ಈ ಗ್ರಂಥವು ಅಷ್ಟು ಪ್ರಾಮಾಣಿಕವಾಗಿ ಬರೆಯಲ್ಪಟ್ಟಿರುವುದರಿಂದಲೇ ಇದಕ್ಕೆ ಅಷ್ಟು ಮಹತ್ವವು ಬಂದಿದೆ. ಈ ಗ್ರಂಥವನ್ನು ಓದಿದವರಿಗೆ ಶಿವಾದ್ವೈತಸಿದ್ಧಾಂತದ ಸಾರವೆಲ್ಲವೂ ಕರತಲಾಮಲಕವಾಗುವುದು

REGISTERED No. M 2256 ॥ ಶ್ರೀ ಜಗದ್ಗುರು ಪಂಚಾಚಾರ್ಯಾಭ್ಯಾಂ ಪ್ರಸೀದಂತು ॥ REGISTERED No M 2256

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಕೀರ್ತಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಸಂಜಡಿಂಗೇಶ್ವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಚೋದಕರ್ । ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪ ವೀಲೋಕನಂ ॥

ಸಂಸ್ಥಾಪಕರು—ನಾಗನೂರು ಬೃಹನ್ಮಹಾಧ್ಯಕ್ಷರಾದ ವೇ॥ ಶ್ರೀ ಕಾಶೀನಾಥಶಾಸ್ತ್ರಿಗಳವರು

ವಾರ್ಷಿಕ ಚಂದಾ ೩ ರೂ] ಸಂಪಾದಕರು—ನಾಗನೂರು ಬೃಹನ್ಮಹಾಧ್ಯಕ್ಷರಾದ ಶ್ರೀ ಮಹಾದೇವಯ್ಯನವರು [ಏ ಪಿ ಖರ್ಚು ಸೇರಿ ೩ ರೂ ೬ ಆ

ಸಂಪುಟ ೨೬ | ಸೋಮವಾರ ತಾ॥ ೨೩ ನೇ ಮಾರ್ಚಿ ೧೯೩೩ | ಸಂಖ್ಯೆ ೬೫

ಪತ್ರವ್ಯವಹಾರ

[ಚಾಕ್ಕೀದಾರರು ಆಫೀಸ್ರ್ಯಾ ಪಡುವಲಿ ಖನಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಎಂಬ ವಿಷಯ ನಮ್ಮ ಸವರೂ ಲಕ್ಷ್ಯದಲ್ಲಿಡಬೇಕಲ್ಲದು —ಸಂ]

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವ ಕುಂಭಾಭಿ

ವರ್ಷ ಪದ್ಧತಿಯಂತೆ ಸೊಲ್ಲಾಪುರ ಜಿಲ್ಲಾ ಕುಂಭಾಭಿ ಗ್ರಾಮದ ಹಿ॥ ಬ್ರ॥ ಹೋಟೀಶ್ವರರ ಮಠದಲ್ಲಿ ಶಾ ಕ ೧೮೭೦ ಫಾ ಶು ೧೩ ಶುಕ್ರವಾರ ಗ್ರಾಮದ ಸಪ್ತಶ್ರ ಮಂಡಳಿಯಿಂದ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತ್ಯುತ್ಸವವು ಮಹಾ ವೈಭವದೊಂದಿಗೆ ನೆರವೇರಿಸಲ್ಪಟ್ಟಿತು ಅಂದು ಸ್ವಾತಃಕಾಲ ಸಾರಸೆಕಾರದಿಗಳಿಂದಲೂ, ರಂಭಾಕ್ತಂಭಗಳಿಂದಲೂ, ತಳಿರುತೋರಣ ಗಳಿಂದಲೂ ಅಲಂಕೃತವಾದ ಶ್ರೀಮದ ಮಧ್ಯ ಮಂಟಪದಲ್ಲಿ ಶ್ರೀ ಲಿಂಗೋದ್ಭವ ಮೂರ್ತಿಗೆ ವಿಧ್ಯುಕ್ತ ವಾಗಿ ರುದ್ರಾಭಿಷೇಕವೂ ಅಷ್ಟೋತ್ತರಬಿಲ್ವಾರ್ಚನೆಯೂ ಮಹಾನಿಂಗಾರತಿಯೂ, ಮಹಾನೈವೇದ್ಯವೂ ಪೂರೈ ಸಿದ ಬಳಿಕ ಮುಂದೆ ೧೧ ಘಂಟೆಗೆ ಪಾದಪೂಜೋ ತ್ಸವವೂ ಬಳಿಕ ಮಹಾಗಣಸಂತರ್ಪಣೆಯೂ ಅತ್ಯಂತ ಶ್ರದ್ಧಾಭಕ್ತಿಗಳಿಂದ ವಾಗಿ ಜರುಗಿತು

ಸಾಯಂಕಾಲ ಅನೇಕ ಬಿರುದುಗಳೊಂದಿಗೆ ನಂದಿ ಧ್ವಜಗಳ ಪೂರ್ವಕ ಪಲ್ಲಕ್ಕಿಯಲ್ಲಿ ಲಿಂಗೋದ್ಭವ ರೇಣುಕಮೂರ್ತಿಯು ಉತ್ಸವವು ವಿವಿಧ ವಾದ್ಯನೈಪುಣ್ಯಗಳಿಂದೊಡಗೂಡಿ ಗ್ರಾಮದ ಮುಖ್ಯ ಮುಖ್ಯ ಬೀದಿ ಗಳಲ್ಲಿ ಮೆರೆದು ಶ್ರೀ ಮಹಾಮಠಕ್ಕೆ ಒಂದು ತಲುಪಿತು ಅಕ್ಕಪಕ್ಕದಲ್ಲಿ ವಿವಿಧವಾಗಿ ಶೃಂಗಾರಿಸಲ್ಪಟ್ಟ ಶ್ರೀ ಮಠದ ವಿಶಾಲ ಮಧ್ಯಪ್ರಾಂಗಣದಲ್ಲಿ ಸಭಾ ಕಾರ್ಯಕ್ರಮವು ಅರಂಭವಾಯಿತು ಅಧ್ಯಕ್ಷರು ಹಿ॥ ಬ್ರ॥ ರುದ್ರಮುನಿ ಶಿವಾಚಾರ್ಯರು ಬ್ರ॥ ದಿಗ್ಗಾವಿ ಇವರಾಗಿದ್ದರು ನೆಡಲು ಕುಮಾರಿ ಉಮಾಲಾ ಮತ್ತು ಶಕುಂತಲಾ ಎಂಬ ಬಾಲಕಿಯರು ತಮ್ಮ ಮಂಜುಳವಾದ ಕಂಠದಿಂದ ಮನೋಹರವಾಗಿ ಭಗವತ್ಪ್ರಾರ್ಥನೆಯನ್ನು ಮಾಡಿದರು. ಒಳಿಕ ಜಯದೇವಿ, ಕುಂ॥ ಸೌ॥ ಕಲಾವತಿ, ಕುಂ॥ ಉಮಾ ಎಂಬವರು ಶ್ರೀ ಗುರುವಿನ ಮಹತ್ವ ಆದರಲ್ಲೂ ಆಧ್ಯಗುರುಗಳಾದ ಜಗದ್ಗುರು ರೇಣುಕಾ ಚಾರ್ಯರ ದಿವ್ಯೋಪದೇಶದವರಗಳಾದ ಗುದುಗೀತೆಗಳನ್ನು ಸುಮಧುರವಾಗಿ ಹಾಡುತ್ತ ಸಂಸಾದನ್ನು ಮಾಡಿದ ರಲ್ಲಿಕೆ ಆಶೆಗೆ ಭವ್ಯವೂ ಪವ್ಯವೂ ಆದ ಆರತಿಯ.ಮ್ಮ ಬೆಳಗುತ್ತ ಹಾಡುವ ಇವರ ಜಯಜಯ ಗೀತೆಯು ಸರ್ವ ಸಜ್ಜನರಿಗೂ ಆಶಂಸೆಗಳುಕ್ತಿತ್ತು ಜಯದೇವಿ ಳಂ॥ ಸೌ॥ ಹೀಗಾ ಎಂಬವರೂ ಅಂದಿನ ಜಯಂತೀ ಪರವಾದ ಸಂತಾಷವನ್ನು, ಕುಂ॥ ಮಹಾದೇವಿ ಎಂಬ ಬಾಲಕಿಯು "ಶ್ರೀ ಶಕ್ತಿಯಾಚಾರ್ಯಾಗ" ಎಂಬ ಗುರುಗೀತೆಯನ್ನು ಸರಸವಾಗಿ ಹಾಡಿ ಸಭೆಯಿಂದಿಸ್ಸನ್ನು ಸಂತೋಷಗೊಳಿಸಿದರು

ಇಂತಹ ಇತ್ಯ ಬೀಳಿಕೆಯಂಗಿಗೆ ತವರ ಉಭಯಿಕ ಲಕಲ್ಯಾಣಕರವಾದ ಮುಂದಿನ ಭವಿಷ್ಯವನ್ನು ಪರಿಪಾಲಿಸಿಕೊಳ್ಳುವುದಕ್ಕೂ ನಿಜವಾದ ನಾಗರಿಕತೆ ಶಿಷ್ಟಾಚಾರಗಳನ್ನು ಶಿದ್ಧಿಕೊಳ್ಳಲಿಕ್ಕೂ ನೈತಿಕ ಧಾರ್ಮಿಕ, ಸಾಮಾಜಿಕ ಶ್ರೇಷ್ಠತೆಗೆ ಪರಿವಾಠಗಳೊಂದಿಗೆ ಸಮತೆಯಿಂದಲೂ ಮಮತೆಯಿಂದಲೂ ಪ್ರೋತ್ಸಾಹವ ನ್ನೀಯುತ್ತಿರುವ ಶ್ರೇಯಸ್ಸು ಸದರಿ ಗ್ರಾಮದ ಮಾಕೃಶ್ರೀ ಗೌಡರ ಗೌರವ್ಯನವರಿಗೂ ಮತ್ತು ಕುಂ॥ ಸೌ॥ ತಾರಾದೇವಿ ಮಾತೃರತಿಯವರಿಗೂ ಸೇರತಕ್ಕದ್ದಾಗಿದೆ ಬಳಿಕ ಶ್ರೀ ಒಪನಂತಪ್ಪನವರೂ ಪಂ॥ ಗಂಗಾಧರ ಶಾಸ್ತ್ರಿಗಳವರೂ ವೇ॥ ನಾಗಭೂಷಣಕರ್ಮಠರೂ ಭಾಷಣ ಮಾಡಿದರು ಆಡಿಗೆ ಅಕ್ಕಸ್ಸರ ಭಾಷಣದೊಂದಿಗೆ ಧನ್ಯವಾದಗಳನ್ನ ಪಿಸುತ್ತ ಶಾಂತಿಪಾಠವಾಗಿ ಅಂದಿನ ಪಾಠಕಾರ್ಯಕ್ರಮವು ಜಯಜಯಕಾರದೊಂದಿಗೆ ಪೂರ್ತಿಗೊಳಿಸಲ್ಪಟ್ಟಿತು

ನಾಗನಾಥಕರ್ಮಾ

ಜಗಳ ಹಿರಿಯತ್ಯಾರು ?

ಹಿರಿಯರೆನ್ನುವ್ಯಾರು ಈ ಜಗದೀ ಮುದಿಯಾದ ವರು ಹಿರಿಯರೇ ॥೪॥

ಕೌಪೀನಕಾಷಾಂಬರಾಕಾರಿ ಮೋಹಕಾತಿಸುವ ಕಪಟಿ ಗಳು ಹಿರಿಯರೇ । ಪಾಪಸಿಗೆಂದು ಜಗದಿ ಜಾಲ ವಿರ್ದರಿ ಮೆರೆವ ಗೂಬು ರು ಹಿರಿಯರೆ ॥೧॥

ಮೇದಿನಿಯೊಳು ಹಾದರವ ಸುದ್ದಿಗಳ ಆದರದಿ ಕೇಳುವರು ಹಿರಿಯರೆ । ಮಾದಕಗಳಿಗನ್ಯ ಹೆಸರಿಟ್ಟು ಜನರ ದುರ್ಮಾರ್ಗರೆಳೆಯುವರು ಹಿರಿಯರೆ ॥೨॥

ನಡೆ ಬಾಗಿ ಕುರುಡರಾಗಿ ಬಡನಡುಬುರೆಯರ ಮೋಹಿಪರು ಹಿರಿಯರೆ । ಥಂಡರಾಗಿ ಚಂಡಿತನದಿ ಕಂಡ ಛಿಯಪರೊಳು ರಮಿಸುವ ಸ್ತ್ರೀಯರು ಹಿರಿಯರೇ ॥೩॥

ಅರಿಮೀಸೆಗಳ ಬಟ್ಟು ಹೆದರ ಹಣವನು ಹರಣ ಗೈಯುವರು ಹಿರಿಯರೆ । ಪರರ ಸುಖದುಃಖವರಿಯದೆ ಕೇಡು ಒಗೆದು ಮೀಸೆ ಸಿಡಿಸುವರು ಹಿರಿಯರೇ ॥೪॥

ಪರರನು ಮೋಸದಿಂದಲಿ ಕೊರಳಕೊಯ್ಯುವ ನರರಿ ಗಳು ಜಗದಿ ಹಿರಿಯರೆ । ಪರರ ಉಪಕಾರ ಸ್ಮರಿಸದೆ ಮೊಸಳೆಯಂತಿರುವ ಮಾನವರು ಹಿರಿಯರೇ ॥೫॥

ಥಂಬರೆಂಬ ಒಡಿವಾರದಿ ಬಲಹೀನರ ಬಳಲಿಸುವ ಹುಂಬರು ಹಿರಿಯರೆ । ಥಂಬತನಿಂದು ಕಟ್ಟಿಗುಣ ಬಚ್ಚಿಟ್ಟು ಅಲರತ ತಪ್ಪು ಹೇಳುವರು ಹಿರಿಯರೇ ॥೬॥

ಮುಂದಿಳಣ ಯೆಂದು ಹಿಂದೆ ನಿಂದಿಸುವ ಕಿತ ಗೇಡಿಗಳು ಹಿರಿಯರೇ । ಸಂದಿಗೊಂದಿಯೊಳು ಜಾರಿ ಬಿದ್ದಿರುವ ಮಂದೆ ನಿಜವೋನಿಸದರು ಹಿರಿಯರೇ ॥೭॥

ದೇಶಕೆ ಒಡೆಯನಿಮ್ಮನದಿ ನಿಜ ಯದಿದಿರಾ ಶಿಯಲಿ ನೆರೆವರು ಹಿರಿಯರೆ । ದೇಶಬಿಟ್ಟನ್ಯದೇಶವ ಗೆಲಿವ ದರಾರೆಯೆ ಳು ಜನರ ಕೊಲ್ಲುವರು ಹಿರಿಯರೇ ॥೮॥

ನ್ಯಾಯ ಬಿಟ್ಟನ್ಯಾಯವ ನೆಡಿಸು ಮನ್ಯರೆಂಬವರು ಜಗಕೆ ಹಿರಿಯರೇ । ನ್ಯಾಯಮಾರ್ಗದಿ ನಡೆವ ಸಜ್ಜು ರಿಹರಣಕಿಸುವ ಕೋತಿಗಳು ಹಿರಿಯರೇ ॥೯॥

ಕಂಡದ್ದು ಕಂಡಂತಿಹದೆರೆ ಮುಖದೊಳು ಕೆಂಡ ಕಾರುವರು ಹಿರಿಯರೇ । ಗಂಡನು ತಾನೆಂದು ಅಗಣಿತ ತಪ್ಪುಮಾಡಿ ತನ್ನ ಮೂಗುಮೇಲೆಂಬುವರು ಹಿರಿಯರೇ ॥೧೦॥

ಸಂತೆಯೊಳು ಶಾಸ್ತ್ರವ ಜನರಿಗೆ ಬೋಧಿಸುವ ಮಂದ ಮತಿಗಳು ಹಿರಿಯರೇ । ಇಂಥಾ ಪುಮ್ಮಾಗರ್ವ ತ್ಯಜಿಸಿ ಸುಮಾರ್ಗಕ್ಕೆ ತರುವ ಶ್ರೀಗುರು ರೇಣುಕನು ಹಿರಿಯ ನಲ್ಲನೆ ! ೧೧॥

ಸುಜನವಿಧೇಯ
ಹೆಚ್ ಒಪನಂತಪ್ಪ ಮಾಸ್ತರು,
ಚಾರೆಕಾಪ್ಪ ತಾ। ಸೊರಬ

ಪೌರ್ಣಿಮಾಧಿಸಮೂರಂಭ್ಯ ಬೇಲೂರು

ಬಿಜಾಪುರ ಜಿಲ್ಲಾ ಬಾದಾಮಿ ತಾಲೂಕ ಪೈಕಿ ಬೇಲೂರು ಗ್ರಾಮದ ಹಿರಿ ಮಹದಪ್ಪ ಕೃ॥ ಶ್ರೀ॥ ಜರ ಪಟ್ಟ ಶಿದ್ಧಲಿಂಗಶಿವಾಚಾರ್ಯರು ಹರೀನ ಕ ಪೆದವಟ್ಟು ಇವರ ಪುಣ್ಯತಿಥಿಯು ಶ್ರೀ ಪಟ್ಟದ ಪದ್ಧರಿಕಾಚಾರ್ಯ ಅರಕೆರೆ ಹಿರೇಮಠ ಮಂಗಳೂರು ಇವರ ನೇತೃತ್ವದಲ್ಲಿ ತಾ॥ ೧೧ ಜಿ ೧೯೩೩ ಫಾಲ್ಗುಣ ಬ। ೧೧ ಬುಧವಾರ ಸ್ವಾತಃಕಾಲ ಸದರಿ ಸ್ವಾಮಿಗಳ ಭಾವಚಿತ್ರಕ್ಕೆ ಪೋಡ ಶೋಪಚಾರ ಪೂಜೆಯು ವೇ॥ ಮಹಲಿಂಗಾರ್ಯರು ಹಿರೇಮಠ ಬೇಲೂರ ಇವರ ವೈದಿಕತ್ವದಲ್ಲಿ ಅತ್ಯಂ ವೈಭವದಿಂದ ನೆರವೇರಿತು ಮಧ್ಯಾಹ್ನ ಭೂರಿ ಗಣ ರಾಧನೆ ನಡೆದನಂತರ ಮಹಾಮಂಗಳಾರತಿಯೊಡ ಭಾವಚಿತ್ರದ ಪೂಜೆಯು ವಿಸರ್ಜಿಸಲ್ಪಟ್ಟಿತು

ವೇ॥ ಶರಣಯ್ಯ ಷಡಕ್ಷರಯ್ಯ ಹಿರೇಮಠ
ಬೇಲೂರು

ರಕ್ಷದ ಪ್ರಧಾನಿಯ ಹೇಳಿಕೆ

ಶ್ರೀಮತ್ ಪಟ್ಟಿಮಗಳ ಭಿಕ್ಷೆಯಿಯಿಟ್ಟು ಶಾಂತಿಯು ನಾದ ಸಂಘಾಪದ ಮೂಲಕ ಬಗೆಹರಿಸಬಹುದು—ಎಂಬ ರಕ್ಷದ ಪೂರ್ವಪ್ರಧಾನಿ ಮಿ॥ ಜಾರ್ಜ್ ಮಾಲೆ ಕೋವ್ಸ್‌ರವರು ಇತ್ತೀಚಿಗೆ ಹೇಳಿಕೆಯನ್ನು ಅಮೆರಿಕಾ ನ್ಯೂಸ್ ಏಜೆನ್ಸಿಯವರು ಫೂಲಂಕಷವಾಗಿ ಪ್ರಚಿಸಿರುವ ಕ್ಕಿಸ್ಕಾರೆ.

ಪಂಚಾಚಾರ್ಯಪ್ರಭಾ

೧೯೫೩ ನೆಯ ಮಾರ್ಚ್ ತಾ॥ ೨೩ ನೇ ಸೋಮವಾರ

ಆಚಾರ್ಯರೂ ಋಷಿಗಳೂ

ಮಾನವೋದ್ಧಾರವೇ ಮುಖ್ಯಧ್ಯೇಯವುಳ್ಳ ಹಿಂದಿನ ಮಹರ್ಷಿಗಳಾ ಆಚಾರ್ಯರೂ ಪ್ರಸಂಭೋದ್ಧಾರಕ್ಕಾಗಿ ಒಂದೊಂದು ಸಲ ಗುರುಲಿಂಗ ಜಂಗಮ ರೂಪದಲ್ಲಿ ಒಂದೊಂದು ವಿಧವಾದ ಧರ್ಮವನ್ನು ಅನುಷ್ಠಿಸಿರುತ್ತಾರೆ ಅವುಗಳಲ್ಲಿ ಅನೇಕ ಧರ್ಮಗಳು ವೇದವಿಹಿತವಾದ ಮಾರ್ಗವನ್ನು ಅನುಸರಿಸಿರಬಹುದು ಕೆಲ ಧರ್ಮಗಳು ವಿರುದ್ಧಮಾರ್ಗವನ್ನೂ ಅನುಸರಿಸಿಯೂ ಇರಬಹುದು ಅವರು ಆ ಷ್ಟಿಸಿದ ಸಡೆನುಡಿಗಳೆಲ್ಲವೂ ಅಲ್ಲಜ್ಞರಿಂದ ಮಾನವರಿಂದ ಅನುಷ್ಠಿಸಲ್ಪಡಲು ಸಾಧ್ಯವಿಲ್ಲ ಹಿಂದಿನ ಆಚಾರ್ಯಾದಿ ಮಹರ್ಷಿಗಳು ಅಧಿಕಶಕ್ತಿಯುಳ್ಳವರಾದುದರಿಂದ ಅಧರ್ಮದಿಂದುಂಟಾಗುವ ಕಷ್ಟಗಳನ್ನೂ ದರ್ಮದಿಂದುಂಟಾಗುವ ಸುಖಗಳನ್ನೂ ಪ್ರಸಂಚಿದ ಮಾನವರಿಗೆ ತೋರಿಸುವುದಕ್ಕಾಗಿ ಒಂದೊಂದು ಸಮಯದಲ್ಲಿ ಬೀಭತ್ಸ ಕರಗಳಾದ ಧರ್ಮವಿರುದ್ಧ ಮಾರ್ಗದಲ್ಲಿ ಕಾಲಿಟ್ಟಿದ್ದರೂ ಅಂಥ ಅಧರ್ಮವ ಲೇಪವು ಅವರಿಗೆಂದೂ ಸೋಂಕ ಲಾರದು

ಆಚಾರಾದಿಮಹರ್ಷಿಗಳ ಮನಸ್ಸು ಅಲ್ಪಜ್ಞರಾದ ಮಾನವರಂತೆ ಮೋಹಪಾಶದಿಂದ ಬಂದಿಸಲ್ಪಡದೆ ಕೇವಲ ಪರಮಾತ್ಮನೊಬ್ಬನಲ್ಲಿಯೇ ವಿಲೀನವಾದುದರಿಂದಲೂ ಸ್ವಭಾವ ಪರಿಶುದ್ಧವಾದುದರಿಂದಲೂ ಲೀಲಾಮಾತ್ರದಿಂದ ನಟಿಸುತ್ತಿರುವ ಇಂಥ ಅಸಹ್ಯಾದ ಬಾಹ್ಯಕೃತಿಗಳು ಅವರನ್ನೆಂದೂ ಬಾಧಿಸಲಾರವು ಪ್ರಸಂಚತ್ತು ಭಿನ್ನ ಭಿನ್ನ ಸ್ವಭಾವವುಳ್ಳವಾದ ದರಿಂದ ಹಿಂದಿನ ಮಹರ್ಷಿಗಳು ಆಯಾಯ ಮಾನವರ ಇಚ್ಛಾನುಸಾರವಾದ ಮರ್ಯಾದ್ಯೆಯೇ ಪ್ರವೇಶಿಸಿ ಕಲವು ಸಮಯದಲ್ಲಿ ಭೀತಿಯನ್ನೂ ಕೆಲವು ಸಮಯದಲ್ಲಿ ಪ್ರೀತಿಯನ್ನೂ ತೋರಿಸುತ್ತಿರುವ ಅಧರ್ಮವೆಂಬ ಕ್ರೂರಮೃಗವನ್ನು ನಾಶಗೊಳಿಸಿ ಪ್ರಪಂಚದಲ್ಲಿ ವೇದಧರ್ಮವನ್ನು ಪ್ರತಿಷ್ಟೆಗೊಳಿಸುತ್ತಿರುವ ಹಾಗೆ ಜಿಂದಿನ ವ ಹರ್ಷಿಗಳು ಮಿಶ್ರವಾದ ಧರ್ಮಾಧರ್ಮಗಳನ್ನು ತಾದಾತ್ಮ್ಯಸಂಬಂಧದಿಂದ ಆನುಷ್ಟಿಸಿ ಅವುಗಳಿಂದಾಗುವ ಸುಖದು ಖಗಳು ಸ್ಪೃಸ್ಟವಾಗಿ ಪಡಿಸದೆ ಹೋಗಿದ್ದಲ್ಲಿ ನಂಬಂಡ ಮಾನವರಿಗೆ ಇದು ಧರ್ಮಮಾರ್ಗವು ಅಧರ್ಮಮಾರ್ಗವು ಎಂಬ ವಿವೇಚನೆಯೇ ಹುಟ್ಟಿದೆ ಅಧರ್ಮವನ್ನು ಧರ್ಮವನ್ನಾಗಿಯೂ ಧರ್ಮವನ್ನು ಅಧರ್ಮವನ್ನಾಗಿಯೂ ತಿಳಿದು ನಾನಾ ವಿಧಗಳಾದ ಕಷ್ಟಗಳಿಗೆ ಗುರಿಯಾಗಬೇಕಾಗಿದ್ದಿತು ಪ್ರಪಂಚವಿಲ್ಲಿ ರಾಜಾಧಿಕಾರಿಗಳಿಗೆ ಒಬ್ಬ ಕಳ್ಳನನ್ನು ಪತ್ತೆ ಮಾಡಬೇಕಾದರೆ ಅನೇಕ ಮಾರ್ಗಗಳುಂಟು ಒಂದು ಸಮಯದಲ್ಲಿ ಅವರು ತನ್ನ ಸ್ವಭಾವಸಿದ್ಧವಾದ ಬೇಧದಿಂದಲೇ ಹೋಗಿ ಕಳ್ಳರನ್ನು ಬಂಧಿಸುತ್ತಾರೆ ಹಾಗಿಲ್ಲದಿದ್ದರೆ ಆ ಕಳ್ಳರಂತೆಯೇ ಆ ಅಧಿಕಾರಿಯನ್ನು ಕಾಲಾಂತರ ಸಮಯ ವರಿತು ಆ ಕಳ್ಳರನ್ನು ಹಿಡಿದು ಶಿಕ್ಷಿಸಿ ದುಷ್ಕರವಾದ ಕೆಳ ತನದಿಂದ ತಪ್ಪಿಸಲು ತಕ್ಕ ಉಪಾಯವನ್ನು ಕಲ್ಪಿಸುತ್ತಾರೆ ಕಳ್ಳಕಸವನ್ನು ಅಭಿನಯಿಸಿದ ಮಾತ್ರಕ್ಕೆ ಅವರೂ ಕಳ್ಳರೆನಿಸಲಾರರೆಪ್ಪೆ ಅದರಂತೆ ಮಹರ್ಷಿಗಳೂ ಆಚಾರ್ಯ ಭಗವತ್ಪಾದರೂ ಅಧರ್ಮಕೃತ್ಯಾದ ಶಿಷ್ಯರನ್ನು ಶಿಕ್ಷಿಸಿ ಅವರ ಅಧರ್ಮವನ್ನು ತಪ್ಪಿಸುವದಕ್ಕಾಗಿ ತಾವೂ ಅಧರ್ಮಿಗಳಂತೆ ಅಭಿನಯಿಸಿದ ಮಾತ್ರದಿಂದ ಅವರಿಗೆ ಅಧರ್ಮದ ಕಳಂಕವುಂಟಾಗಲಾರದು ಅಂಥ ಲೀಲಾವೇಷಧಾರಿಗಳಾದ ಮಹರ್ಷಿಗಳ ಮತ್ತು ಆಚಾರ್ಯರ ಮುಖ್ಯ ಧ್ಯೇಯವನ್ನು ತಿಳಿದುಕೊಳ್ಳಬೇಕಲ್ಲದೆ ಅವರು ಮಾಡಿದ ಅಧರ್ಮಕೃತ್ಯಗಳನ್ನು ತಿಳಿದುಕೊಳ್ಳಬಾರದು

ಹೀಗಿದ್ದರೂ ಪರಮಾತ್ಮಕಾರ್ಯದ ನಮ್ಮ ಭಾರತೀಯ ರಲ್ಲಿ ಕೆಲ ತಾಮಸಸ್ವಭಾವಿಗಳು ಈ ರಹಸ್ಯವಷ್ಟರಿಯದೆ ಮೈಯುಂಡ ವಿಜಾತಿಗಳಂತೆ ಹಿಂದಿನಿಂದ ತಾವು ನಡೆಯಿಸಿಕೊಂಡು ಬಂದ ಅಧರ್ಮವನ್ನೇ ಭದ್ರಪಡಿಸುವುದ ಕ್ಕಾಗಿ ತಾವು ಅಲ್ಪಜ್ಞರೂ ಅಧರ್ಮಿಗಳೂ ಆಗಿದ್ದರೂ ದೊಡ್ಡವರನ್ನು ಸರಿಗಟ್ಟಿಕೊಂಡು ಹಿಂದಿನ ಮಹರ್ಷಿಗಳು ಹಾಗೆ ಮಾಡಲಿಲ್ಲವೋ ಹೀಗೆ ಮಾಡಲಿಲ್ಲವೋ ನಾವೇಕೆ ಮಾಡಬಾರದು ದೊಡ್ಡವರು ಆಡಿಸಿದು ದೆಲ್ಲವೂ ನಮ್ಮಿಂದ ಗ್ರಾಹ್ಯವಲ್ಲವೋ ? ಎಂದು ಒಡಂಡಿ ಸುತ್ತ ಅಧರ್ಮಮಾರ್ಗದಲ್ಲಿ ಕಾಲಿಟ್ಟು ತಾವೂ ನರಕ ಗಾಮಿಗಳಾಗುವುದಲ್ಲದೆ ಇತರರನ್ನೂ ನರಕಕ್ಕೆ ಎಳೆದು ತ್ತಲಿರುವುದನ್ನು ನೋಡಿದರೆ ಕಲಿಸ್ಪಾಬಲ್ಯವು ಪ್ರತಿ ಯೊಬ್ಬ ಆಸ್ತಿಕಸ್ಪೃತಿಪಥವನ್ನೇರುವದು ದೊಡ್ಡವರ ಆಚರಣೆಗಳಲ್ಲಿ ಶಾಸ್ತ್ರಸಮ್ಮತವಾದ ಆಚರಣೆಗಳನ್ನು ಪರಿಗ್ರಹಿಸಬೇಕಲ್ಲದೆ ಶಾಸ್ತ್ರವಿರುದ್ಧವಾದ ಆಚರಣೆಯನ್ನು ಪರಿಗ್ರಹಿಸಬಾರದು ಹಾಗೆ ಪರಿಗ್ರಹಿಸಿದರೆ ಶಿಷ್ಯರಾ ರಾಗುವರೆಂಬುವ ವಿಷಯವಲ್ಲಿ ಶ್ರೀ ಶಂಕರಾಚಾರ್ಯರ ಇತಿಹಾಸವೊಂದುಂಟು ಇವರು ಒಂದು ದಿವಸ ಮಧ್ಯದ ಅಂಗಡಿಗೆ ಹೋಗಿ ಭಿಕ್ಷವೇಡಲಾಗಿ ಆತನು ಕೊಟ್ಟ ಮದ್ಯವನ್ನೇ ಭಕ್ತಿಯಿಂದ ಪರಿಗ್ರಹಿಸಿದರು ಶಿಷ್ಯರೂ ಸಹ ರುಚಿಕರವಾದ ಮದ್ಯಪಾನವನ್ನು ಮಾಡಿದರು ಗುರು ಗಳು ಶಂಕಸ್ಪರಾದ ಶಿಷ್ಯರ ಮನೋಧಾರ್ಢ್ಯಪರೀಕ್ಷೆಗಾಗಿ ಕುಲುಮೆಯಪನ ಬಳಿಗೆ ಹೋಗಿ ಭಿಕ್ಷವೇಡಲು ಅವನು ಕೊಟ್ಟ ಕುದಿಯುತ್ತಿರುವ ಕಬ್ಬಿಣರಸವನ್ನೇ ಪಾನಮಾಡ ಲಾಗಿ ಶಿಷ್ಯರೆಲ್ಲರೂ ಸಲಾಯನಮಾಡಿದರು ಆಗ ಗುರು ಗಳು ಅನುಚಕಕಾರಿಗಳಾದ ಶಿಷ್ಯರ ವಿಷಯದಲ್ಲಿ ಸಂತಾ ಪಗೊಂಡು ಶಾಪವನ್ನು ಕೊಟ್ಟರು ಈ ರೀತಿಯಾದ ಇತಿಹಾಸವಠ್ಯಾಲೋಚನೆಯೆಂದಲೂ ಪರಮಾಸ್ಪ್ಪಾದ ಶ್ರುತೀದೇವಿಯ ಆಜ್ಞೆಯಿಂದಲೂ ಮಹರ್ಷಿಗಳು ಮತ್ತು ಆಚಾರ್ಯಭಗವತ್ಪಾದರು ಶಾಸ್ತ್ರರೂಪದಿಂದ ವಿಧಿಸಿದ ಆಜ್ಞೆಯನ್ನು ಪರಿಪಾಲಿಸ ವುದರಲ್ಲಿ ಜಾಗರೂಕರಾಗಿರ ಬೇಕಲ್ಲದ ಯಾವುದೋ ಒಂದು ಕಾಲದಲ್ಲಿ ಆವರು ನಡೆಸಿದ ಅಧರ್ಮಾಚರಣೆಗಳನ್ನು ಅನುಸರಿಸ ಬಾರದು ಪ ತು ಕಲಿ ನಿಸ್ಪಿರರು ಅತ್ಯಸಾಹಸಿಕ್ಕಾಗಿ ತನ್ನು ಹೀನವಾದ ಅಧರ್ಮಮಾರ್ಗವನ್ನು ಸ್ಥಾಪಿಸಿ ಕೊಳ್ಳುವ ಭರದಲ್ಲಿ ಅಂಧ ಮಹಾತ್ಮರ ಉದಾಹರಣೆಯನ್ನು ತೆಗೆದುಕೊಂಡು ತಮ ಶ ಸ್ಪವ ಪ್ರಸಿದ್ಧರಾಗಲಾಗಿ ಪರೋಪಾಸ ವದಂತೂ ತುಂಬಾ ಅಸಹ್ಯರವೂ ಅಪಪ್ರಾಸ್ಯವೂ ಆಗಿವೆ ಇಂಥ ಜನರಿಗೆ ಪರಮಾತ್ಮನು ಸದ್ಬುದ್ಧಿಯ ನ್ನೀಯಲೆಂದು ಆಶಿಸುತ್ತೇವೆ

ನರ್ತಮಾನಸಂಗ್ರಹ

ಮಾರ್ಷಕೋವ್ ಮೌತ್ಸೆ ಮಾತುಕತೆ

ಏಸ್‌ಹೋನರ್ ಹೊಸನೀತಿಯ ಬಗ್ಗೆ

ಈ ಮಾಸಾಂತ್ಯದಲ್ಲಿ ಚೀನದ ನಾಯಕ ಮೌತ್ಸೆ ಟುಂಗ್‌ರವರು ರಷ್ಯದ ಪ್ರಧಾನಿ ಮಾರ್ಷಲ್‌ಕೋವ್‌ರವ ರನ್ನು ಗೆಟಿಸಮಾಡಿ ದೂರಪ್ರಾಚ್ಯ ರಾಷ್ಟ್ರಗಳ ಬಗ್ಗೆ ಏಸ್‌ಹೋನರ ರವರ ಇತ್ತೀಚಿನ ನೀತಿಯನ್ನು ಕುರಿತು ಮಾತುಕತೆ ನಡೆಸುವುದಾಗಿ ತಿಳಿದುಬಂದಿದೆ

ಹೈದ್ರಾಬಾದು ಸಲಹೆಗಾರರ ನ್ಥಾನ

ಇನ್ನು ಮುಂದೆ ರದ್ದು ಗೊಳಿಸುವುದೇ ?

ಈ ತಿಂಗಳು ಅಂತ್ಯದಲ್ಲಿ ಶ್ರೀ ಎಂ ಕೆ ನೆಲ್ಲೋಡಿ ಯವರು ನಿವೃತ್ತರಾದಮೇಲೆ ಹೈದ್ರಾಬಾದು ಸಂಸ್ಥಾನದ ಸಲಹೆಗಾರರ ಸ್ಥಾನ ರದ್ದಾಗುವುದೆಂದು ತಿಳಿದು ಬಂದಿದೆ ಈ ಬಗ್ಗೆ ಸಂಸ್ಥಾನಕ್ಕೆ ಭಾರತ ಸರ್ಕಾರದಿಂದ ಇನ್ನೂ ಅಧಿಕೃತವಾಗಿ ಸೂಚನೆಬಂದಿಲ್ಲ

ನಿಜಾಮರಿಗೆ ಪರಿಹಾರ

ವರ್ಷಕ್ಕೆ ೫ ಲಕ್ಷರೂ. ಕೊಡಬೇಕೆಂದು ತೆಹರೂರವರಿಗೆ ಸೂಚನೆ

ನಿಜಾಮರ ಖಾಸಗಿ ಜಮಿನ್ದಾಗುಗಳನ್ನು ಹೈದರಾಬಾದು ಸರ್ಕಾರದವರು ವಶಪಡಿಸಿಕೊಂಡಿದ್ದಾರೆಷ್ಟೆ. ಈ ಬಗ್ಗೆ ವರ್ಷಕ್ಕೆ ೫ ಲಕ್ಷರೂ ಗಳ ಪರಿಹಾರದ್ರವ್ಯವನ್ನು ನಿಜಾ ಮರಿಗೆ ಸಲ್ಲಿಸಬೇಕೆಂದು ಒಪ್ಪಂದವಾಗಿತ್ತು. ಈ ಒಪ್ಪಂ ದಕ್ಕೆ ಮಾತ್ರಕೆ ತೊಡಬೇಕೆಂಬುದಾಗಿ ಹೊಸ ದೆಹಲಿ ರವರು ಹೈದ್ರಾಬಾದು ಕಾಸಸಭೆಯ ಕಾಂಗ್ರೆಸ್ ಪಕ್ಷಕ್ಕೆ ಸೂಚಿಸಿಕೊಟ್ಟಿದ್ದಾರೆ. ಪರಿಹಾರ ದ್ರವ್ಯದ ಪ್ರಶ್ನೆ ಯಷ್ಟು ಮತ್ತೆ ಕೂಲಂಕಷವಾಗಿ ವಿಚಾರ ಮಾಡಬೇಕೆಂದೂ ಅಲ್ಪಿಯನರಿಗೆ ಪರಿಹಾರ ದ್ರವ್ಯವನ್ನು ಪಾವತಿ ಮಾಡಬೇಕಾಗಿಲ್ಲವೆಂದೂ ಕಾಂಗ್ರೆಸ್ ಪಕ್ಷದಲ್ಲಿ ತೀವ್ರ ಜೊರ ವಿದ್ದಿರಿಂದ, ಪಂ॥ ನೆಹರೂರವರು ಮೇಲ್ಕುಂಡಂತೆ ಸೂಚನೆ ಕೊಡಬೇಕಾಯಿತು

ತುಟ್ಟಿಭತ್ಯ ಸಂಬಳದಲ್ಲಿ ವಿಳ್ಯ

ಕೇಂದ್ರ ನೌಕರರಿಗೆ ಕೊಡಲು ಸರ್ಕಾರ ಒಪ್ಪಿಜೆ

